ಮಂಗಳವಾರ, ಜನವರಿ 10, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 10 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ದಿನಚರಿಯಲ್ಲಿ ಅಗತ್ಯ ಬದಲಾವಣೆ ಮಾಡಿಕೊಂಡರೆ ಚಳಿಗಾಲದಲ್ಲಿ ರೋಗಮುಕ್ತರಾಗಿರಲು ಸಾಧ್ಯ

ಆಳ-ಅಗಲ
ಫಲಿತಾಂಶ ಪ್ರಶ್ನಿಸಿ ದಾಂದಲೆ: ಪ್ರಜಾತಂತ್ರಕ್ಕೆ ಕುತ್ತು
ಬಲಿಜ ಸಮುದಾಯ ಪ್ರತಿಭಟನೆ 6
'ಕೆಟ್ಟ ಅಭಿರುಚಿಯ ಸುದ್ದಿ ಪ್ರಸಾರ ಬೇಡ' 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,747 ▲	18,101 ▲	₹58,050 (ಬೆಂಗಳೂರು)	₹71,000 (ಬೆಂಗಳೂರು)	82.35 ▲

ಒಳ ಪುಟಗಳಲ್ಲಿ
ಬಿಡುಗಡೆಯಾಗದ 'ಸಿದ್ದು ನಿಜ ಕನಸುಗಳು' ಕೃತಿ 6

ಡಿಎಂಕೆ-ರಾಜ್ಯಪಾಲ ರವಿ ನಡುವೆ ತಿಕ್ಕಾಟ 10
ಬಿಬಿಎಂಪಿ ಗುತ್ತಿಗೆದಾರರ ಪ್ರತಿಭಟನೆ 2
ಪ್ರತಿಭಟನೆ: ವಿಷ ಕುಡಿದ ಆಟೊರಿಕ್ಷಾ ಚಾಲಕ 4B

ಮೌಲ್ಯ ಶಿಕ್ಷಣ ಕುರಿತ ಸಭೆ: ಸರ್ಕಾರಕ್ಕೆ ಮಠಾಧೀಶರ ಸಲಹೆ

ಮಕ್ಕಳಿಗೆ ಸಾತ್ವಿಕ ಆಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣದಲ್ಲಿ ಭಗವದ್ಗೀತೆ ಅಳವಡಿಸಬೇಕು. ಶಾಲೆಗಳಲ್ಲೂ ಸಾತ್ವಿಕ ಆಹಾರ ನೀಡಬೇಕು ಮತ್ತು ಮಕ್ಕಳು ಇರುವಲ್ಲಿ ಪ್ರಾಣಿಗಳ ವಧೆ ಮಾಡಬಾರದು ಹಾಗೂ ಅಂಗಡಿಗಳಲ್ಲಿ ಮಾಂಸ ನೇತು ಹಾಕುವುದನ್ನು ನಿಲ್ಲಿಸಬೇಕು, ಪುನರ್ಜನ್ಮದ ಬಗ್ಗೆ ಶಿಕ್ಷಕರಿಗೆ ಮಾಹಿತಿ ನೀಡಬೇಕು....'

ಶಾಲಾ ಶಿಕ್ಷಣದಲ್ಲಿ ಮೌಲ್ಯ ಶಿಕ್ಷಣವನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೋಮವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿದ್ದ ದುಂಡು ಮೇಜಿನ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಮಠಾಧೀಶರು ನೀಡಿದ ಸಲಹೆಗಳು ಇವು.

ಸಾತ್ವಿಕ ಆಹಾರ ಬಗ್ಗೆ ಪ್ರತಿಪಾದಿಸಿದ ಸೋಂದಾ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, 'ಶಿಕ್ಷಣದಲ್ಲಿ ಭಗವದ್ಗೀತೆಯನ್ನು ಮುಕ್ತವಾಗಿ ಬೋಧಿಸಬೇಕು ಮತ್ತು ಶಾಲೆಗಳಲ್ಲಿ ಸಾತ್ವಿಕ ಆಹಾರ ನೀಡಬೇಕು. ಆಹಾರಕ್ಕೂ ವ್ಯಕ್ತಿತ್ವಕ್ಕೂ ಸಂಬಂಧ ಇದೆ. ಕೆಲವು ಆಹಾರಗಳು ಮಕ್ಕಳಲ್ಲಿ ನಕಾರಾತ್ಮಕ ಮನೋಭಾವವನ್ನು ಬೆಳೆಸುತ್ತವೆ. ಹೀಗಾಗಿ, ಶಾಲೆಗಳಲ್ಲಿ ಗೋಕ್ಷೀರ ಮತ್ತು ತುಪ್ಪ ನೀಡಬೇಕು. ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಹಾಲು ಮತ್ತು ತುಪ್ಪವನ್ನು ಹೆಚ್ಚು ಬಳಸಬೇಕು' ಎಂದು ಹೇಳಿದರು.

ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಮಾತನಾಡಿ, 'ಮಕ್ಕಳಿಗೆ ಸತ್ಯ, ಅಹಿಂಸೆ, ದಾನದ ಬಗ್ಗೆ ತಿಳಿವಳಿಕೆ ನೀಡಬೇಕು. ಮತ್ತೊಬ್ಬರಿಗೆ ಗೌರವ ನೀಡುವ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕಿದೆ' ಎಂದರು.

6ನೇ ಪುಟ ನೋಡಿ

ಮಾಂಸ ನೇತು ಹಾಕುವುದು ನಿಲ್ಲಲಿ

ಮಕ್ಕಳ ಮೇಲೆ ಹಿಂಸೆಯ ಪ್ರಭಾವವನ್ನು ಕಡಿಮೆ ಮಾಡಬೇಕಾಗಿದೆ. ಮಕ್ಕಳ ಮುಂದೆ ಪ್ರಾಣಿವಧೆ ಮಾಡಬಾರದು ಮತ್ತು ಮಾಂಸವನ್ನು ಅಂಗಡಿಗಳ ಮುಂದೆ ನೇತುಹಾಕುವುದನ್ನು ಸ್ಥಗಿತಗೊಳಿಸಬೇಕು ಅಥವಾ ಇದನ್ನು ಮರೆಮಾಚಬೇಕು

ವಿಶ್ವಪ್ರಸನ್ನತೀರ್ಥ ಸ್ವಾಮೀಜಿ
ಪೇಜಾವರ ಮಠ, ಉಡುಪಿ

ಧರ್ಮಾತೀತವಾಗಿ ಮೌಲ್ಯಗಳ ಬೋಧನೆಯಾಗಲಿ

ಮೌಲ್ಯಗಳನ್ನು ಧರ್ಮಾತೀತವಾಗಿ ಬೋಧಿಸಬೇಕು. ಬಿ.ಇಡಿ. ಹಂತದಲ್ಲೇ ಮೌಲ್ಯಯುತ ಶಿಕ್ಷಣ ನೀಡಬೇಕು. ಇದರಿಂದ ಶಿಕ್ಷಕರಾಗುವವರ ವ್ಯಕ್ತಿತ್ವದಲ್ಲೂ ಬದಲಾವಣೆ ತರಲು ಸಾಧ್ಯ. ಮಕ್ಕಳಲ್ಲಿ ಸಹಿಷ್ಣುತೆ ಮತ್ತು ಸಹಬಾಳ್ವೆ ಬಗ್ಗೆ ಅರಿವು ಮೂಡಿಸಬೇಕು

ರೆವರೆಂಡ್ ಪೀಟರ್ ಮಚಾಡೊ, ಆರ್ಚ್ ಬಿಷಪ್, ಬೆಂಗಳೂರು

ಶಿಕ್ಷಣ ಒಗ್ಗೂಡಿಸುವ ಕಾರ್ಯ ಮಾಡಲಿ

'ಮನುಷ್ಯರಲ್ಲಿ ಪ್ರಜ್ಞೆ ಅರಳಿಸದ ವಿದ್ಯೆಯಿಂದ ಯಾವುದೇ ಪ್ರಯೋಜನವಿಲ್ಲ. ತಂತ್ರಜ್ಞಾನದಿಂದ ಮನುಷ್ಯ ಸಂಬಂಧಗಳು ದೂರವಾಗುತ್ತಿವೆ. ಶಿಕ್ಷಣ ಎನ್ನುವುದು ಎಲ್ಲರನ್ನೂ ಒಗ್ಗೂಡಿಸಬೇಕೇ ಹೊರತು ವಿಭಜಿಸುವ ಕಾರ್ಯ ಮಾಡಬಾರದು. ಸಂಬಂಧಗಳನ್ನು ಗಟ್ಟಿಗೊಳಿಸುವ ಅಧ್ಯಾತ್ಮ ಅಥವಾ ನೈತಿಕ ಶಿಕ್ಷಣವನ್ನು ಹಂತ ಹಂತವಾಗಿ ಮಕ್ಕಳಿಗೆ ಕಲಿಸಬೇಕು

ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮಠ

ಪುನರ್ಜನ್ಮದ ಬಗ್ಗೆಯೂ ತಿಳಿಸಿ

'ಸಾವು ಮತ್ತು ಪುನರ್ಜನ್ಮದ ಬಗ್ಗೆ ವೈಜ್ಞಾನಿಕವಾಗಿ ಹುಬ್ಬಳ್ಳಿಯಲ್ಲಿ ಸ್ಥಾಪಿಸಿರುವ ವಸ್ತುಸಂಗ್ರಹಾಲಯಕ್ಕೆ ಶಿಕ್ಷಕರು ಭೇಟಿ ನೀಡುವಂತೆ ಸರ್ಕಾರ ಸಲಹೆ ನೀಡಬೇಕು. ಈ ವಸ್ತು ಸಂಗ್ರಹಾಲಯವನ್ನು ವೀಕ್ಷಿಸಲು ನಾಲ್ಕು ಗಂಟೆಗಳು ಬೇಕು'

ಬಸವರಾಜ ರಾಜಋಷಿ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ

600ಕ್ಕೂ ಹೆಚ್ಚು ಮನೆಗಳಲ್ಲಿ ಬಿರುಕು

ನವದೆಹಲಿ : ಭೂಕುಸಿತದಿಂದ ಮುಳುಗುತ್ತಿರುವ ಉತ್ತರಾಖಂಡದ ಜೋಶಿಮಠದಲ್ಲಿ 600 ಮನೆಗಳು ವ್ಯಾಪಕ ಬಿರುಕು ಬಿಟ್ಟಿರುವುದು ಉಪಗ್ರಹ ಸರ್ವೇಕ್ಷಣೆಯಲ್ಲಿ ಕಂಡುಬಂದಿದೆ. 7

'ಮೇಕೆದಾಟುವಿಗೆ ಅವಕಾಶ ನೀಡಲ್ಲ'

ಪ್ರಜಾವಾಣಿ ವಾರ್ತೆ

ಚೆನ್ನೈ: 'ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಜಲಾಶಯ ನಿರ್ಮಿಸಲು ಕರ್ನಾಟಕಕ್ಕೆ ಅವಕಾಶ ನೀಡುವುದಿಲ್ಲ. ನಿರ್ಮಾಣ ತಡೆಯಲು 'ಎಲ್ಲ ಅಗತ್ಯ' ಕ್ರಮವನ್ನು ಕೈಗೊಳ್ಳಲಾಗುತ್ತಿದೆ' ಎಂದು ತಮಿಳುನಾಡು ಸರ್ಕಾರ ಹೇಳಿದೆ.

ಪೆನ್ನಿಯಾರ್ ನದಿ ನೀರು ಹರಿವಿನ ದಿಕ್ಕನ್ನು ಅನಧಿಕೃತವಾಗಿ ತಿರುಗಿಸುವ ಕರ್ನಾಟಕದ ಕ್ರಮ ಕುರಿತ ವಿಚಾರಣೆಗೆ ನ್ಯಾಯಮಂಡಳಿಯನ್ನು ರಚಿಸಬೇಕು ಎಂದು ಸರ್ಕಾರ ಆಗ್ರಹಪಡಿಸಿದೆ.

ತಮಿಳುನಾಡು ವಿಧಾನಸಭೆ ಅಧಿವೇಶನದ ಮೊದಲ ದಿನ ಚಾಲನೆ ನೀಡಿ ಮಾತನಾಡಿದ ರಾಜ್ಯಪಾಲ ಆರ್.ಎನ್.ರವಿ ಅವರು, 'ಅಂತರರಾಜ್ಯ ನದಿ ವಿವಾದ ಪ್ರಕರಣಗಳಲ್ಲಿ ತನ್ನ ಹಕ್ಕು ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಇದೇ ಸಂದರ್ಭದಲ್ಲಿ ನೆರೆ ರಾಜ್ಯಗಳ ಜೊತೆಗೆ ಸ್ನೇಹಪರ ಬಾಂಧವ್ಯ ಹೊಂದಲು ಆದ್ಯತೆ ನೀಡಿದೆ' ಎಂದರು.

ಮೇಕೆದಾಟು ಅಣೆಕಟ್ಟು ಒಳಗೊಂಡಂತೆ ತಮಿಳುನಾಡಿನ ರೈತರ ಹಿತಾಸಕ್ತಿಗೆ ಧಕ್ಕೆ ಉಂಟು ಮಾಡುವ ಯಾವುದೇ ನಿರ್ಮಾಣ ಕಾರ್ಯಗಳಿಗೆ ರಾಜ್ಯ ಸರ್ಕಾರ ಅನುಮತಿ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೋಲಾರದಿಂದ ಸ್ಪರ್ಧೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಕೋಲಾರ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಿಂದಲೇ ಕಣಕ್ಕಿಳಿಯುವುದಾಗಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಘೋಷಣೆ ಮಾಡಿದರು. ಇದರೊಂದಿಗೆ ಹಲವು ತಿಂಗಳಿಂದ ಕ್ಷೇತ್ರ ಹುಡುಕಾಟದ ಕಸರತ್ತಿಗೆ ತೆರೆಬಿದ್ದಿದೆ.

ನಗರದ ಮಿನಿ ಕ್ರೀಡಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಕೋಲಾರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಈ ನಿರ್ಧಾರ ಪ್ರಕಟಿಸಿದರು. ಇದರೊಂದಿಗೆ ಬಾದಾಮಿ ಕ್ಷೇತ್ರಕ್ಕೆ ವಿದಾಯ ಹೇಳಿದಂತಾಗಿದೆ.

'ನಿಮ್ಮ ಪ್ರೀತಿ, ಅಭಿಮಾನವನ್ನು ತಿರಸ್ಕರಿಸಲು ಸಾಧ್ಯವೇ ಇಲ್ಲ. ಮುಂಬರುವ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಿಂದ ನಾನೇ ಕಾಂಗ್ರೆಸ್ ಅಭ್ಯರ್ಥಿ' ಎಂದು ಘೋಷಿಸಿದರು.

'ಹೈಕಮಾಂಡ್ ಒಪ್ಪಿಗೆ ಮೇಲೆ ನನ್ನ ನಿರ್ಧಾರ ಅವಲಂಬಿಸಿದೆ. ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಆಯ್ಕೆಗೆ ಒಂದು ಪ್ರಕ್ರಿಯೆ ಇದೆ. ನಾನೇ ಏಕಾಂಗಿಯಾಗಿ ಘೋಷಣೆ ಮಾಡಲು ಸಾಧ್ಯವಿಲ್ಲ. ಪಕ್ಷದಲ್ಲಿ ನನಗೆಂದೇ ವಿಶೇಷ ನಿಯಮ, ಸೌಲಭ್ಯ ಇಲ್ಲ. ಉಳಿದವರಂತೆ ನಾನು ಕೂಡ ಒಬ್ಬ' ಎಂದರು.

'ಜನರ ಆಶೀರ್ವಾದ ಇದ್ದರೆ ಮಾತ್ರ ರಾಜಕೀಯ ಮಾಡಲು ಸಾಧ್ಯ. ಚಾಮುಂಡೇಶ್ವರಿ ಕ್ಷೇತ್ರದಿಂದ ಐದು ಬಾರಿ, ವರುಣಾ ಕ್ಷೇತ್ರದಿಂದ ಎರಡು ಬಾರಿ ಸ್ಪರ್ಧಿಸಿದ್ದೇನೆ. ಸದ್ಯ ನಾನು ಬಾದಾಮಿ ಶಾಸಕ. ನನಗೆ ಕ್ಷೇತ್ರವೇ ಸಿಗುತ್ತಿಲ್ಲವೆಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ವರುಣಾದಿಂದಲೂ ಸ್ಪರ್ಧಿಸಿ ಎಂಬುದಾಗಿ ಅಲ್ಲಿನ ಜನರು ಒತ್ತಾಯಿಸುತ್ತಿದ್ದಾರೆ. ಬೆಂಗಳೂರಿನಿಂದ ಸಂಚರಿಸಲು ಹೆಲಿಕಾಪ್ಟರ್ ಕೊಡಿಸುವುದಾಗಿ ಬಾದಾಮಿ ಕ್ಷೇತ್ರದ ಜನರು ಹೇಳಿದ್ದಾರೆ' ಎಂದರು.

6ನೇ ಪುಟ ನೋಡಿ

#5-star safety rating applicable on Altroz only. *Terms and conditions apply. This offer is available on select models. Please contact nearest Tata Motors Passenger Vehicles dealership for more details. Images and illustrations are indicative and for information purposes only. Discount mentioned is at the discretion of Tata Motors Passenger Vehicles Limited. All Features/specifications are not available in all variants and may vary for different variants. Specifications/features are subject to change without prior information. Please consult an authorised Tata Motors dealer for latest information on features/specifications before deciding to place an order. Colours may vary due to printing limitations. Local taxes and Octroi extra. Avail of Tata Motors Finance and get funding benefits on Extended Warranty. All offers are at sole discretion of Tata Motors and can be changed by Tata Motors without any prior notice. Offer available till stocks last. Express finance scheme from Tata Motors Finance/Low DP scheme from select financers. Finance available at sole discretion of financier. Andriod Auto and Apple CarPlay are registered trademarks.

KEY MOTORS	KHT MOTORS	KROPEX AUTO	PRERANA MOTORS	ADISHAKTI CARS	SREE AUTO
Kanakapura Road, Mysore Road, Kanakapura City, Bannerghatta Road, Sunkadakatte Magadi Road, Nelamangala: 7506023980	Whitefield: 7506023988; Domlur, Kolar: 7506024006	Hosur Road, Koramangala, Sarjapur road, Mahadevapura: 7506024016	Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334	Hebbal: 7506023837; Dasarahalli: 9167982568	Tumkur, Tiptur, Kunigal, Chikkaballapur: 7506024318

ತೇಜಸ್ವಿನಿ ಅನಂತಕುಮಾರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಕೂಡಲಸಂಗಮದಲ್ಲಿ ಇದೇ 12ರಿಂದ 36ನೇ ಶರಣ ಮೇಳ ಹಮ್ಮಿಕೊಂಡಿದ್ದು’ ₹51 ಸಾವಿರ ನಗದು ಪುರಸ್ಕಾರ ಹೊಂದಿರುವ ‘ಬಸವಾತ್ಮಜೆ’ ಪ್ರಶಸ್ತಿಯನ್ನು ತೇಜಸ್ವಿನಿ ಅನಂತಕುಮಾರ್ ಅವರಿಗೆ ಪ್ರದಾನ ಮಾಡಲಾಗುವುದು’ ಎಂದು ಬಸವ ಧರ್ಮ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಹೇಳಿದರು.

‘ಜ.12 ರಂದು ರಾಷ್ಟ್ರೀಯ ಬಸವ ದಳದ 32ನೇ ಅಧಿವೇಶನ ನಡೆಯಲಿದೆ.

ಒಳಮೀಸಲಾತಿ ವಿಳಂಬ: ಚರ್ಚೆ

ಬೆಂಗಳೂರು: ‘ಪರಿಶಿಷ್ಟ ಜಾತಿಯವರಿಗೆ ಒಳಮೀಸಲಾತಿ ಕಲ್ಪಿಸುವ ಕುರಿತ ನ್ಯಾಯಮೂರ್ತಿ ಎ. ಜೆ. ಸದಾಶಿವ ಆಯೋಗದ ವರದಿ ಜಾರಿಗೆ ಸರ್ಕಾರ ವಿಳಂಬ ನೀತಿ ವಿರುದ್ಧ ಚರ್ಚಿಸಲು ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಜ.10 ಮತ್ತು 11ರಂದು ವಸಂತನಗರದ ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ’ ಎಂದು ಮಾದಿಗ ದಂಡೋರ–ಮಾದಿಗ ಮೀಸಲಾತಿ ಹೋರಾಟ ಸಮಿತಿ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯಾಧ್ಯಕ್ಷ ಬಿ.ನರಸಪ್ಪ ದಂಡೋರ, ‘ಎ.ಜೆ.ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡಬೇಕು. ಈ ಕುರಿತು ಚರ್ಚಿಸಲು ಕಾರ್ಯಕಾರಿಣಿ ಸಭೆಯಲ್ಲಿ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಕೇರಳ, ತಮಿಳನಾಡು ಮತ್ತು ಕರ್ನಾಟಕದ ಮಾದಿಗ ದಂಡೋರ ಸಮಿತಿಯ ಪದಾಧಿಕಾರಿಗಳು ಭಾಗವಹಿಸುವರು’ ಎಂದು ತಿಳಿಸಿದರು.

ನೈಋತ್ಯ ರೈಲ್ವೆ G20

ಆಸಕ್ತಿಯ ಅಭಿವ್ಯಕ್ತತೆ ಸೂಚನೆ ಸಂ. EOI-SWR-GSU-MYS ದಿನಾಂಕ: 04.01.2023

ವಿವಿಧ ಕಿರುಮೌಲ್ಯದ ಕೆಲಸಗಳಿಗಾಗಿ ಮೈಸೂರು ವಿಭಾಗದ ಗತಿ ಶಕ್ತಿ ಘಟಕದಲ್ಲಿ ಸಲಹಾ ಸೇವೆಗಾಗಿ ಆರ್ಕಿಟೆಕ್ಟ್ / ಆರ್ಕಿಟೆಕ್ಚರಲ್ ಫರ್ಮ್ ಅನ್ನು ಎಂಪಾನೆಲ್‌ಮೆಂಟ್ ಮಾಡಲು ಆಸಕ್ತಿಯ ಅಭಿವ್ಯಕ್ತತೆಯನ್ನು (ಇಓಐ) ಈ ಮೂಲಕ ಆಹ್ವಾನಿಸಲಾಗಿದೆ. ಮೈಸೂರು ವಿಭಾಗದ ಗತಿ ಶಕ್ತಿ ಘಟಕವು ನಿಲ್ದಾಣದ ಕಟ್ಟಡ, ಸೇವಾ ಕಟ್ಟಡ, ರೈಲ್ವೆ ಆಸ್ಪತ್ರೆ, ವಿಶ್ರಾಂತಿ ಗೃಹ ಮತ್ತು ಪ್ರಸ್ತುತ ಕಟ್ಟಡಗಳ ಸುಧಾರಣೆ ಸೇರಿದಂತೆ ಇತರ ಉಪಯುಕ್ತ ಕಟ್ಟಡಗಳಂತಹ ವಿವಿಧ ಕಾಮಗಾರಿಗಳನ್ನು ನಿರ್ವಹಿಸುವುದಾಗಿದೆ.

ಅರ್ಜಿದಾರರ ಅರ್ಹತೆ ಹಾಗೂ ಷರತ್ತುಗಳು:

ಎ) **ತಾಂತ್ರಿಕ ಸಾಮರ್ಥ್ಯ:** ಅರ್ಜಿದಾರರು ಕಳೆದ 12 (ಹನ್ನೆರಡು) ವರ್ಷಗಳಲ್ಲಿ ಅರ್ಜಿ ಸಲ್ಲಿಸುವ ದಿನಾಂಕದ ಹಿಂದಿನ ಕನಿಷ್ಠ 4 (ನಾಲ್ಕು) ಅರ್ಹ ಕಾರ್ಯಗಳನ್ನು ಕೈಗೊಂಡಿರಬೇಕು, ಅದರಲ್ಲಿ ಕನಿಷ್ಠ ಎರಡು ಯೋಜನೆಗಳು ರೈಲ್ವೆ ನಿಲ್ದಾಣ / ಸಾರ್ವಜನಿಕ ಕಟ್ಟಡ / ಸರ್ಕಾರಿ ಕಛೇರಿಗಳು ಇರುವಂತಿರಬೇಕು.

ಬಿ) **ಹಣಕಾಸಿನ ಸಾಮರ್ಥ್ಯ:** ಅರ್ಜಿದಾರರು ಅರ್ಜಿ ಸಲ್ಲಿಸುವ ದಿನಾಂಕದ ಹಿಂದಿನ 3 (ಮೂರು) ಹಣಕಾಸು ವರ್ಷಗಳಲ್ಲಿ ವೃತ್ತಿಪರ ಶುಲ್ಕದಿಂದ ವರ್ಷಕ್ಕೆ ಸರಾಸರಿ ರೂ. 5 ಲಕ್ಷ ಆದಾಯವನ್ನು ಪಡೆದಿರಬೇಕು.

ಸಿ) **ಪ್ರಮುಖ ಸಿಬ್ಬಂದಿಯ ಲಭ್ಯತೆ:** ಅರ್ಜಿದಾರರು ಕೆಳಗೆ ನಿರ್ದಿಷ್ಟಪಡಿಸಿದ ಅವಶ್ಯಕತೆಗಳನ್ನು ಪೂರೈಸುವ ಎಲ್ಲಾ ಪ್ರಮುಖ ಸಿಬ್ಬಂದಿಯನ್ನು ಒದಗಿಸಬೇಕು ಹಾಗೂ ಲಭ್ಯವಾಗುವಂತಿರಬೇಕು.

ಪ್ರಮುಖ ಸಿಬ್ಬಂದಿ	ವಿದ್ಯಾರ್ಹತೆ	ವೃತ್ತಿಪರ ಅನುಭವದ ಕಾಲ	ಅರ್ಹ ನಿಯೋಜನೆಗಳಲ್ಲಿರುವ ಅನುಭವ
ಮುಖ್ಯ ಆರ್ಕಿಟೆಕ್ಟ್	ಮಾಸ್ಟರ್ ಇನ್ ಆರ್ಕಿಟೆಕ್ಚರ್	15 ವರ್ಷಗಳು	ಅವರು ಕನಿಷ್ಠ 2 ನಿಯೋಜನೆಗಾಗಿ ಆರ್ಕಿಟೆಕ್ಚರಲ್ ಪ್ಲಾನಿಂಗ್ ಮೆಟ್ರೋ / ರೈಲ್ವೆ ನಿಲ್ದಾಣ, ಸಾರ್ವಜನಿಕ ಕಟ್ಟಡ, ಸೇವಾ ಕಟ್ಟಡ ಇವುಗಳನ್ನು ಮುನ್ನಡೆಸಿರಬೇಕು.
	ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್	20 ವರ್ಷಗಳು	

ನಿರೀಕ್ಷಿತ ಬಿಡ್‌ದಾರರು ಈ ವಿಷಯದ ಕೆಲಸಕ್ಕೆ ಸಂಬಂಧಿಸಿದಂತೆ ಇತರ ಮಾಹಿತಿಗಾಗಿ ದೂರವಾಣಿ ಅಥವಾ ಮೇಲ್ ಮೂಲಕ ಸಂಪರ್ಕಿಸಬಹುದು. **ಕೊಡುಗೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.01.2023**

ಹೆಸರು: ಬಿ. ರಾಮಸುಬ್ಬಯ್ಯ, ಹುದ್ದೆ: ಉಪ. ಸಿಪಿಎಂ/ಇಂಜಿನಿಯರಿಂಗ್/ಜಿಎಸ್‌ಯು/ಎಂವೈಎಸ್, ದೂರವಾಣಿ ಸಂ. 9731665271, ಇ–ಮೇಲ್ ಐಡಿ: **gsunitmys@gmail.com**

PUB/595/AAD/PRB/SWR/2022-23 **ಉಪ ಮುಖ್ಯ ಯೋಜನೆ ವ್ಯವಸ್ಥಾಪಕರು / ಇಂಜಿನಿಯರಿಂಗ್ / ಗತಿ ಶಕ್ತಿ ಘಟಕ / ಮೈಸೂರು**

S.W.Railways | sw_rly | SWRRLY | southwesternrailway | SWRRLY

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ. RDG_yard_Modification ದಿನಾಂಕ: 03.01.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ ರಾಯದುರ್ಗ ನಿಲ್ದಾಣದಲ್ಲಿ ಯಾರ್ಡ್‌ನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಹೊರಾಂಗಣ ಸಿಗ್ನಲಿಂಗ್ ಮತ್ತು ದೂರಸಂಪರ್ಕ ವ್ಯವಸ್ಥೆಯೊಂದಿಗೆ ಎಲೆಕ್ಟ್ರಾನಿಕ್ ಇಂಟರ್ ಲಾಕಿಂಗ್‌ನ ಪೂರೈಕೆ ಹಾಗೂ ಪಕ್ಕದ ನಿಲ್ದಾಣಗಳಿಗೆ ಸಂಬಂಧಪಟ್ಟಂಥ ವಿವಿಧ ಬದಲಾವಣೆಗಳು.	ರೂ. 5,25,08,482.60

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **24.01.2023, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ ನಿರ್ಮಾಣ, ಬೆಂಗಳೂರು ದಂಡು

PUB/596/AAD/PRB/SWR/2022-23

S.W.Railways | SWRRLY | SWRRLY

ಸಾರ್ವಜನಿಕ ಪ್ರಕಟಣೆ

ಮೆ. ಜಿವಿ ಟೆಕ್‌ಪಾರ್ಕ್ಸ್ ಪ್ರೈವೇಟ್ ಲಿಮಿಟೆಡ್ ಆದ ನಾವು ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯದ ಎನ್ವಿರಾನ್ಮೆಂಟ್ ಇಂಪ್ಯಾಕ್ಟ್ ಅಸೆಸ್‌ಮೆಂಟ್ ಅಥಾರಿಟಿಯು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ರಚಿಸಲ್ಪಟ್ಟಿದೆ) ಬೆಂಗಳೂರು ದಕ್ಷಿಣ ತಾಲೂಕಿನ (ಬಿಬಿಎಂಪಿ ವಾರ್ಡ್ ನಂ. 198, ಹೆಮ್ಮಿಗೆಪುರ, ಬೆಂಗಳೂರು) ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರಾಮದ ಸರ್ವೆ ನಂ. 25/1, 41/1 & 41/7ರಲ್ಲಿ ಪ್ರಸ್ತಾಪಿತ ಕಡಿಮೆ ಎತ್ತರದ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡಲು **ದಿನಾಂಕ 28.12.2022ರಂದು** (ಕಡತ ಸಂಖ್ಯೆ ಎಸ್‌ಇಐಎಎ 134 ಸಿಒಎನ್ 2022) ಎನ್ವಿರಾನ್ಮೆಂಟಲ್ ಕ್ಲಿಯರೆನ್ಸ್ ನೀಡಿದೆ. ಸದರಿ ಕ್ಲಿಯರೆನ್ಸ್ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್–ಎಸ್‌ಎಐಎಎ ಕರ್ನಾಟಕದ ವೆಬ್‌ಸೈಟ್ **http://environmentclearance.nic.in** ನಲ್ಲಿ ನೋಡಬಹುದು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

My client proposes to purchase from Mr. Dilipkumar Subba Rao, S/o. Late Shri. B. V. Subba Rao and Mrs. Renuka Rao, D/o. Late Shri. B. V. Subba Rao, residential site more particularly described in the Schedule hereunder. The present owners have represented that they have a clear and marketable title to the Schedule Property.

Any person(s) who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned, together with supporting documents within 10 days hereof, failing which it would be presumed that no valid claims or objections subsists; and my client would proceed to complete the transaction with the present owner thereof, subject to compliance with other legal and statutory formalities.

SCHEDULE PROPERTY

All that piece and parcel of Site No. 2203/F, 23rd Cross, Banashankari 2nd Stage, Bangalore 560 070, measuring East to West 53'5" + 59'Ft. /2, North to South 86' 5" + 98'Ft. /2, totally measuring 5,068 Sq. Ft. and bounded on: East by: Site No. 2203/E, West by: Site No. 2203/G, North by: 23rd Cross Road, South by: Site No. 2205/N.

CHETAN P. PADIVAL,
Advocate,
107/58, 4th Cross, Gavipuram Extn., Bangalore - 560 004.
Ph.: +91 98450 53113.
Email: cpadival@gmail.com
Date: January 10, 2023

ಕ್ಲಾಸಿಫೈಡ್ಸ್ **CONNECT**

ಬೆಂಗಳೂರು ಉತ್ಸವ
Bengaluru Utsava
Grand Flea Market
Karnataka Chitrakala Parishath
Kumara Krupa Road, Bengaluru
Date: 6th Jan 2023, Friday to 15th Jan 2023, Sunday
Timing: 11:00 AM - 7:00 PM
(Art, Craft, Handlooms & Lifestyle Exhibition)
Entry Free!
Art & Craft | Handicraft | Clothing
Fashion Accessories | Home Decor & More
FOOD MUSIC
(10 Days Exhibition) 100+ Stalls
Sankranti Shopping Carnival | Also open on all Sunday's!

Happy Mithuna Sankranti

Dollu Kunitha Live
14th Jan 2023, Saturday
Timing: 5 PM - 6:30 PM

Hulivesha Live
15th Jan 2023, Sunday
Timing: 5 PM - 6:30 PM

Home Decors | Handmade Paintings | Lampshades | Ceramic Pots |Handlooms & Handicrafts | Curtains | Carpets | Mats | Bags | Khadi Kurtas | Silks Saree | Sarees | Designer Kurtis | Bandhani Bedsheets | Designer Jewelry | Handmade Jewelry | Toys | Pots & Much more...
For Details Contact : 6364685716 / 9036658774 Entry Free..!
100+ Shopping Stalls | Live Performance | Much More!

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ, ಇಲ್ಲಿ ಇನ್ನುಮುಂದೆ “ಷೆಡ್ಯೂಲ್ ಪ್ರಾಪರ್ಟಿ” ಎನ್ನಲಾಗುವ ಸ್ಥಿರಾಸ್ತಿಯನ್ನು, ಅದರ ಪ್ರಸ್ತುತ ಮಾಲೀಕರಾದ ಶ್ರೀಮತಿ. ಕೋದಂಡೇರ ಚೆಂಗಪ್ಪ ಶ್ರೀಮಣಿ ತಿಮ್ಮಯ್ಯ, ಶ್ರೀಮತಿ. ಅಪರ್ಣಾ ದೇವಿ ತಿಮ್ಮಯ್ಯ, ಶ್ರೀ. ಹೃಷಿಕೇಶ್ ದಾಸ್‌ಗುಪ್ತ ಮತ್ತು ಶ್ರೀ. ಅನಿರುದ್ಧ ದಾಸ್‌ಗುಪ್ತ, ವಿಳಾಸ ಫ್ಲಾಟ್ ನಂ. 401, ಸಾಯಿ ಅಮೇಯಾ ಆರ್ಕ್ 1, ಬಿಜಾಯಿ ಕಪಿಕಾಡ, ಮಂಗಳೂರು, ದಕ್ಷಿಣ ಕನ್ನಡ, ಕರ್ನಾಟಕ–575004 (ಇಲ್ಲಿ ಇನ್ನು ಮುಂದೆ “ಮಾಲೀಕರು” ಎನ್ನಲಾಗುವ) ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಆದ್ದರಿಂದ, ಸದರಿ ನೋಟಿಸ್ ಮುಖಾಂತರ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲಾಗಲಿ ಅಥವಾ ಅದರ ಯಾವುದೇ ಭಾಗದ ಮೇಲಾಗಲಿ ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿ, ಸಂಘ, ಸಂಘಟಣೆ (ಸಾಂಸ್ಥಿಕ ಅಥವಾ ಸಾಂಸ್ಥಿಕವಲ್ಲದ) ಯಾವುದೇ ಸ್ವರೂಪದ ಕ್ಲೇಮ್ ಅಥವಾ ಹಕ್ಕು, ಬಾಧ್ಯತೆ, ಹಿತಾಸಕ್ತಿ, ಬಾಕಿ ವ್ಯಾಜ್ಯ, ಟೆನೆನ್ಸಿ, ಅಡಮಾನ, ಚಾರ್ಜ್, ಲೀನ್ ಅಥವಾ ಡಿಮಾಂಡ್ ಅಥವಾ ಇನ್ನಾವುದೇ ಸ್ವರೂಪದ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ಸದರಿ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ ತಮ್ಮ ಕ್ಲೇಮ್‌ಗಳನ್ನು ಎಲ್ಲಾ ವಿವರಗಳೊಂದಿಗೆ ಅಗತ್ಯ ಪೂರಕ ದಾಖಲಾತಿಗಳ ಸಮೇತ, ಈ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಮೇಲ್ಕಂಡ ಮಾಲೀಕರು ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಸ್ಪಷ್ಟ ಮತ್ತು ಮಾರಾಟ ಮಾಡಬಲ್ಲ ಹಕ್ಕುಗಳನ್ನು ಹೊಂದಿರುತ್ತಾರೆ ಮತ್ತು ಇನ್ನಿತರ ಯಾರೂ ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಯಾವುದೇ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್ ಹೊಂದಿರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ. ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿಯನ್ನು ಖರೀದಿಸುವ ಉದ್ದೇಶವನ್ನು ಮುಂದುವರಿಸಲು ಮತ್ತು ಸ್ವತ್ತಿನ ಸ್ವಾಧೀನತೆಯನ್ನು ಪೂರ್ಣಗೊಳಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ ಎಂದು ಭಾವಿಸಲಾಗುತ್ತದೆ. ಮೇಲೆ ತಿಳಿಸಲಾಗಿರುವ ನಿರ್ದಿಷ್ಟ ಅವಧಿಯ ನಂತರ ಸಲ್ಲಿಕೆಯಾಗುವ ಯಾವುದೇ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂತಹವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿಬಂಧನೆಗಳನ್ನು ರೂಪಿಸುವುದಿಲ್ಲ.

ಷೆಡ್ಯೂಲ್ ಪ್ರಾಪರ್ಟಿ

ಎಸ್‌ಬಿಐ ಸೀನಿಯರ್ ಆಫೀಸರ್ಸ್ ಕಾಲೋನಿ, 7ನೇ ಬಿ ಮುಖ್ಯರಸ್ತೆ, 3ನೇ ಬ್ಲಾಕ್, ಕೋರಮಂಗಲ, ಹಿಂದಿನ ಜಕ್ಕಸಂದ್ರ ಗ್ರಾಮ, ಕೋರಮಂಗಲ ಬಡಾವಣೆ, ವಾರ್ಡ್ ನಂ. 151, ಬೆಂಗಳೂರು ವಿಳಾಸದಲ್ಲಿರುವ ಸೈಟ್ ನಂ. 3 ಮತ್ತು 4, ಪಿಐಡಿ ನಂ. 68–3–3&4 ಹೊಂದಿರುವ, ಸುಮಾರು 4,880 ಚದರ ಅಡಿ ವಿಸ್ತೀರ್ಣವುಳ್ಳ ಪ್ರದೇಶವನ್ನು ಹೊಂದಿರುವ (ಮತ್ತು ಅದರೊಳಗೆ ಸುಮಾರು 1,623 ಚದರ ಅಡಿ ವಿಸ್ತೀರ್ಣದ ಕಟ್ಟಡವನ್ನು ಹೊಂದಿರುವ) ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ **ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 13 ಮತ್ತು 14; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ಸೈಟ್ ನಂ. 5; ದಕ್ಷಿಣಕ್ಕೆ: ಸೈಟ್ ನಂ. 2.**

ಮಹೇಶ್ ಮದನ್ ಭಟ್, ವಕೀಲರು
ಎಂಎಂಬಿ ಲೀಗಲ್634, 2ನೇ ಮಹಡಿ, 5ನೇ ಅಡ್ಡರಸ್ತೆ 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560034
ಫೋನ್: 91–80–41284444/ 41285555
ಇ–ಮೇಲ್: Mahesh@mmblegal.in
ಸ್ಥಳ: ಬೆಂಗಳೂರು
ದಿನಾಂಕ: 10–01–2023

ಮೆಡಿ ಅಸಿಸ್ಟ್ ಇನ್ಸೂರೆನ್ಸ್ ಟಿಪಿಎ ಪ್ರೈವೇಟ್ ಲಿಮಿಟೆಡ್, ಬೊಮ್ಮನಹಳ್ಳಿ.
ಬ್ರ್ಯಾಂಚ್ ಅನ್ನು ಕೆಳಕಂಡ ವಿಳಾಸಕ್ಕೆ ಬದಲಾಯಿಸಲಾಗಿದೆ:
ನಂ. 58/1A, ಸಿಂಗಸಂದ್ರ ವಿಲೇಜ್, ಹೊಸೂರು ಮುಖ್ಯ ರಸ್ತೆ, ಬೇಗೂರು ಹೋಬಳಿ, ಬೆಂಗಳೂರು ಸೌತ್ ತಾಲೂಕು-560068
09-01-2023 ರಿಂದ ಅನ್ವಯ.

BUSINESS

Business Offers

Distributors

EXCELLENT BUSINESS OPPORTUNITY For Retired/ VRS, banking, Mutual fund & Health insurance agents, NRI'S, MLM, CA's &business Owners etc @whitefiled call- 8152022200/ 8143650396

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

WE NEED Investors for one of the leading Pvt Ltd in Bangalore n Mysore. Very attractive and guaranty RETURNS will be given.Those who are interested please Contact: 8296092609

JOB OPPORTUNITIES

Part-Time Jobs

EARN1000-1500 PERDAY by making handmade clay bowls. Buyback assured. Housewives,students, unemployed. Contact 7676079024.

Manager

WANTED MARKETING MANAGERS
To promote our JEE & NEET Publications in PU Colleges
send resume to our Hyderabad Office
gsnpublishers@gmail.com

PERSONAL

Change of Name

JC662291L, SUB/RT, RAMDIN TIWARI, Vill- Rehani Sarai, Sirmour, Rewa, Madhya Pradesh changed Son's name SUBHAM TIWARI to SHUBHAM TIWARI, 09/01/2023, Notary K.V. Mani, Bangalore

CHANGE OF NAME
I, **SYED ALI JAN,** Father of **UMMUL QURA** residing at No. 213, 9th Main, BTM 1st Stage, 3rd Mosque Road, Bengaluru-560029, have changed my minor Daughter's name from **UMMUL QURA** to **RIDA ALI** vide affidavit dated 9.1.2023 before notary Public D.K. Rameshappa, Bengaluru.

ARJU KHANUM KHADRY, Wife/o 14837563P, HAV/MT, SK MD TARIQUE, Vill- Haldidi By Pass Bhadrak By Pass, Bhadrak, Odisha changed name ARJU KHANUM KHADRY to ARJU KHANUM KARDRY, 05/01/2023, K.V. Mani, Bangalore

MAGESWARI, WIFE/O JC675700M, NB SUB/MT, K GANAPATHI, Vill- Seekarajapuram, Walaja, Vellore, Tamil Nadu changed name MAGESWARI to MAGESWARI GANAPATHI, 05/01/2023, K.V. Mani, Bangalore

OTHERS

For Sale

OWNER LEAVING: Leather Sofa Diwan Teak Dining Cot Mattress Teapoy Box Diwan. CALL: 9845414482/ 7019263843

DH | ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ಟೆಂಡರ್ ಪ್ರಕ್ರಿಯೆ ಆರಂಭಿಸಿದ ಬಿಎಂಟಿಸಿ; ನೌಕರ ಸಂಘಟನೆಗಳ ಆಕ್ಷೇಪ

ಸಾವಿರ ಹೊರ ಗುತ್ತಿಗೆ ಚಾಲಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಲಕರ ಕೊರತೆ ಎದುರಿಸುತ್ತಿರುವ ಬಿಎಂಟಿಸಿ ಈಗ ಹೊರ ಗುತ್ತಿಗೆ ಆಧಾರದಲ್ಲಿ ಒಂದು ಸಾವಿರ ಚಾಲಕರನ್ನು ನೇಮಿಸಿಕೊಳ್ಳಲು ಮುಂದಾಗಿದ್ದು, ಈ ಸಂಬಂಧ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ.

ಚಾಲಕರನ್ನು ಒದಗಿಸುವ ಏಜೆನ್ಸಿಗಳನ್ನು ಆಹ್ವಾನಿಸಿ ಟೆಂಡರ್ ಕರೆದಿದೆ. ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಪಡೆದವರು, ಚಾಲ್ತಿಯಲ್ಲಿರುವ ಚಾಲಕ ಬ್ಯಾಡ್ಜ್ ಸಹಿತ ಭಾರಿ ವಾಹನ ಚಾಲನೆಯಲ್ಲಿ ಎರಡು ವರ್ಷಗಳ ಅನುಭವ ಇರುವವರನ್ನು ನೇಮಿಸಿಕೊಳ್ಳಬೇಕು ಎಂದು ಬಿಎಂಟಿಸಿ ಟೆಂಡರ್‌ನಲ್ಲಿ ಉಲ್ಲೇಖಿಸಿದೆ.

ಆಯ್ಕೆ ಮಾಡಿಕೊಳ್ಳುವ ಚಾಲಕರ ವಯಸ್ಸು 50 ವರ್ಷ ಮೀರಿರಬಾರದು. ಗುತ್ತಿಗೆ ಅವಧಿ 11 ತಿಂಗಳಾಗಿದ್ದು, 30 ದಿನ ಮುಂಚಿತವಾಗಿ ನೋಟಿಸ್ ನೀಡಿ ಗುತ್ತಿಗೆ ರದ್ದುಪಡಿಸುವ ಅಧಿಕಾರ ಬಿಎಂಟಿಸಿಗೆ ಇದೆ ಎಂದು ತಿಳಿಸಿದೆ.

ಬಿಎಂಟಿಸಿ ಐದು ವಲಯಗಳಿಗೆ ತಲಾ 200 ಚಾಲಕರನ್ನು ಒದಗಿಸಬೇಕು. ವಾರದ ರಜೆ, ಪಿಎಫ್, ಇಎಸ್ಐ ಸೇರಿ ಪ್ರತಿ ಚಾಲಕರಿಗೆ ₹24,200 ವೇತನ ನೀಡಲಾಗುವುದು. ಚಾಲಕರನ್ನು ಒದಗಿಸುವ ಸಂಸ್ಥೆಯು ಇದರ ಜತೆಗೆ ಸೇವಾ ಶುಲ್ಕವನ್ನು ನಮೂದಿಸಬಹುದು. ಚಾಲಕರಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಸಂಬಳ ಪಾವತಿಸಬೇಕು. ಒಪ್ಪಂದದಂತೆ ಚಾಲಕರನ್ನು ಒದಗಿಸಲು ಏಜೆನ್ಸಿ ವಿಫಲವಾದರೆ, ಪ್ರತಿದಿನ ಒಬ್ಬ ಚಾಲಕನ ಗೈರಿಗೆ ₹1 ಸಾವಿರದಂತೆ (ಶೇ 18ರಷ್ಟು ಜಿಎಸ್‌ಟಿ ಹೊರತುಪಡಿಸಿ) ದಂಡವನ್ನು ಬಿಎಂಟಿಸಿಗೆ ಪಾವತಿಸಬೇಕಾಗುತ್ತದೆ. ದಂಡದ ಮೊತ್ತವನ್ನು ಸೇವಾ ಶುಲ್ಕದಲ್ಲೇ ಕಡಿತ ಮಾಡಿಕೊಳ್ಳಲಾಗುತ್ತದೆ ಎಂಬ ಷರತ್ತನ್ನೂ ವಿಧಿಸಿದೆ.

ಗುತ್ತಿಗೆ ಪಡೆದ ಏಜೆನ್ಸಿಯು ಕಾರ್ಯಾದೇಶ ನೀಡಿದ 15 ದಿನಗಳಲ್ಲಿ ಚಾಲಕರನ್ನು ಒದಗಿಸಬೇಕು. ಚಾಲಕರ ಕೌಶಲವನ್ನು ಬಿಎಂಟಿಸಿ ಕೂಡ ಪರಿಶೀಲಿಸಲಿದ್ದು, ಅದರಲ್ಲಿ ಅರ್ಹತೆ ಪಡೆದವರನ್ನಷ್ಟೆ ನಿಯೋಜನೆ ಮಾಡಿಕೊಳ್ಳಲಾಗುವುದು. ಯಾವುದೇ ಸಾರಿಗೆ ಸಂಸ್ಥೆಯಿಂದ ವಜಾಗೊಂಡ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಾರದು ಎಂದು ತಿಳಿಸಿದೆ.

ಗುತ್ತಿಗೆ ಆಧಾರದಲ್ಲಿ ಚಾಲಕರನ್ನು ನೇಮಿಸಿಕೊಳ್ಳಲು ಸಾರಿಗೆ ನೌಕರರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ. ಖಾಲಿ ಹುದ್ದೆಗಳಿಗೆ ಕಾಯಂ ನೌಕರರನ್ನು ನೇಮಿಸಿಕೊಳ್ಳಬೇಕು ಎಂದು ಒತ್ತಾಯಿಸಿವೆ.

‘ಮತ್ತೊಂದು ಸಮಸ್ಯೆಗೆ ರಹದಾರಿ’

‘ಚಾಲಕರ ಕೊರತೆ ಸಮಸ್ಯೆಯನ್ನು ತಾತ್ಕಾಲಿಕವಾಗಿ ನಿವಾರಿಸಿಕೊಳ್ಳಲು ಅಧಿಕಾರಿಗಳು ಮುಂದಾಗಿದ್ದಾರೆ. ಆದರೆ, ದೂರದೃಷ್ಟಿಯಿಂದ ಯೋಚಿಸಿದರೆ ಬಿಎಂಟಿಸಿ ಮೇಲೆ ಮತ್ತೊಂದು ಸಮಸ್ಯೆಯನ್ನು ಹೇರಿದಂತೆ ಆಗಲಿದೆ’ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ.ಅನಂತ ಸುಬ್ಬರಾವ್ ಹೇಳಿದರು.

ನಾಲ್ಕು ಸಂಸ್ಥೆಗಳಲ್ಲಿ 16 ಹುದ್ದೆಗಳು ಖಾಲಿ ಇದ್ದು, ಬಸ್‌ಗಳು ಬರುತ್ತಿಲ್ಲ ಎಂಬ ದೂರು ಎಲ್ಲೆಡೆ ಇದೆ. ಈ ಸಮಸ್ಯೆಗೆ ಹೊರಗುತ್ತಿಗೆಯಲ್ಲಿ ಚಾಲಕರನ್ನು ನೇಮಿಸಿಕೊಳ್ಳುವುದು ಪರಿಹಾರವಲ್ಲ ಎಂದರು.

ಇವು ಹೊಸದಾಗಿ ಸೃಜನೆಯಾದ ಹುದ್ದೆಗಳಲ್ಲ. ನಿವೃತ್ತಿ ಮತ್ತಿತರ ಕಾರಣಗಳಿಂದ ಮಂಜೂರಾದ ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡದೆ ಹೊರಗುತ್ತಿಗೆ ಹಾದಿ ಹಿಡಿದಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಕಾಯಂ ನೌಕರರ ನೇಮಕಕ್ಕೆ ಒಂದು ತಿಂಗಳ ಕಾಲಾವಕಾಶ ಸಾಕಾಗುತ್ತದೆ ಎಂದು ತಿಳಿಸಿದರು.

ಬಿಬಿಎಂಪಿ ಗುತ್ತಿಗೆದಾರರ ಪ್ರತಿಭಟನೆ

25 ತಿಂಗಳಿಂದ ಪಾವತಿಯಾಗದ ಬಿಲ್ • ಇಂದಿನಿಂದ ಎಲ್ಲ ಕಾಮಗಾರಿ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ ಪಾವತಿ ಮಾಡಬೇಕೆಂದು ಆಗ್ರಹಿಸಿ ಸೋಮವಾರ ಆರಂಭವಾಗಿರುವ ಗುತ್ತಿಗೆದಾರರ ಪ್ರತಿಭಟನೆ, ಅನಿರ್ದಿಷ್ಟಾವಧಿಗೆ ಮುಂದುವರಿಯಲಿದೆ.

ಬಿಬಿಎಂಪಿ ಕೇಂದ್ರ ಕಚೇರಿಯ ಆವರಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘ ಹಾಗೂ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘ ಸೇರಿ ನೂರಾರು ಗುತ್ತಿಗೆದಾರರು ಸೋಮವಾರ ಬೆಳಿಗ್ಗೆ ಪ್ರತಿಭಟನೆ ಆರಂಭಿಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಈ ಪ್ರತಿಭಟನೆಗೆ ಸ್ಪಂದಿಸದ ಹಿನ್ನೆಲೆಯಲ್ಲಿ ಎಲ್ಲ ರೀತಿಯ ಸಿವಿಲ್ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ಮಾಡಲು ನಿರ್ಧರಿಸಿದರು.

‘25 ತಿಂಗಳಿಂದ ಬಿಲ್ ಪಾವತಿ ಮಾಡಿಲ್ಲ. ಗುತ್ತಿಗೆದಾರರು ಸಂಕಷ್ಟದಲ್ಲಿದ್ದಾರೆ. ಮುಖ್ಯ ಆಯುಕ್ತರನ್ನು ಐದಾರು ಬಾರಿ ಭೇಟಿ ಮಾಡಿ ಮನವಿ ಮಾಡಿದ್ದರೂ ಸ್ಪಂದಿಸಿಲ್ಲ. ಬಿಲ್ ಪಾವತಿಗೆ ನೀಡಲಾಗಿರುವ ಹೊಸ ಆದೇಶಗಳಿಂದಲೂ ಸಾಕಷ್ಟು ತೊಂದರೆಯಾಗಿದೆ. ಪ್ರತಿಭಟನೆ ನಡೆಸುತ್ತಿದ್ದರೂ ಮುಖ್ಯ ಆಯುಕ್ತರು ಸ್ಪಂದಿಸಲಿಲ್ಲ. ಹೀಗಾಗಿ ನಾವು ಮುಂದಿನ ಹೋರಾಟವನ್ನು ತೀವ್ರಗೊಳಿಸಲಿದ್ದೇವೆ’ ಎಂದು ಗುತ್ತಿಗೆದಾರರ ಸಂಘದ ಮುಖಂಡರಾದ ಅಂಬಿಕಾಪತಿ, ನಂದಕುಮಾರ್, ಕೆ.ಟಿ. ಮಂಜುನಾಥ್ ತಿಳಿಸಿದರು.

ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಗುತ್ತಿಗೆದಾರರ ಸಂಘಗಳ ಸದಸ್ಯರು ಸೋಮವಾರ ಪ್ರತಿಭಟನೆ ಮಾಡಿದರು

‘ಪ್ರತಿ ವಿಧಾನಸಭೆ ಕ್ಷೇತ್ರದಲ್ಲಿ- ಮಂಗಳವಾರದಿಂದ ಪ್ರತಿಭಟನೆ ಆರಂಭವಾಗಲಿದೆ. ಎಲ್ಲ ರೀತಿಯ ಕಾಮಗಾರಿಗಳನ್ನು ನಿಲ್ಲಿಸಲು ನಿರ್ಧರಿಸಲಾಗಿದೆ. ಬೆಳಿಗ್ಗೆಯಿಂದ ಎಲ್ಲ ಕಾಮಗಾರಿಗಳನ್ನು ನಿಲ್ಲಿಸಿ, ಅಲ್ಲಲ್ಲಿ ಪ್ರತಿಭಟನೆ ಮಾಡಿ, ಮಧ್ಯಾಹ್ನದ ನಂತರ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಎಲ್ಲರೂ ಸೇರಿಕೊಂಡು ಪ್ರತಿಭಟನೆ ಮುಂದುವರಿಸುತ್ತೇವೆ’ ಎಂದು ಹೇಳಿದರು.

‘25 ತಿಂಗಳಿಂದ ಸುಮಾರು ₹3 ಸಾವಿರ ಕೋಟಿ ಬಿಲ್ ಮೊತ್ತವನ್ನು ಪಾವತಿಸಬೇಕಿದೆ. ಹಲವು ಬಾರಿ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ. ಗುತ್ತಿಗೆದಾರರು ಬಡ್ಡಿಗೆ ಹಣ ತಂದು ಕಾಮಗಾರಿ ಪೂರೈಸಿದ್ದಾರೆ. ಅವರಿಗೆ ನಷ್ಟದ ಜೊತೆಗೆ ಮಾನಸಿಕ ಹಿಂಸೆಯೂ ಆಗುತ್ತಿದೆ’ ಎಂದರು.

‘ಗಾಬರಿ ಪಡುವ ಅಗತ್ಯ ಇಲ್ಲ’

‘2020ರ ನವೆಂಬರ್‌ವರೆಗೆ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಲಾಗಿದೆ. 24 ತಿಂಗಳ ‘ವೇಟಿಂಗ್ ಪೀರಿಯಡ್’ ಇದೆ. ಅಂದರೆ ಡಿಸೆಂಬರ್‌ನದ್ದು ಮಾತ್ರ ನೀಡಬೇಕು. ನಾವು ಈಗ ಆಸ್ತಿ ತೆರಿಗೆ ಸಂಗ್ರಹ ಅಭಿಯಾನ ಆರಂಭಿಸಿದ್ದೇವೆ. ಸುಮಾರು ₹140 ಕೋಟಿ ಸಂಗ್ರಹವಾಗಿದೆ. ಅವರಿಗೆ ಡಿಸೆಂಬರ್‌ನಲ್ಲಿ ನೀಡಬೇಕಾದ ಬಿಲ್ ಅನ್ನು ಶೀಘ್ರ ನೀಡುತ್ತೇವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಗುತ್ತಿಗೆದಾರರಿಗೆ ಸಾಕಷ್ಟು ಕಷ್ಟ ಆಗಿದ್ದರೆ ಅವರು ಹೊಸ ಕಾಮಗಾರಿಯಲ್ಲಿ ಭಾಗವಹಿಸಲೇಬಾರದಿತ್ತು. ಅವರೇ ಶೇ 20ರಿಂದ 25ರಷ್ಟು ಕಡಿಮೆಗೆ ಬಂದಿದ್ದಾರೆ. ಹೊಸ ವ್ಯವಸ್ಥೆ ಜಾರಿಗೆ ಬರುವುದು ಹೊಸ ಕಾಮಗಾರಿಗಳಿಗೆ ಮಾತ್ರ. ಹಳೆಯದ್ದಕ್ಕೆ ಇದು ಅನ್ವಯಿಸಲ್ಲ. ಹೊಸ ಕಾಮಗಾರಿಗಳಿಗೆ ಟಿವಿಸಿಸಿ, ಗುಣಮಟ್ಟ ನಿಯಂತ್ರಣ ಆಗುತ್ತಿದೆ’ ಎಂದರು.

ಬಿಡಿಎಗೆ ಶಾಸಕ ಅಧ್ಯಕ್ಷ: ಪರಿಶೀಲನೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪೂರ್ಣಾವಧಿ ಹುದ್ದೆ’ಯಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಸ್ಥಾನಕ್ಕೆ ಶಾಸಕರನ್ನು ನೇಮಿಸಬಹುದೇ ಎಂಬುದನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿದೆ.

ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರನ್ನು ಬಿಜೆಪಿ ಸರ್ಕಾರ ಬಿಡಿಎ ಅಧ್ಯಕ್ಷರನ್ನಾಗಿ ನೇಮಿಸಿತ್ತು. ಇದನ್ನು ಪ್ರಶ್ನಿಸಿ ವಕೀಲರೊಬ್ಬರು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಈ ವಿಚಾರವು ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಹಾಗೂ ಎ.ಎಸ್.ಓಕಾ ಪೀಠದ ಮುಂದೆ ಸೋಮವಾರ ಬಂತು.

ಅರ್ಜಿದಾರರ ಪರವಾಗಿ ಹಿರಿಯ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿ, ‘ಬಿಡಿಎ ಅಧ್ಯಕ್ಷ ಸ್ಥಾನ ಪೂರ್ಣಾವಧಿಯ ಹುದ್ದೆ. ಅದಕ್ಕೆ ಶಾಸಕರನ್ನು ನೇಮಿಸುವಂತಿಲ್ಲ’ ಎಂದರು. ಬಳಿಕ ಪೀಠವು ಕರ್ನಾಟಕ ಸರ್ಕಾರ ಹಾಗೂ ಬಿಡಿಎಗೆ ನೋಟಿಸ್ ನೀಡಿ ಆರು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿತು. ಬಳಿಕ ವಿಚಾರಣೆಯನ್ನು ಮುಂದೂಡಲಾಯಿತು.

ಪ್ರತಿಮೆ ಸ್ಥಾಪನೆ: ಜ.23ಕ್ಕೆ ಭೂಮಿಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಬಸವಣ್ಣ ಮತ್ತು ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳನ್ನು ಸ್ಥಾಪಿಸಲು ಜನವರಿ 23ರಂದು ಭೂಮಿಪೂಜೆ ನೆರವೇರಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಎರಡೂ ಪ್ರತಿಮೆಗಳ ಸ್ಥಾಪನೆಗೆ ಕಾಮಗಾರಿ ಆರಂಭಿಸಲು ಉನ್ನತಮಟ್ಟದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಫೆಬ್ರುವರಿ ಅಂತ್ಯದೊಳಗೆ ಎರಡೂ ಪ್ರತಿಮೆಗಳನ್ನು ಅನಾವರಣ ಮಾಡುವ ಗುರಿ ಇದೆ’ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸ್ಪಟಿಕಪುರಿ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಪೇಜಾವರ ಮಠದ ಪ್ರಸನ್ನತೀರ್ಥ ಸ್ವಾಮೀಜಿ, ಚಿತ್ರದುರ್ಗ ಮಾದಾರ ಚೆನ್ನಯ್ಯ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭೂಮಿಪೂಜೆ ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ತಿಳಿಸಿದರು.

2ನೇ ಹಂತದ ನಗರಗಳಿಗೆ ಫ್ರಾಂಚೈಸಿ ಮಾದರಿ ಪರಿಚಯ

ನವೀಕೃತ ಇಂಡಿಯಾ ಕಾಫಿ ಹೌಸ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಡಾ.ಬಿ.ಆರ್. ಅಂಬೇಡ್ಕರ್ ರಸ್ತೆಯಲ್ಲಿರುವ ನವೀಕೃತ ಇಂಡಿಯಾ ಕಾಫಿ ಹೌಸ್ (ಐಸಿಎಚ್) ಅನ್ನು ಕೇಂದ್ರ ಸರ್ಕಾರದ ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ರಾಜೇಶ್ ಅಗರವಾಲ್ ಸೋಮವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘ಆದರ್ಶಪ್ರಾಯವಾಗಿರುವ ಇಂಡಿಯಾ ಕಾಫಿ ಹೌಸ್ ಅನ್ನು ಅದರ ಪಾರಂಪರಿಕ ಸೌಂದರ್ಯ ಸ್ಪರ್ಶವನ್ನು ಉಳಿಸಿಕೊಳ್ಳುವ ರೀತಿಯಲ್ಲಿ ನವೀಕರಿಸಲಾಗಿದ್ದು, ಯುವಜನರನ್ನು ಇದು ಆಕರ್ಷಿಸುವಂತಿದೆ. ಆಹಾರ ಪದಾರ್ಥಗಳ ಪಟ್ಟಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ’ ಎಂದರು.

‘1972ರಲ್ಲಿ ಕಾಫಿ ಮಂಡಳಿಯ ಆವರಣದಲ್ಲಿ ಪ್ರಾರಂಭವಾದ ಐಸಿಎಚ್ ವಿಧಾನಸೌಧ, ಹೈಕೋರ್ಟ್ ಮತ್ತು ವಿಶ್ವೇಶ್ವರಯ್ಯ ಟವರ್‌ನ ಸರ್ಕಾರಿ ಮತ್ತು ಖಾಸಗಿ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ನೆಚ್ಚಿನ ತಾಣವಾಗಿದೆ. ತನ್ನ ಸುವರ್ಣ ಮಹೋತ್ಸವದ ಅಂಗವಾಗಿ ಇಲ್ಲಿನ ಕಾಫಿ ಹೌಸ್ ಅನ್ನು ₹22 ಲಕ್ಷದಲ್ಲಿ ನವೀಕೃತಗೊಳಿಸಲಾಗಿದೆ’ ಎಂದು ಕಾಫಿ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಜಿ. ಜಗದೀಶ ಮಾಹಿತಿ ನೀಡಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ರಸ್ತೆಯ ಕಾಫಿ ಬೋರ್ಡ್ ಆವರಣದಲ್ಲಿರುವ ನವೀಕರಿಸಿದ ಇಂಡಿಯಾ ಕಾಫಿ ಹೌಸ್ ಅನ್ನು ಸೋಮವಾರ ಉದ್ಘಾಟಿಸಲಾಯಿತು. (ಎಡದಿಂದ ಬಲಕ್ಕೆ) ಕೇಂದ್ರ ಸರ್ಕಾರದ ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ರಾಜೇಶ್ ಅಗರವಾಲ್, ಕಾಫಿ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಸಿ. ಜಗದೀಶ ಇದ್ದರು. – ಪ್ರಜಾವಾಣಿ ಚಿತ್ರ

‘ಯುವ ಸಮೂಹವನ್ನು ಕಾಫಿ ಹೌಸ್ ಕಡೆ ಸೆಳೆಯಲು ಅಟಲ್ ಇನ್‌ಕ್ಯೂಬೇಷನ್ ಸೆಂಟರ್‌ನ ಅಂಗವಿಕಲರೇ ನಡೆಸುವ ‘ಮಿಟ್ಟಿ ಕೆಫೆ’ಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದು ನೂತನ ಆಹಾರ ಪದಾರ್ಥಗಳ ಪಟ್ಟಿಯನ್ನು ರೂಪಿಸಿದ್ದು, ಈ ಸಂಸ್ಥೆ ಕಾಫಿಯ ವಿಶೇಷ ವಿಭಾಗವನ್ನು ಪರಿಚಯಿಸಲಿದೆ. ಇದರಿಂದ ನಮ್ಮ ಮೆನುವಿನಲ್ಲಿ ಯಾವುದೇ ರೀತಿಯ ಬದಲಾವಣೆಗಳನ್ನು ಮಾಡಿಕೊಂಡಿಲ್ಲ. ಆದರೆ ಯುವ ಸಮೂಹಕ್ಕೆ ಇಷ್ಟವಾಗುವ ರೀತಿಯಲ್ಲಿ ಈ ಕಾಫಿ ಹೌಸ್ ಅನ್ನು ವಿನ್ಯಾಸಗೊಳಿಸಲಾಗಿದೆ’ ಎಂದು ತಿಳಿಸಿದರು.

‘ಸ್ವಂತ ಕಾಫಿ ಶಾಪ್ ತೆರೆಯಲು ಇಚ್ಛಿಸುವ ಹಾಗೂ ಪಿಯುಸಿ ಅಥವಾ ತತ್ಸಮಾನ ತರಗತಿ ಪೂರ್ಣಗೊಳಿಸಿರುವ ಯುವಜನರಿಗೆ ವೃತ್ತಿಪರ ಬ್ಯಾರಿಸ್ಟ್ ಎಂಬ ಕೋರ್ಸ್ ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. 2ನೇ ಹಂತದ ನಗರಗಳಿಗೆ ಫ್ರಾಂಚೈಸಿ ಮಾದರಿಯನ್ನು ಪರಿಚಯಿಸುತ್ತೇವೆ’ ಎಂದರು.

ಹಸಿರು ಪ್ರದೇಶ ವಿಸ್ತರಿಸಿಕೊಂಡ ದಕ್ಷಿಣ ವಲಯ; ಒತ್ತುವರಿ ತೆರವು ಜಾಗದಲ್ಲಿ ಹಸಿರೀಕರಣ

ಬಿಬಿಎಂಪಿ ವ್ಯಾಪ್ತಿಯಲ್ಲಿ 11 ಹೊಸ ಉದ್ಯಾನ

• ಆರ್. ಮಂಜುನಾಥ್

ಬೆಂಗಳೂರು: ಉದ್ಯಾನನಗರಿ ಎಂಬ ಖ್ಯಾತಿ ಹೊಂದಿದ್ದ ಬೆಂಗಳೂರು ಇದೀಗ ಹಸಿರು ಪ್ರದೇಶವನ್ನು ಗಮನಾರ್ಹ ರೀತಿಯಲ್ಲಿ ಹೆಚ್ಚಿಸಿಕೊಳ್ಳುತ್ತಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿರುವ 1,233 ಉದ್ಯಾನಗಳ ಪಟ್ಟಿಗೆ 11 ಹೊಸ ಉದ್ಯಾನಗಳು ಸೇರ್ಪಡೆಗೊಳ್ಳುತ್ತಿವೆ. ಬೆಂಗಳೂರು ದಕ್ಷಿಣ ವಲಯ ಇದರಲ್ಲಿ ಹೆಚ್ಚಿನ ಪಾಲು ಪಡೆದಿದ್ದು, ಹಸಿರು ಪ್ರದೇಶವನ್ನು ವಿಸ್ತರಿಸಿಕೊಂಡು ಪ್ರಥಮ ಸ್ಥಾನ ಗಳಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪದ್ಮನಾಭನಗರ, ಬಸವನಗುಡಿ, ಕೆ.ಆರ್. ಪುರದಲ್ಲಿ ನಾಗರಿಕರ ಸೌಲಭ್ಯ (ಸಿ.ಎ) ಪ್ರದೇಶಗಳನ್ನು ನಿರ್ಮಿಸಿ, ಅದನ್ನು ಬಿಬಿಎಂಪಿಗೆ ವರ್ಗಾಯಿಸಿತ್ತು. ಆದರೆ ಅವನ್ನು ಖಾಸಗಿಯವರು ಒತ್ತುವರಿ ಮಾಡಿಕೊಂಡಿದ್ದರು. ಈ ಕುರಿತ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿ, ಹಲವು ವರ್ಷಗಳ ವಿಚಾರಣೆಯ ನಂತರ ಇತ್ತೀಚೆಗೆ ತೀರ್ಪು ಬಂದಿತ್ತು. ತೀರ್ಪು ಬಂದ ಕೂಡಲೇ ಎಚ್ಚೆತ್ತುಕೊಂಡಿರುವ ಬಿಬಿಎಂಪಿಯು ಎಲ್ಲ ರೀತಿಯ ಒತ್ತುವರಿಯನ್ನು ತೆರವು ಮಾಡಿ, ಅಲ್ಲಿ ಉದ್ಯಾನ ನಿರ್ಮಿಸುವ ಕಾಮಗಾರಿಯನ್ನು ಆರಂಭಿಸಿದೆ.

ಅಟಲ್ ಬಿಹಾರಿ ವಾಜಪೇಯಿ ಉದ್ಯಾನ

ಒತ್ತುವರಿಯಾಗಿದ್ದ 11 ಪ್ರಕರಣಗಳ ಪೈಕಿ ಸುಮಾರು 21 ಎಕರೆ ಪ್ರದೇಶದಲ್ಲಿ 11 ಉದ್ಯಾನಗಳನ್ನು ನಿರ್ಮಿಸಲಾಗುತ್ತಿದೆ. ಈ ಉದ್ಯಾನಗಳ ನಿರ್ಮಾಣಕ್ಕೆ ಸುಮಾರು ₹35 ಕೋಟಿ ವೆಚ್ಚ ಮಾಡಲಾಗುತ್ತಿದೆ. ಫೆನ್ಸಿಂಗ್, ವ್ಯಾಯಾಮ ಉಪಕರಣ, ಮಕ್ಕಳ ಆಟದ ಉಪಕರಣ, ಪಾದಚಾರಿ ಮಾರ್ಗ, ಆಸನ, ಗೆಜಬೊ ಹಾಗೂ ಎಲ್‌ಇಡಿ ದೀಪ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆಯಲ್ಲಿ ನೀಡಲಾಗಿರುವ ಅನುದಾನ ಹಾಗೂ ಶಾಸಕರ ಅನುದಾನದಲ್ಲಿ ಈ ಉದ್ಯಾನಗಳನ್ನು ನಿರ್ಮಿಸಲಾಗುತ್ತಿದೆ. ಪದ್ಮನಾಭನಗರದ ಉದ್ಯಾನದಲ್ಲಿ 'ಮೇಕ್ ಇನ್ ಇಂಡಿಯಾ' ಪರಿಕಲ್ಪನೆಯಲ್ಲಿ ಕಲಾಕೃತಿಗಳನ್ನು ಸ್ಥಾಪಿಸಲಾಗುತ್ತಿದೆ. ಈಗಾಗಲೇ ಉದ್ಘಾಟನೆಯಾಗಿರುವ ಅಟಲ್ ಬಿಹಾರಿ ವಾಜಪೇಯಿ ಉದ್ಯಾನದಲ್ಲಿ ಸಮುದಾಯ ಭವನ ನಿರ್ಮಿಸಲಾಗುತ್ತಿದೆ.

'ಕೆಲವು ಪ್ರಕರಣಗಳು 1998ರಿಂದ ನ್ಯಾಯಾಲಯದಲ್ಲಿದ್ದವು. ಒಂದೆರಡು ಉದ್ಯಾನಗಳು ಬಿಡಿಎ ನಿರ್ಮಿಸಿ, ಪಾಲಿಕೆಗೆ ನೀಡಿದ ಮೇಲೆ ಒತ್ತುವರಿಯಾಗಿದ್ದವು. ಉದ್ಯಾನಕ್ಕಾಗಿ ಮೀಸಲಾದ ಸಿಎ ನಿವೇಶನ ಎಂದು ನಮೂದಿಸಿ ಬಿಡಿಎ ಹಸ್ತಾಂತರಿಸಿದ್ದ ಪ್ರದೇಶಗಳೂ ಒತ್ತುವರಿಯಾಗಿದ್ದವು. ಕಳೆದ ಒಂದು ವರ್ಷದಲ್ಲಿ ಅವುಗಳನ್ನು ವಶಕ್ಕೆ ಪಡೆಯಲು ಸಾಕಷ್ಟು ಪ್ರಯತ್ನಪಡಲಾಯಿತು. ಕಾನೂನು ಕೋಶದ ಪ್ರಯತ್ನದಿಂದ ಬಿಬಿಎಂಪಿ ವಶಕ್ಕೆ ಈ ಪ್ರದೇಶಗಳು ಬಂದವು. ಕೂಡಲೇ ಒತ್ತುವರಿ ತೆರವು ಮಾಡಿ ಉದ್ಯಾನ ನಿರ್ಮಿಸುತ್ತಿದ್ದೇವೆ' ಎಂದು ಬಿಬಿಎಂಪಿ ದಕ್ಷಿಣ ವಲಯದ ಕಾರ್ಯಪಾಲಕ ಎಂಜಿನಿಯರ್ ಮಹಾಂತೇಶ್ ಹೇಳಿದರು.

'ಸಚಿವ ಆರ್. ಅಶೋಕ, ಶಾಸಕ ರವಿಸುಬ್ರಮಣ್ಯ ಅವರು ಶಾಸಕರ ನಿಧಿಯಿಂದ ಹಣ ಮಂಜೂರು ಮಾಡಿದ್ದು, ಕ್ಷಿಪ್ರಗತಿಯಲ್ಲಿ ಉದ್ಯಾನ ನಿರ್ಮಾಣ ಕಾರ್ಯ ನಡೆಯುತ್ತಿದೆ' ಎಂದು ಹೇಳಿದರು.



ಎಲ್ಲೆಲ್ಲಿ ಹೊಸ ಉದ್ಯಾನ?

ಸ್ಥಳ	ಪ್ರದೇಶ	ವೆಚ್ಚ
ಕತ್ರಿಗುಪ್ಪೆಯ ಆರ್.ಕೆ. ಲೇಔಟ್	2 ಎ 20 ಗು	₹5 ಕೋಟಿ
ಲಕ್ಷ್ಮಿಕಾಂತ ಉದ್ಯಾನ	2ಎ 20 ಗು	₹2 ಕೋಟಿ
ಪದ್ಮನಾಭನಗರ	5 ಎಕರೆ	₹4 ಕೋಟಿ
ಕರಿಸಂದ್ರ	1 ಎಕರೆ	₹2 ಕೋಟಿ
ಕುಮಾರಸ್ವಾಮಿ ಬಡಾವಣೆ	1ಎ, 20 ಗು	₹5 ಕೋಟಿ
ಕುಮಾರಸ್ವಾಮಿ ಬಡಾವಣೆ	1ಎ, 20 ಗು	₹2 ಕೋಟಿ
ಗಣೇಶ ಮಂದಿರ	17,500 ಚದರ ಮೀ	₹5 ಕೋಟಿ
ಗಣೇಶ ಮಂದಿರ	1 ಎಕರೆ	₹70 ಲಕ್ಷ
ಗಣೇಶಮಂದಿರ	1ಎ, 20 ಗು	₹2 ಕೋಟಿ
ಬಸವನಗುಡಿ	3 ಎಕರೆ	₹5 ಕೋಟಿ
ಬಾಬಾಸಿಪಾಳ್ಯ, ಕೆ.ಆರ್.ಪುರ	1 ಎಕರೆ	₹2 ಕೋಟಿ

ಒತ್ತುವರಿ ತೆರವಾದ ಸ್ಥಳವನ್ನು ಹೆಚ್ಚು ದಿನ ಬಿಡಲು ಸಾಧ್ಯವಿಲ್ಲ. ಹೀಗಾಗಿ ಹಸಿರು ಪ್ರದೇಶವನ್ನಾಗಿ ಮಾಡಲು ಉದ್ಯಾನಗಳನ್ನು ನಿರ್ಮಿಸಲಾಗುತ್ತಿದೆ.

ಜಯರಾಂ ರಾಯಪುರ,
ದಕ್ಷಿಣ ವಲಯ ಆಯುಕ್ತ, ಬಿಬಿಎಂಪಿ

ಇನ್ನಷ್ಟು ಉದ್ಯಾನ..

ಬಿಬಿಎಂಪಿ ವ್ಯಾಪ್ತಿಯಲ್ಲಿ ಇನ್ನೂ ಹಲವು ಹೊಸ ಉದ್ಯಾನಗಳನ್ನು ನಿರ್ಮಿಸುವ ಉದ್ದೇಶವಿದ್ದು ಜಾಗಗಳನ್ನು ಗುರುತಿಸಲಾಗುತ್ತಿದೆ. ಜಾಗ ಲಭ್ಯವಾಗುವ ಕಡೆ ಉದ್ಯಾನ ನಿರ್ಮಿಸಲಾಗುತ್ತದೆ. ಇದಲ್ಲದೆ 25ಕ್ಕೂ ಹೆಚ್ಚು ಉದ್ಯಾನಗಳಲ್ಲಿ ಅಭಿವೃದ್ಧಿ ಹಾಗೂ ಉನ್ನತೀಕರಣ ಕೆಲಸಗಳೂ ನಡೆಯುತ್ತಿವೆ ಎಂದು ಬಿಬಿಎಂಪಿ ತೋಟಗಾರಿಕೆ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ್ ತಿಳಿಸಿದರು.

ಅಕ್ರಮ ನೇಮಕ: ಕೆಪಿಎಸ್‌ಸಿ ಅಧ್ಯಕ್ಷರ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕ ಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ ಸ್ಥಾನಕ್ಕೆ ಶಿವಶಂಕರಪ್ಪ ಸಾಹುಕಾರ ಅವರನ್ನು ನೇಮಕ ಮಾಡಿರುವುದು ಸಂವಿಧಾನಬಾಹಿರವಾಗಿದೆ. ತಕ್ಷಣ ಅವರನ್ನು ವಜಾಗೊಳಿಸಬೇಕು' ಎಂದು ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ ಎಸ್‌ಟಿ ನೌಕರರ ಸಮನ್ವಯ ಸಮಿತಿ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಸಮಿತಿಯ ಅಧ್ಯಕ್ಷ ಡಿ. ಶಿವಶಂಕರ್, 'ಸಂವಿಧಾನದ 316(1)ರ ವಿಧಿಯ ಪ್ರಕಾರ ಕೆಪಿಎಸ್‌ಸಿ ಆಯೋಗದ ಅಧ್ಯಕ್ಷ ಅಥವಾ ಸದಸ್ಯ ಸ್ಥಾನಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಕನಿಷ್ಠ 10 ವರ್ಷಗಳವರೆಗೆ ಕಾರ್ಯ-ನಿರ್ವಹಿಸಿರಬೇಕು. ಆದರೆ, ಸಹಕಾರಿ ಯೂನಿಯನ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿರುವ ಸಾಹುಕಾರ ಅವರನ್ನು ಆಯೋಗದ ಅಧ್ಯಕ್ಷರನ್ನಾಗಿ ಮಾಡುವ ಮೂಲಕ ನಿಯಮ ಉಲ್ಲಂ-ಘಿಸಲಾಗಿದೆ' ಎಂದು ಆರೋಪಿಸಿದರು.

'ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರದ ಶಿಫಾರಸಿನ ಅನ್ವಯ ಶಿವಶಂಕರಪ್ಪ ಸಾಹುಕಾರ್ ಅವರನ್ನು 'ಅಫಿಶಿಯಲ್ ಕೆಟಗ-ರಿ'ಯಲ್ಲಿ (ಅಧಿಕಾರಿ ವರ್ಗ) ಕೆಪಿಎಸ್‌ಸಿ ಸದಸ್ಯರಾಗಿ ನೇಮಿಸಿ 2019ರ ಆಗಸ್ಟ್ 31ರಂದು ಅಂದಿನ ರಾಜ್ಯಪಾಲರಾ-ಗಿದ್ದ ವಜುಭಾಯ್ ವಾಲಾ ಅವರು ಅಧಿಸೂಚನೆ ಹೊರಡಿಸಿದ್ದರು. ಆ ಬಳಿಕ, ಮತ್ತೆ ಸರ್ಕಾರದ ಶಿಫಾರಸಿನಂತೆ ಕೆಪಿಎಸ್‌ಸಿ ಅಧ್ಯಕ್ಷರಾಗಿ ನೇಮಿಸಿ 2021ರ ಏಪ್ರಿಲ್ 3ರಂದು ಅಧಿಸೂಚನೆ ಹೊರಡಿಸಲಾಗಿದೆ' ಎಂದರು.

'ಶಿವಶಂಕರಪ್ಪ ಸಾಹುಕಾರ ಅವರು ರಾಷ್ಟ್ರೀಯ ಸಹಕಾರ ಯೂನಿಯನ್‌ನಲ್ಲಿ 10 ವರ್ಷ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿದ್ದರು. ಅವರ ಕೆಲಸ ತೃಪ್ತಿಕ-ರವಾಗಿಲ್ಲವೆಂದು ಈ ಯೂನಿಯನ್ ನಕಾರಾತ್ಮಕ ವರದಿ ನೀಡಿ ಅವರನ್ನು ಹುದ್ದೆಯನ್ನು ಕೈಬಿಟ್ಟಿತ್ತು' ಎಂದೂ ತಿಳಿಸಿದರು.

ಆರ್.ಕೆ. ಶ್ರೀಕಂಠನ್ ಟ್ರಸ್ಟ್‌ನಿಂದ ಸಂಕ್ರಾಂತಿ ಸಂಗೀತೋತ್ಸವ

ಬೆಂಗಳೂರು: ನಗರದ ಆರ್.ಕೆ.ಶ್ರೀಕಂಠನ್ ಟ್ರಸ್ಟ್ ವತಿಯಿಂದ ಜ.14ರಿಂದ 16ರ ತನಕ 27ನೇ ಸಂಕ್ರಾಂತಿ ಸಂಗೀತೋತ್ಸವ ಹಾಗೂ ಡಾ.ಆರ್.ಕೆ.ಶ್ರೀಕಂಠನ್ ಅವರ 103ನೇ ಜನ್ಮ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಕೇರಳದ ತ್ರಿಶೂರ್ ವಿ. ರಾಮಚಂದ್ರನ್ ಅವರಿಗೆ 'ಶ್ರೀಕಂಠಶಂಕರ' ಹಾಗೂ ಶಿವಮೊಗ್ಗ ಜಿಲ್ಲೆ ಮತ್ತೂರಿನ ಅಕ್ಷರಾನಂದೇಂದ್ರ ಸರಸ್ವತಿ ಸ್ವಾಮೀಜಿ ಅವರಿಗೆ 'ಶಂಕರಾದ್ವೈತ ತತ್ವಜ್ಞ' ಬಿರುದು ಹಾಗೂ ಪ್ರಶಸ್ತಿ ನೀಡಿ ಜ. 14ರಂದು ಗೌರವಿಸಲಾಗುವುದು. ಬಂಡಾರಕೇರಿ ಮಠದ ವಿದ್ಯೇಶತೀರ್ಥ ಸ್ವಾಮೀಜಿ ಹಾಗೂ ಪಾವಗಡ ಪ್ರಕಾಶ ರಾವ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಅದೇ ಕಾರ್ಯಕ್ರಮದಲ್ಲಿ ತ್ರಿಶೂರ್ ವಿ. ರಾಮಚಂದ್ರನ್ ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ ಎಂದು ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ರುದ್ರಪಟ್ಟಂ ಎಸ್. ರಮಾಕಾಂತ್ ತಿಳಿಸಿದ್ದಾರೆ.

ಮಲ್ಲೇಶ್ವರದ 14ನೇ ಕ್ರಾಸ್‌ನ ಸೇವಾ ಸದನದ ಹಾಲ್‌ನಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಜ. 15ರ ಭಾನುವಾರ ಅರುಣ್‌ಕುಮಾರ್, ಕೇರಳದ ವಾಮನ ನಂಬೂದಿರಿ, ಚೆನ್ನೈನ ನಿತ್ಯಾ ಹಾಗೂ ವಿದ್ಯಾ ಅವರ ಸಂಗೀತ ಕಾರ್ಯಕ್ರಮಗಳು ಮೆರುಗು ನೀಡಲಿವೆ. 16ರಂದು ಶಿವಮೊಗ್ಗ ಕುಮಾರಸ್ವಾಮಿ ಅವರ ಸ್ಯಾಕ್ಸಫೋನ್ ವಾದನ ಏರ್ಪಡಿಸಲಾಗಿದೆ. ಅದೇ ದಿನ ರಾಮ್‌ಪ್ರಸಾದ್ ಅವರಿಂದ ಹಾಡುಗಾರಿಕೆ ನಡೆಯಲಿದೆ ಎಂದಿದ್ದಾರೆ.



ನೀಟ್, ಐಐಟಿಗೆ ಕೋಚಿಂಗ್

ಬೆಂಗಳೂರು: ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆಯಲ್ಲಿ ನೀಟ್, ಸಿಇಟಿ ಮತ್ತು ಐಐಟಿ–ಜೆಇಇಗೆ ಪ್ರತಿ ವರ್ಷ ಕೋಚಿಂಗ್ ನೀಡಲಾಗುತ್ತಿದೆ.

ಸಂಸ್ಥೆಯಲ್ಲಿ ನುರಿತ ಉಪನ್ಯಾಸಕರ ತಂಡವಿದೆ. ಮುಂಬೈ, ಹೈದರಾಬಾದ್, ದೆಹಲಿ, ಕೋಲ್ಕತ್ತ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮುಂತಾದ ಹಲವು ಸ್ಥಳಗಳಲ್ಲಿನ ಅನುಭವಿ ಉಪನ್ಯಾಸಕರು ಬೋಧಿಸಲಿದ್ದಾರೆ.

ವಿದ್ಯಾರ್ಥಿಗಳಿಗೆ ಅತ್ಯಂತ ವ್ಯವಸ್ಥಿತವಾದ ಡಿಲಕ್ಸ್ ಹಾಸ್ಟೆಲ್ ವ್ಯವಸ್ಥೆ ಲಭ್ಯವಿದೆ. ಜತೆಗೆ, ಸಂಸ್ಥೆಯು ಉತ್ತಮ ಕ್ಯಾಂಪಸ್, ವಿಶಾಲವಾದ ಕೊಠಡಿಗಳು, ವ್ಯವಸ್ಥಿತವಾದ ಪೀಠೋಪಕರಣ, ಇ-ಗ್ರಂಥಾಲಯ ವ್ಯವಸ್ಥೆ ಇದೆ.

ಮಾಹಿತಿಗೆ, ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆ, ಯಲಹಂಕ ಉಪನಗರ, ಶೇಷಾದ್ರಿಪುರ ಕಾಲೇಜು ಹತ್ತಿರ, ಬೆಂಗಳೂರು.

ಮೊಬೈಲ್ ದೂರವಾಣಿ: 9513657041, 7676917777

12ರಿಂದ ಸಂಸ್ಮರಣೋತ್ಸವ

ನಾಗಮಂಗಲ (ಮಂಡ್ಯ): ತಾಲ್ಲೂಕಿನ ಆದಿಚುಂಚನಗಿರಿ ಕ್ಷೇತ್ರದಲ್ಲಿ ಜ.12ರಿಂದ ಡಾ.ಬಾಲಗಂಗಾಧ-ರನಾಥ ಸ್ವಾಮೀಜಿ ಅವರ 78ನೇ ವರ್ಷದ ಜಯಂತಿ, 10ನೇ ವರ್ಷದ ಸಂಸ್ಮರಣೋತ್ಸವ ನಡೆಯಲಿವೆ ಎಂದು ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ತಿಳಿಸಿದ್ದಾರೆ.

ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜ.18ರವ-ರೆಗೆ ಕಾರ್ಯಕ್ರಮಗಳು ನಡೆಯಲಿವೆ. ಜ.12ರಂದು ರೈತರ ಸಮಾವೇಶ, 13ರಂದು ರಾತ್ರಿ ಹೋಮ, 14ರಂದು ಹಿರಿಯ ವಿದ್ಯಾರ್ಥಿಗಳ ವೇದಿಕೆಯಿಂದ ಕಾರ್ಯಕ್ರಮ ನಡೆಯಲಿದೆ ಎಂದು ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.15ರಂದು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ, 16ರಂದು ಕುವೆಂಪು ಸಾಹಿತ್ಯ ದರ್ಶನ, 17ರಂದು ರಾಜ್ಯಮಟ್ಟದ ಚುಂಚಾದ್ರಿ ಮಹಿಳಾ ಸಮಾವೇಶ, 18ರಂದು ಡಾ.ಬಾಲ-ಗಂಗಾಧರನಾಥ ಸ್ವಾಮೀಜಿ ಅವರ 78ನೇ ಜಯಂತಿ, ಭಕ್ತ, ಸಂತ ಸಂಗಮ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

ಸಿಐಡಿ ಹೆಸರಿನಲ್ಲಿ ಹಣ ವಸೂಲಿ

ಬೆಂಗಳೂರು: ದೊಡ್ಡನೆಕ್ಕುಂದಿಯಲ್ಲಿ-ರುವ ಸ್ಪಾವೊಂದಕ್ಕೆ ನುಗ್ಗಿದ್ದ ವ್ಯಕ್ತಿಯೊಬ್ಬ ಸಿಐಡಿ ಪೊಲೀಸರ ಹೆಸರಿನಲ್ಲಿ ಬೆದರಿಸಿ, ₹ 30 ಸಾವಿರ ವಸೂಲಿ ಮಾಡಿದ್ದು, ಈ ಸಂಬಂಧ ಮಹದೇವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಪಾ ಮಾಲೀಕರು ದೂರು ನೀಡಿದ್ದಾರೆ. ಆರೋಪಿ ಪ್ರದೀಪ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜ. 2ರಂದು ಮಸಾಜ್ ಮಾಡಿಸುವ ಸೋಗಿನಲ್ಲಿ ಸ್ಪಾಗೆ ಬಂದಿದ್ದ ಆರೋಪಿ, ಸಿಐಡಿ ಪೊಲೀಸ್ ಎಂಬುದಾಗಿ ಗುರುತಿನ ಚೀಟಿ ತೋರಿಸಿದ್ದ. 'ಸ್ಪಾದಲ್ಲಿ ಅಕ್ರಮ ಚಟುವಟಿಕೆ ನಡೆಸುತ್ತಿದ್ದೀರಿ. ಗ್ರಾಹಕರ ವಿಡಿಯೊ ಚಿತ್ರೀಕರಿಸಿ, ಬೆದರಿಸಿ ಹಣ ಸುಲಿಗೆ ಮಾಡುತ್ತಿದ್ದೀರಿ. ಜೈಲಿಗೆ ಕಳುಹಿಸುತ್ತೇನೆ. ಈ ರೀತಿ ಮಾಡಬಾರದೆಂದರೆ ಹಣ ನೀಡಬೇಕು' ಎಂದು ಆರೋಪಿ ಒತ್ತಾಯಿಸಿದ್ದ.

ಕ್ಷೇಮ ಕುಶಲ

> ಜೀವನದ ಪ್ರತಿಯೊಂದು ಸನ್ನಿವೇಶವೂ ನಮಗೆ ಪಾಠವೇ. ಪ್ರೇಮ, ಸಹಾನುಭೂತಿ, ಭಯ, ದುಃಖ, ದಯಾಪರತೆ, ಅಸೂಯೆ, ಅಳು, ನಗು, ಕೋಪ, ಒಂಟಿಭಾವ – ಇವೆಲ್ಲವುಗಳಿಂದಲೂ ನಾವು ಜೀವನಪಾಠವನ್ನು ಕಲಿಯಬಹುದು.

ಶಾಂತಿಯ ಮಾರ್ಗಗಳು

ಕಮಲೇಶ್ ಪಟೇಲ್ (ದಾಜಿ)

ಇಂದು ನನ್ನ ಸ್ನೇಹಿತರೊಬ್ಬರು ಶುಭಾಶಯ ಕೋರುತ್ತ ಕೇಳಿದರು, ‘ಶುಭೋದಯ ದಾಜಿ, ಹೇಗಿದ್ದೀರಿ?’ ಅಂತಹ ಸಮಯದಲ್ಲಿ ನಾವು ಅಪ್ರಯತ್ನವಾಗಿ ಉತ್ತರಿಸುತ್ತೇವೆ: ‘ಚೆನ್ನಾಗಿದ್ದೇನೆ’. ಅನಂತರ ನಮಗಿರುವ ಅನಾರೋಗ್ಯಗಳೋ ಕೆಲಸಕ್ಕೋ ಕುಟುಂಬಕ್ಕೋ ಸಂಬಂಧಿಸಿದ ಚಿಂತೆಗಳು ನೆನಪಾಗುತ್ತವೆ. ಪರಿಸ್ಥಿತಿ ಯಾವಾಗಲೂ ಸಂಪೂರ್ಣವಾಗಿ ಸರಿಯಾಗಿರುವುದಿಲ್ಲ.

ಆತಂಕ, ತಳಮಳ ಮತ್ತು ದುಗುಡಗಳಿಗೆ ನಾವೇ ಅವಕಾಶ ಮಾಡಿಕೊಡುತ್ತೇವೆ. ಶಾಂತಿಯನ್ನು ಅನ್ವೇಷಿಸುವ ನಾವು, ಅರಿವಿಲ್ಲದೆಯೆ ಶಾಂತಿಯಿಲ್ಲದಿರುವಾಗ ಸ್ಪಂದಿಸದೆ, ಪ್ರತಿಕ್ರಿಯಿಸುತ್ತೇವೆ. ಶಾಂತಿ ನಮಗೆ ಶಕ್ತಿ ನೀಡುತ್ತದೆ. ಶಾಂತಿ ಇಲ್ಲದಿದ್ದರೆ ನಮಗೆ ಜೀವನದ ಮೇಲೆ ಹಿಡಿತ ಕಳೆದುಕೊಂಡಂತೆ ಭಾಸವಾಗುತ್ತದೆ.

ಸಾಮಾನ್ಯವಾಗಿ ನಾವು ನಮ್ಮ ಜೀವನವನ್ನು ಒಂದು ನಿರ್ದಿಷ್ಟ ಕೋನದಿಂದ ಪರಿಶೀಲಿಸುತ್ತೇವೆ. ನಮಗೆ ನಮ್ಮದೇ ವ್ಯಕ್ತಿತ್ವ ಮತ್ತು ಪ್ರವೃತ್ತಿಗಳಿವೆ. ಭೂಮಿಯಲ್ಲಿ ನಾವು ಕೆಲವೇ ದಿನಗಳ ಅತಿಥಿಗಳು. ಹಾಗಾಗಿ, ಭೂಮಿಯನ್ನು ನಮಗೆ ಪಾಠ ಕಲಿಸುವ ಶಾಲೆಯಂತೆ ಪರಿಗಣಿಸಿದರೆ, ನಮ್ಮ ಕಣ್ಣು, ಹೃದಯ ಮತ್ತು ಮನಸ್ಸುಗಳನ್ನು ತೆರೆದು, ನಮ್ಮ ಜೀವನಪಾಠಗಳನ್ನು ಸೋಲು-ಗೆಲುವುಗಳ ತಕ್ಕಡಿಯಲ್ಲಿಟ್ಟು ತೂಗದೆ, ಸಿದ್ಧಮನಸ್ಸಿನಿಂದ ಪ್ರೇಮದಿಂದ ಸ್ವೀಕರಿಸಬೇಕು. ಆಗ ನಾವು ನಮ್ಮ ಮಾನಸಿಕ ಹಾಗೂ ಭಾವನಾತ್ಮಕ ಗ್ರಹಿಕೆಗಳನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಜೀವನದ ಪ್ರತಿಯೊಂದು ಸನ್ನಿವೇಶವೂ ನಮಗೆ ಪಾಠವೇ. ಪ್ರೇಮ, ಸಹಾನುಭೂತಿ, ಭಯ, ದುಃಖ, ದಯಾಪರತೆ, ಅಸೂಯೆ, ಅಳು, ನಗು, ಕೋಪ, ಒಂಟಿಭಾವ – ಇವೆಲ್ಲವುಗಳಿಂದಲೂ ನಾವು ಜೀವನಪಾಠವನ್ನು ಕಲಿಯಬಹುದು. ನಾವು ಇದಕ್ಕಾಗಿ ವಿಶೇಷವಾಗಿ ಸಿದ್ಧರಾಗಬೇಕಿಲ್ಲ. ಆದರೆ ನಾವು ಮುಕ್ತಭಾವದಿಂದ ಈ ಸಂದರ್ಭಗಳನ್ನು ಸ್ವೀಕರಿಸಬೇಕು. ಈ ಪ್ರಯತ್ನವೇ ಶಾಂತಿಯನ್ನು ನೀಡುತ್ತದೆ.



ಮಗುವೊಂದು ತನ್ನ ತಾಯಿಯ ಮಡಿಲಲ್ಲಿ ಇರಬಯಸುವಂತೆ ಪ್ರಕೃತಿಯ ಮಡಿಲಲ್ಲೂ ಇರಬಯಸುವುದು ಮಾನವ ಸಹಜಗುಣ. ನಾವು ಪ್ರಕೃತಿಯ ಮಡಿಲಲ್ಲೂ ಶಾಂತಿಯನ್ನು ಅನುಭವಿಸುತ್ತೇವೆ. ಪ್ರಕೃತಿ ನಮ್ಮನ್ನು ಆವರಿಸಿದೆ. ನಗರದ ಗದ್ದಲದ ನಡುವೆಯೂ ಪ್ರಕೃತಿಯನ್ನು ನಮ್ಮ ಜೀವನದಲ್ಲಿ ಕಂಡುಕೊಳ್ಳುವ ಅರ್ಥಪೂರ್ಣ ಮಾರ್ಗಗಳಿವೆ. ನಿಮ್ಮ ಅಪಾರ್ಟ್‌ಮೆಂಟ್‌ನ ಬಾಲ್ಕನಿಯಲ್ಲಿ ಕುಂಡಗಳಲ್ಲಿ ಬೆಳೆಸಿದ ಪುಟ್ಟ ಕೈತೋಟವು ಅಳಿಲುಗಳನ್ನು, ಕೀಟಗಳನ್ನು, ಚಿಟ್ಟೆಗಳನ್ನು ಆಕರ್ಷಿಸುತ್ತದೆ. ಮುಂಜಾನೆಯ ಧ್ಯಾನದ ನಂತರ ಬೆಳಗು ಹರಿಯುತ್ತಲೇ, ಮನೆಯ ಮಾಳಿಗೆಯ ಮೇಲಿನಿಂದ ಉದಯಿಸುತ್ತಿರುವ ಸೂರ್ಯನನ್ನು ನೋಡುವುದು, ಅಡುಗೆಮನೆಯ ಕಿಟಕಿಯ ಮೇಲೆ ಔಷಧೀಯ ಸಸ್ಯಗಳನ್ನು ಇಟ್ಟು, ಅವುಗಳನ್ನು ಪ್ರೇಮದಿಂದ ಬೆಳೆಸುವುದು, ಹತ್ತಿರದ ಉದ್ಯಾನದಲ್ಲಿ ನಿಯಮಿತವಾಗಿ ಜಾಗಿಂಗ್ ಮಾಡುವುದು, ನಿಮ್ಮ ಮಲಗುವ ಕೋಣೆಯ ಬಾಲ್ಕನಿಯಲ್ಲಿ ನೀರಿನ ಬಟ್ಟಲನ್ನಿಟ್ಟು ಹಕ್ಕಿಗಳ ಬಾಯಾರಿಕೆಯನ್ನು ತಣಿಸುವುದು – ಇವು ಕೆಲವು ಅಂಥ ಉದಾಹರಣೆಗಳು. ಪ್ರಕೃತಿಯನ್ನು ನಮ್ಮ ಜೀವನಗಳಲ್ಲಿ ಸಾಕ್ಷಾತ್ಕರಿಸಿಕೊಳ್ಳಲು ಪ್ರತಿಯೊಬ್ಬರೂ ಅವರವರ ಅಗತ್ಯ ಮತ್ತು ಅವಕಾಶಗಳಿಗೆ ತಕ್ಕಂತೆ ತೊಡಗಬೇಕು. ಪ್ರಕೃತಿಯ ಭೌತಿಕ ಅಂಶಗಳಾದ ಹಕ್ಕಿಗಳು, ದುಂಬಿಗಳು, ಗಿಡಮರಗಳು ಮತ್ತು ಪ್ರಾಣಿಗಳೊಂದಿಗೆ ನಮ್ಮನ್ನು ಬೆಸೆಯುವಂಥ ಚಟುವಟಿಕೆಗಳಲ್ಲಿ ಸಂತೋಷದಿಂದ ತೊಡಗಬೇಕು. ಅತ್ಯಂತ ಗಡಿಬಿಡಿಯ ಮತ್ತು ಅಸ್ತವ್ಯಸ್ತ ಎನಿಸಿರುವ ನಗರಜೀವನದಲ್ಲೂ ಪ್ರಕೃತಿಯ ವಿವರಗಳೊಂದಿಗೆ ಬೆಸೆಯುವ ಭಾವನೆಯೇ ನಮಗೆ ಶಾಂತಿಯನ್ನು ಕೊಡುತ್ತದೆ.

ನಿಮ್ಮ ಹೃದಯದಲ್ಲಿ ಬೆಳಕಿನ ಮೂಲವೊಂದು ನೆಲೆಯಾಗಿದೆ. ನಿಮಗೆ ಖಂಡಿತವಾಗಲೂ ಅದರ ಅನುಭವವಾಗಿರಬೇಕು. ಈ ಅನುಭವ ಒಬ್ಬೊಬ್ಬರಿಗೂ ವಿಭಿನ್ನವಾಗಿರ ಬಹುದು. ತಮ್ಮ ತಮ್ಮ ಅಧ್ಯಯನ, ತಿಳಿವಳಿಕೆ, ಸಾಂಸ್ಕೃತಿಕ ಹಿನ್ನೆಲೆ ಮತ್ತು ಅಧ್ಯಾತ್ಮಸಾಧನೆಗೆ ತಕ್ಕಂತೆ ವ್ಯಾಖ್ಯಾನಿಸಬಹುದು. ಒಬ್ಬರಿಗೆ ಅದು ಪ್ರೇರಣೆಯ ಕಿಡಿಯಾಗಿರಬಹುದು ಅಥವಾ ಇನ್ನೊಬ್ಬರಿಗೆ ಕರುಣೆಯ ಆಕರವಾಗಿರಬಹುದು ಅಥವಾ ಮಗದೊಬ್ಬರಿಗೆ ಶಾಂತಿಯುತ ಧ್ಯಾನಾಭ್ಯಾಸವಾಗಿರಬಹುದು. ಯಾರಾದರೂ ಪ್ರಯತ್ನಪಟ್ಟು, ನಿರಂತರ ಸಾಧನೆಯನ್ನು ಮಾಡಿದರೆ ಆಗ ಖಂಡಿತವಾಗಿ ಆ ಸುಂದರ ಶಕ್ತಿಯನ್ನು ನಿಮ್ಮ ಹೃದಯದಲ್ಲಿ ಕಾಣಬಲ್ಲಿರಿ. ಈ ಆತ್ಮಜ್ಯೋತಿಯಲ್ಲಿ ಅಥವಾ ಶಕ್ತಿಯಲ್ಲಿ ಮುಳುಗಿದಾಗ, ನಿಮ್ಮ ಬಲ ಮತ್ತು ಶಾಂತಿ – ಇವು ವಿಸ್ತಾರವಾದುದರ ಅನುಭವ ಒದಗುತ್ತದೆ. ಈ ಆಧ್ಯಾತ್ಮಿಕ ಪ್ರಕ್ರಿಯೆ ನಮ್ಮ ಮಾನಸಿಕ ಹಾಗೂ ಭಾವನಾತ್ಮಕ ಸ್ವಾಸ್ಥ್ಯಕ್ಕೆ ಕಾರಣವಾಗುತ್ತದೆ. ಆದರೆ ಸುಖ-ದುಃಖಗಳ ಹೊರತಾಗಿಯೂ ನಾವು ಇದರೊಳಗೆ ಮನಃಪೂರ್ವಕವಾಗಿ ಮುಳುಗಲು ಹೇಗೆ ಸಾಧ್ಯ? ಧ್ಯಾನವನ್ನು ಅಭ್ಯಾಸ ಮಾಡುವುದರಿಂದ ಸಾಧ್ಯವಾಗುತ್ತದೆ.

ಬೆಳಕಿನ ಮೂಲ ಯಾವುದೋ ಅದನ್ನು ಕುರಿತು ನಾವು ಧ್ಯಾನಶೀಲರಾಗಬೇಕು; ಅಥವಾ ನಮ್ಮ ಹೃದಯದಲ್ಲಿರುವ ಪ್ರೇಮದ ಸಾರತತ್ತ್ವ ನಮ್ಮ ಧ್ಯಾನದ ಕೇಂದ್ರವಾಗಬೇಕು. ಇಂಥ ಧ್ಯಾನಕ್ರಿಯೆ ಆರಂಭದಲ್ಲಿ ಒಂದು ಸಾಧನೆಯ ಮಾರ್ಗವಾಗಿ, ಮುಂದೆ ಹಂತ ಹಂತವಾಗಿ, ಕೊನೆಗೆ ಇಡೀ ದಿನ ಅದೊಂದು ಅಪ್ರಯತ್ನಪೂರ್ವಕ ಸಹಜಕ್ರಿಯೆಯಾಗಿ ಸ್ಥಿರವಾಗುತ್ತದೆ. ಆರಂಭದಲ್ಲಿ ಧ್ಯಾನದ ನಿಯತಾಭ್ಯಾಸವು ನಮ್ಮನ್ನು ಹೆಚ್ಚು ಹಗುರಗೊಳಿಸುತ್ತದೆ; ಶಾಂತಿ-ಸಮಾಧಾನಗಳನ್ನು ಉಂಟುಮಾಡುತ್ತದೆ. ನಮಗೆ ಮಾನಸಿಕ ಸ್ಥೈರ್ಯವನ್ನೂ ಕೊಡುತ್ತದೆ. ಅಭ್ಯಾಸವು ತೀವ್ರವಾಗುತ್ತಿದ್ದಂತೆ, ಅದು ನಮ್ಮ ಜೀವನಶೈಲಿಯೇ ಆಗುತ್ತದೆ; ಆಗ ನಮ್ಮ ಮನಸ್ಸು ಎಲ್ಲ ಬಂಧನಗಳಿಂದಲೂ ಮುಕ್ತವಾಗುತ್ತದೆ. ನಮ್ಮ ದೃಷ್ಟಿಕೋನವೂ ವಿಶಾಲವಾಗುತ್ತದೆ. ಜೊತೆಗೆ ನಮ್ಮ ತಿಳಿವಳಿಕೆಯೂ ವಿಸ್ತಾರವಾಗಿ, ಅರಿವು ಕ್ರಿಯಾಶೀಲವಾಗುತ್ತದೆ. ಆಗ ಶಾಂತಿ ಎಂಬುದು ಸಹಜವಾಗಿಯೇ ನೆಲೆಯಾಗಿರುತ್ತದೆ.

❖



ಚಳಿಗಾಲದ ಶೀತದಿಂದ ರಕ್ಷಣೆ

ಡಾ. ವಿಜಯಲಕ್ಷ್ಮಿ ಪಿ.

ಚಳಿಗಾಲದಲ್ಲಿ ಶೀತವು ದೇಹದ ಒಳಗೂ ಹೊರಗೂ ವ್ಯಾಪಿಸಿರುತ್ತದೆ. ಗಾಳಿಯೂ ಶೀತವಾಗಿ ಬೀಸುತ್ತದೆ. ಇದರಿಂದಾಗಿ ಗಿಡಮರಗಳು ಎಲೆಗಳನ್ನು ಉದುರಿಸಿ, ತಂಪಿನಿಂದ ರಕ್ಷಣೆ ಪಡೆಯಲು ತನ್ನದೇ ಆದಂತಹ ಹೊಂದಾಣಿಕೆಗಳನ್ನು ಮಾಡಿಕೊಂಡಿರುತ್ತವೆ. ವಾತಾವರಣದ ತಂಪಿನಿಂದ ಮನುಷ್ಯನ ದೇಹದಲ್ಲಿರುವ ಕಫದ ಅಂಶವೂ ಗಟ್ಟಿಯಾಗುತ್ತಾ ಹೋಗುತ್ತದೆ. ವಾಯುವೂ ಶೀತದಿಂದ ತನ್ನ ಗತಿಯನ್ನು ನಿಧಾನಗೊಳಿಸುತ್ತದೆ. ಇದರಿಂದ ಚರ್ಮ ಮತ್ತು ಪುಪ್ಪುಸಗಳಲ್ಲಿ ನಡೆಯುವ ಉಸಿರಾಟದ ಪ್ರಕ್ರಿಯೆಯೂ ನಿಧಾನಗತಿಯನ್ನು ಹೊಂದುತ್ತದೆ. ಇದರಿಂದಾಗಿ ಉಸಿರಾಟಕ್ಕೆ ಮತ್ತು ಚರ್ಮಕ್ಕೆ ಸಂಬಂಧಿಸಿದ ರೋಗಗಳು ಹೆಚ್ಚಾಗುತ್ತವೆ. ಹೀಗಾಗಿ ಈ ಸಮಸ್ಯೆಗಳಿಂದ ತಪ್ಪಿಸಿಕೊಳ್ಳಲು ನಾವು ನಮ್ಮ ದಿನಚರಿಯಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ.

> ಚಳಿಗಾಲದಲ್ಲಿ ಬಾಹ್ಯ ತಂಪಿನಿಂದ ರಕ್ಷಿಸಿಕೊಳ್ಳಲು ದೇಹವು ಸಹಜವಾಗಿಯೇ ತನ್ನ ಆಂತರಿಕ ಉಷ್ಣತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಆದ್ದರಿಂದ ಜೀರ್ಣಕ್ರಿಯೆ ಹೆಚ್ಚಾಗುತ್ತದೆ. ಹೀಗಾಗಿ ಸಕಾಲದಲ್ಲಿ ಆಹಾರವನ್ನು ಸೇವಿಸುವುದು ಒಳ್ಳೆಯದು.

ಉಸಿರಾಟಕ್ಕೆ ಸಂಬಂಧಪಟ್ಟಂತೆ ಕಾಣಿಸಿಕೊಳ್ಳುವ ನೆಗಡಿ, ಕೆಮ್ಮು ದಮ್ಮು ತಲೆನೋವುಗಳು ಮತ್ತು ಚರ್ಮ ಒಡೆದು ರಕ್ತ ಬರುವುದು, ಚರ್ಮರೋಗಗಳ ಕಾಟ, ಮೈ ತುರಿಕೆಗಳು ಮತ್ತು ಗಂಟುಗಳಲ್ಲಿ ನೋವು, ಊತ, ಬಿಗಿತಗಳು – ಹೀಗೆ ಈ ಕಾಲದಲ್ಲಿ ಅನೇಕ ರೋಗಗಳು ಉಲ್ಬಣಗೊಳ್ಳಬಹುದು, ಅಥವಾ ಪ್ರಾರಂಭವಾಗಬಹುದು. ಇದಕ್ಕೆಲ್ಲ ವಾತಾವರಣದ ಬದಲಾವಣೆಗೆ ದೇಹ ಒಗ್ಗಿಕೊಳ್ಳಲು ಸಾಧ್ಯವಾಗದಿರುವುದೇ ಮುಖ್ಯ ಕಾರಣ. ಈ ರೋಗಗಳಿಂದ ದೂರವಿರಲು ಮೊದಲು ಬೆಚ್ಚಗಿನ ಬಟ್ಟೆಗಳನ್ನು ಧರಿಸುವುದು, ಬೆಚ್ಚಗಿನ ವಾತಾವರಣದಲ್ಲಿ ಇರುವುದು, ಬಿಸಿ ಆಹಾರ ಮತ್ತು ಬಿಸಿ ನೀರಿನ ಸೇವನೆ – ಇವೇ ಮೊದಲ ಚಿಕಿತ್ಸೆ

ಚಳಿಗಾಲದಲ್ಲಿ ನೀರು ಹೆಪ್ಪುಗಟ್ಟುವಂತೆಯೇ ದೇಹದಲ್ಲಿರುವ ದ್ರವಾಂಶ/ಕಫಗಳೂ ಗಟ್ಟಿಯಾಗುತ್ತವೆ. ಇದು ಹೆಚ್ಚಾದಲ್ಲಿ ನೆಗಡಿ, ಕೆಮ್ಮು, ದಮ್ಮು, ಕಫ ಹೆಚ್ಚಾಗಿ ತಲೆನೋವು, ಸೀನು ಇತ್ಯಾದಿ ಕಫಸಂಬಂಧಿ ತೊಂದರೆಗಳು ಕಾಡುತ್ತವೆ. ಒಟ್ಟಾರೆ ಈ ಸಮಯದಲ್ಲಿ ದೇಹದ ಆಂತರಿಕ ಉಷ್ಣತೆ ಕಡಿಮೆಯಾಗದಂತೆ ನೋಡಿಕೊಳ್ಳುವುದು ಮುಖ್ಯ. ಮೈ ಬಿಸಿ ಬರುವವರೆಗೂ ವ್ಯಾಯಾಮ ಮಾಡಬೇಕು; ವ್ಯಾಯಾಮದ ನಂತರ – ಬಜೆ, ಅಗರು, ಅರಿಶಿನ, ಸೀಗೆಪುಡಿಯಂತಹ, ಮೈ ಬಿಸಿ ಬರಿಸುವ, ಕಫವನ್ನು ಕರಗಿಸುವ ಪದಾರ್ಥಗಳಿಂದ – ಮೈ-ಕೈಗಳನ್ನು ತಿಕ್ಕಿಕೊಂಡು ಬಿಸಿನೀರಿನ ಸ್ನಾನವನ್ನು ಮಾಡುವುದು ಅಗತ್ಯ. ದೇಹದಲ್ಲಿ ಕಫ ಗಟ್ಟಿಯಾಗಿ, ಆ ಮೂಲಕ ಬರುವ ಸಮಸ್ಯೆಗಳಿಂದ ದೂರವಿರಲು, ಮುಖಕ್ಕೆ ದಿನವೂ ಹಬೆಯನ್ನು ತೆಗೆದುಕೊಳ್ಳುವುದು, ಹಣೆಗೆ ಬಜೆ-ಶುಂಠಿಗಳ ಲೇಪವನ್ನು ಹಾಕುವುದು, ಶುಂಠಿ-ಅರಿಶಿನಗಳನ್ನು ಹಾಕಿ ಕುದಿಸಿರುವ ಹಾಲನ್ನು ಸೇವಿಸುವುದು, ಓಮದ ಚಟ್ನಿಪುಡಿಯನ್ನು ಆಹಾರದೊಡನೆ ಸೇವಿಸುವುದು – ಇಂಥವುಗಳನ್ನು ಮಾಡಬೇಕು. ಕೆಲವೊಮ್ಮೆ ಇವು ನೆಗಡಿ, ಮೈಕೈ ನೋವು, ತಲೆನೋವು ಮುಂತಾದ ರೋಗಗಳಿಗೆ ಚಿಕಿತ್ಸೆಯೂ ಆಗುತ್ತದೆ. ಕಫದ ರೋಗಗಳನ್ನು ತಡೆಗಟ್ಟಲು ತಂಪಾದ ಪದಾರ್ಥಗಳಾದ ಐಸ್ ಕ್ರೀಂ, ತಂಪು ಪಾನೀಯಗಳು, ಅತಿ ತಂಪಾದ ಕ್ಷಾರೀಯ ಪಾನೀಯಗಳು, ಹಿಮ ಬೀಳುವಾಗ ತಂಪಾದ ವಾತಾವರಣದಲ್ಲಿ ಓಡಾಟ – ಇಂಥವನ್ನು ತ್ಯಜಿಸಬೇಕು. ಅತಿ ತಂಪಾದ ಪದಾರ್ಥಗಳು, ಜೀರ್ಣಕ್ಕೆ ಕಷ್ಟವಾಗುವಂತಹ ಪದಾರ್ಥಗಳು – ಎಂದರೆ ಕರಿದ ತಿಂಡಿಗಳು, ಚೀಸ್-ಪನ್ನೀರ್‌ಗಳಿರುವ ಪದಾರ್ಥಗಳ ಅತಿಯಾದ ಸೇವನೆ, ನಿತ್ಯವೂ ಮಾಂಸಾಹಾರ ಸೇವನೆ, ಅತಿಯಾದ ಮದ್ಯಸೇವನೆಯಿಂದ ದೂರವಿರುವುದು ಅತ್ಯಗತ್ಯ.

ಚರ್ಮವು ವಿಪರೀತವಾಗಿ ಒಡೆದಿದ್ದರೆ ಎಳ್ಳೆಣ್ಣೆ ಮತ್ತು ತುಪ್ಪವನ್ನು ಮಿಶ್ರಮಾಡಿ, ಸಾಸಿವೆ, ಓಮ, ಜೀರಿಗೆ, ಮೆಣಸು ಇವುಗಳನ್ನು ಹಾಕಿ ಕಾಯಿಸಿದ ಮಿಶ್ರಣವನ್ನು ಮೈಗೆ ಹಚ್ಚಿ, ತೆಳ್ಳಗಿನ ಬಟ್ಟೆಗಳನ್ನು ಹಾಕಿಕೊಂಡು ಬಿಸಿನೀರಿನಲ್ಲಿ ಸ್ನಾನ ಮಾಡುವುದು ಒಳಿತು. ಕಾಲಿನ ಹಿಮ್ಮಡಿ ಒಡೆದಿದ್ದರೆ ಈ ಮಿಶ್ರಣವನ್ನು ಹಿಮ್ಮಡಿಗೆ ಚೆನ್ನಾಗಿ ತಿಕ್ಕಿ ಕಾಲನ್ನು ಬಿಸಿನೀರಿನಲ್ಲಿ ಸ್ವಲ್ಪ ಸಮಯ ಮುಳುಗಿಸಿ ಇಟ್ಟುಕೊಳ್ಳುವುದರಿಂದ ಬಿರುಕುಗಳು ಕಡಿಮೆ ಆಗುತ್ತವೆ. ಗಂಟುನೋವಿಗೆ ಮೇಲೆ ಹೇಳಿದ ಮಿಶ್ರಣವನ್ನು ನೋವಿರುವ ಗಂಟುಗಳಿಗೆ ಹಚ್ಚಿ ತಿಕ್ಕಿ, ಶುಂಠಿ ಮತ್ತು ಬಜೆಪುಡಿಗಳನ್ನು ಬಿಸಿನೀರಿನಲ್ಲಿ ಕಲಸಿ ದಪ್ಪಗೆ ಲೇಪ ಹಾಕುವುದರಿಂದ ಕಡಿಮೆ ಆಗುತ್ತದೆ.

ಚಳಿಗಾಲದಲ್ಲಿ ಬಾಹ್ಯ ತಂಪಿನಿಂದ ರಕ್ಷಿಸಿಕೊಳ್ಳಲು ದೇಹವು ಸಹಜವಾಗಿಯೇ ತನ್ನ ಆಂತರಿಕ ಉಷ್ಣತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಆದ್ದರಿಂದ ಜೀರ್ಣಕ್ರಿಯೆ ತ್ವರಿತವಾಗುತ್ತದೆ, ಎಂದರೆ ಹೆಚ್ಚಾಗುತ್ತದೆ. ಸಕಾಲದಲ್ಲಿ ಆಹಾರ ಸೇವಿಸದಿದ್ದರೆ ಅಮ್ಲಪಿತ್ತ ರೋಗಿಗಳಲ್ಲಿ ಅಮ್ಲತೆ ಹೆಚ್ಚಾಗಿ ಅಜೀರ್ಣ, ಆಂತರಿಕ ಅಂಗಗಳಲ್ಲಿ ಉರಿಯೂತ, ಮೂತ್ರದ ತೊಂದರೆಗಳು ಹೆಚ್ಚಾಗುತ್ತವೆ. ಗಂಟುಗಳಲ್ಲಾಗುವ ಉರಿಯೂತದಿಂದಾಗಿ ಸಂದುನೋವು, ಊತಗಳು ಹೆಚ್ಚಾಗುತ್ತವೆ. ಇವನ್ನು ತಡೆಗಟ್ಟಲು ಮತ್ತು ಚಿಕಿತ್ಸೆಯಾಗಿ ಪುನರ್ಪುಳಿಯ (ಕೋಕಮ್) ಬಿಸಿ ಪಾನಕ ಮತ್ತು ಸಾರು, ಕಬ್ಬನ್ನು ತಿನ್ನುವುದು, ಕಬ್ಬಿನ ಹಾಲು (ತಂಪಾಗಿ, ಅಥವಾ ಮಂಜುಗಡ್ಡೆ ರಹಿತವಾಗಿ) ಬೆಲ್ಲ, ಕಾಕಂಬಿ, ಬೆಲ್ಲದಿಂದ ತಯಾರಿಸಿರುವ ಪದಾರ್ಥಗಳ ಸೇವನೆ ಒಳ್ಳೆಯದು. ಅಮ್ಲಪಿತ್ತ, ಉರಿಶೀತಗಳಿಂದ ರಕ್ಷಿಸಿಕೊಳ್ಳಲು ದೊಡ್ಡಬೋರೆ ಹಣ್ಣು, ಅಂಜೂರ, ಕುದಿಸಿ ತಣಿಸಿದ ದ್ರಾಕ್ಷರಸ/ ಪಾನಕದ ಸೇವನೆ ಒಳ್ಳೆಯದು.

ಈ ಕಾಲದಲ್ಲಿ ಶರೀರದ ಮತ್ತು ಚರ್ಮದ ಸ್ನಿಗ್ಧತೆಯನ್ನೂ ಬಲವನ್ನೂ ಕಾಪಾಡಿಕೊಳ್ಳಲು ದೇಹದಲ್ಲಿ ಜಿಡ್ಡಿನ ಅಂಶ ಕಡಿಮೆ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಎಣ್ಣೆಕಾಳುಗಳಾದ ಬಾದಾಮಿ, ಕಡಲೆಬೀಜ, ಎಳ್ಳು ಮೊದಲಾದವುಗಳನ್ನೂ ಮತ್ತು ಹೆಸರುಕಾಳು, ಉದ್ದು, ಅವರೆ, ತೊಗರಿ ಮುಂತಾದ ಕಾಳುಗಳನ್ನೂ ಉಪಯೋಗಿಸುವುದು ಉತ್ತಮ. ಆದ್ದರಿಂದಲೇ ನಮ್ಮ ಹಿರಿಯರು ಧನುರ್ಮಾಸ, ಸಂಕ್ರಾಂತಿಯಂದು ಹುಗ್ಗಿ, ಸಿಹಿ ಪೊಂಗಲ್, ಎಳ್ಳುಂಡೆ, ಎಳ್ಳುಬೆಲ್ಲ, ಕಬ್ಬು – ಇಂಥವುಗಳ ಸೇವನೆಯನ್ನು ಸಾಂಪ್ರದಾಯಿಕವಾಗಿ ವಿಧಿಸಿದ್ದಾರೆ. ಆದರೆ ‘ಅತಿಯಾದರೆ ಅಮೃತವೂ ವಿಷ’ ಎನ್ನುವಂತೆ, ಯೋಗ್ಯವಾದ ಪದಾರ್ಥಗಳನ್ನು ಹಿತವಾಗಿ, ಮಿತವಾಗಿ ಜೀರ್ಣಶಕ್ತಿಗೆ ಅನುಗುಣವಾಗಿ ಸೇವಿಸುವುದು ಒಳ್ಳೆಯದು.

ಪ್ರತಿವರ್ಷ ಚಳಿಗಾಲದಲ್ಲಿ ಮಾತ್ರವೇ ಕಾಡುವ ರೋಗಗಳು ಇದ್ದರೆ, ಶರತ್ ಋತುವಿನಲ್ಲೇ ವೈದ್ಯರ ಸಲಹೆಯನ್ನು ಪಡೆದುಕೊಳ್ಳಬೇಕು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಎಸ್ಸೆಸ್ಸೆಲ್ಸಿ

ಗಣಿತ

16) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) $a_1x + b_1y + C_1 = 0$ ಹಾಗೂ $a_2x + b_2y + C_2 = 0$ ರೂಪದ ರೇಖಾತ್ಮಕ ಸಮೀಕರಣಗಳಿಗೆ ಎಳೆದ ರೇಖೆಗಳು ಪರಸ್ಪರ ಐಕ್ಯಗೊಂಡರೆ ಕೆಳಗಿನವುಗಳಲ್ಲಿ ಸರಿಯಾದ ಸಂಬಂಧವು

(A) $\frac{a_1}{a_2} = \frac{b_1}{b_2} = \frac{c_1}{c_2}$ (B) $\frac{a_1}{a_2} \neq \frac{b_1}{b_2} \neq \frac{c_1}{c_2}$

(C) $\frac{a_1}{a_2} = \frac{b_1}{b_2} \neq \frac{c_1}{c_2}$ (D) $\frac{a_1}{a_2} \neq \frac{b_1}{b_2} = \frac{c_1}{c_2}$

ಉತ್ತರ:–

(A) $\frac{a_1}{a_2} = \frac{b_1}{b_2} = \frac{c_1}{c_2}$

2) ಚಿತ್ರದಲ್ಲಿ “O” ಕೇಂದ್ರವುಳ್ಳ ವೃತ್ತಕ್ಕೆ PA, PC ಮತ್ತು CD ಗಳು ಸ್ಪರ್ಶಕಗಳಾಗಿವೆ PA = 3Cm ಆದಾಗ PC ಯ ಉದ್ದವು.............



(A) 3 ಸೆಂ.ಮೀ. (B) 5 ಸೆಂ.ಮೀ.

(C) 8 ಸೆಂ.ಮೀ. (D) 2 ಸೆಂ.ಮೀ.

ಉತ್ತರ:– **(C) 8** ಸೆಂ.ಮೀ

3) ಕೊಟ್ಟಿರುವ ಚಿತ್ರದಲ್ಲಿ ಶಂಕುವಿನ ಭಿನ್ನಕದ ಘನಫಲ ...



(A) $\pi(r_1 + r_2)l$

(B) $\pi(r_1 - r_2)l$

(C) $\frac{1}{3}\pi h(r_1^2 - r_2^2 - r_1r_2)$

(D) $\frac{1}{3}\pi h(r_1^2 + r_2^2 + r_1r_2)$

ಉತ್ತರ:– (ಡಿ)

4) ಎರಡು ಸಂಖ್ಯೆಗಳ ವರ್ಗಗಳ ವ್ಯತ್ಯಾಸವು 180 ಆಗಿದೆ. ಚಿಕ್ಕ ಸಂಖ್ಯೆಯ ವರ್ಗವು ದೊಡ್ಡ ಸಂಖ್ಯೆಯ ಎಂಟರಷ್ಟಿದ್ದರೆ ಆ ಎರಡು ಸಂಖ್ಯೆಗಳು ಯಾವುವು?

ಎ) 18.. 19 ಬಿ) 18, 12

ಸಿ) 14 , 19 ಡಿ) 5, 10

ಉತ್ತರ:– (ಬಿ) 18, 12

ಪರಿಹಾರ:– **ದೊಡ್ಡ ಸಂಖ್ಯೆಯು** x **ಆಗಿರಲಿ**

ಚಿಕ್ಕ ಸಂಖ್ಯೆಯ ವರ್ಗ = 8 (ದೊಡ್ಡ ಸಂಖ್ಯೆ) = 8 x **ಆಗಿರಲಿ**

ಚಿಕ್ಕ ಸಂಖ್ಯೆ $= \sqrt{8x}$

ಸಮಸ್ಯೆಯ ಪ್ರಕಾರ

$$\Rightarrow x^2 + 8x = 180$$

$$x = \frac{-b \pm \sqrt{b^2 - 4ac}}{2a}$$

$$= \frac{-(-8) \pm \sqrt{(-8)^2 - 4(1)(-180)}}{2(1)}$$

$$= \frac{8 \pm \sqrt{64 + 720}}{2}$$

$$= \frac{8 \pm \sqrt{784}}{2}$$

$$= \frac{8 \pm 28}{2}$$

$$= \frac{8 + 28}{2} . \frac{8 - 28}{2}$$

$$x = 18, -10$$

−10 ಸರಿ ಹೊಂದಲಾರದು

$$\therefore x = 18$$

$$\therefore \sqrt{8x} = \sqrt{8x18} = \sqrt{144} = \pm 12$$

ಹೀಗಾಗಿ ಆ ಎರಡು ಸಂಖ್ಯೆಗಳು 18, 12

10) ಸಂಭವನೀಯತೆಯ ಸಿದ್ಧಾಂತದ ಮೂಲವು 16 ನೇ ಶತಮಾನವಾಗಿದೆ. ಇಟಲಿಯ ಭೌತಶಾಸ್ತ್ರಜ್ಞನಾದ ....ರವರ ‘The book on Games of Chance’ **ಎಂಬುದು ಈ ವಿಷಯದ ಮೊಟ್ಟ ಮೊದಲನೆ ಪುಸ್ತಕವಾಗಿದೆ**

A) ಜೆ. ಕಾರ್ಡನ್ (J.Cardan) B) ಜೆ. ಲಿಟ್ಲನ್

C) ಎಂ. ಜಸ್ಟಿನ್ D) ಎಂ. ರಿಪ್ಪನ್

ಉತ್ತರ : (A) ಜೆ. ಕಾರ್ಡನ್ (J.Cardan)

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಮಾದರಿ ಪ್ರಶ್ನೋತ್ತರ

ಪಿಯುಸಿ

ರಸಾಯನ ವಿಜ್ಞಾನ

61) ಈಥರ್ ಗಳ ಬಗ್ಗೆ ಬರೆಯಿರಿ

ಉತ್ತರ:- ಈಥರ್‌ಗಳನ್ನು i) ಆಲ್ಕೋಹಾಲ್‌ಗಳ ನಿರ್ಜಲೀಕರಣದಿಂದ ಮತ್ತು ii)ವಿಲಿಯಮ್‌ಸನ್ ಸಂಶ್ಲೇಷಣೆಯಿಂದ ತಯಾರಿಸಬಹುದು. ಈಥರ್‌ಗಳ ಕುದಿಯುವ ಬಿಂದುಗಳು ಆಲ್ಕೇನ್‌ಗಳಂತೆ ಹೋಲುತ್ತವೆ ಹಾಗೆಯೇ ಅವುಗಳ ಕರುಗುವಿಕೆ ಸಮಾನ ಅಣು ತೂಕ ಹೊಂದಿರುವ ಆಲ್ಕೋಹಾಲ್‌ಗಳಿಗೆ ಹೋಲಿಕೆಯಾಗುತ್ತದೆ. ಈಥರ್‌ಗಳಲ್ಲಿನ C–Oಬಂಧವನ್ನು ಹೈಡ್ರೋಜನ್ ಹ್ಯಾಲೈಡ್‌ಗಳ ಮೂಲಕ ಸೀಳಬಹುದು. ಇಲೆಕ್ಟ್ರಾನ್ ಆಕಾಂಕ್ಷಿಯ ಆದೇಶ್ಯ ಆಲ್ಕಾಕ್ಸಿ ಗುಂಪು ಆರೋಮ್ಯಾಟಿಕ್ ಉಂಗುರವನ್ನು ಸಕ್ರಿಯಗೊಳಿಸುತ್ತದೆ ಮತ್ತು ಒಳ ಬರುವ ಗುಂಪನ್ನು ಅರ್ಥೋ ಮತ್ತು ಪ್ಯಾರಾ ಸ್ಥಾನಗಳಿಗೆ ನಿರ್ದೇಶಿಸುತ್ತದೆ. ಈಥರ್‌ಗಳ ವರ್ಗೀಕರಣ ಆಮ್ಲಜನಕದ ಪರಮಾಣುಗೆ ಜೋಡಿಸಲಾದ ಗುಂಪುಗಳ ಆಧಾರದ ಮೇಲೆ ಮಾಡಲಾಗುತ್ತದೆ.

62) ಆಲ್ಡಿಹೈಡ್ ಮತ್ತು ಕೀಟೋನ್‌ಗಳ ಉಪಯೋಗವನ್ನು ಬರೆಯಿರಿ

ಉತ್ತರ:- ರಾಸಾಯನಿಕ ಉದ್ಯಮಲ್ಲಿ ಆಲ್ಡಿಹೈಡ್ ಮತ್ತು ಕೀಟೋನ್‌ಗಳನ್ನು ದ್ರಾವಕಗಳಾಗಿ, ಆರಂಭಿಕ ವಸ್ತುಗಳಾಗಿ, ಮತ್ತು ಇತರೆ ಉತ್ಪನ್ನಗಳ ಸಂಶ್ಲೇಷಣೆಯಲ್ಲಿ, ಹಾಗೂ ಕಾರಕಗಳಾಗಿ ಬಳಸುವರು. ಪರಿಚಿತ ಫಾರ್ಮಲಿನ್(40%) ದ್ರಾವಣ ಫಾರ್ಮಾಲ್ಡಿಹೈಡ್ ಆಗಿದ್ದು, ಇದನ್ನು ಜೈವಿಕ ಮಾದರಿಗಳನ್ನು ಸಂರಕ್ಷಿಸಲು, ಬೇಕಲೈಟ್(ಫೀನಾಲ್-ಫಾರ್ಮಾಲ್ಡಿಹೈಡ್ ರಾಳ), ಯೂರಿಯ- ಫಾರ್ಮಾಲ್ಡಿಹೈಡ್ ಅಂಟುಗಳು ಮತ್ತು ಪಾಲಿಮರೀಯ ಉತ್ಪನ್ನಗಳ ತಯಾರಿಕೆಯಲ್ಲಿ ಬಳಸುವರು. ಅಸಿಟಾಲ್ಡಿಹೈಡನ್ನು ಪ್ರಮುಖವಾಗಿ ಅಸಿಟಿಕ್ ಆಮ್ಲ, ಈಥೈಲ್ ಅಸಿಟೇಟ್, ವಿನೈಲ್ ಅಸಿಟೇಟ್, ಪಾಲಿಮರ್ ಮತ್ತು ಔಷಧಿಗಳ ತಯಾರಿಕೆಯಲ್ಲಿ ಪ್ರಾರಂಭಿಕ ವಸ್ತುವಾಗಿ ಬಳಸುವರು.

ಬೆಂಲ್ಡಿಹೈಡನ್ನು ಸುಗಂಧ ದ್ರವ್ಯ ಮತ್ತು ಬಣ್ಣಗಳ ಉದ್ಯಮದಲ್ಲಿ ಬಳಸುವರು. ಅಸಿಟೋನ್ ಹಾಗೂ ಈಥೈಲ್ ಮೀಥೈಲ್ ಕೀಟೋನ್‌ಗಳು ಸಾಮಾನ್ಯ ಕೈಗಾರಿಕಾ ದ್ರಾವಕಗಳಾಗಿವೆ. ಅನೇಕ ಆಲ್ಡಿಹೈಡ್ ಮತ್ತು ಕೀಟೋನ್‌ಗಳು ಉದಾಹರಣೆಗೆ, ಬ್ಯುಟಿರಾಲ್ಡಿಹೈಡ್, ವ್ಯಾನಿಲಿನ್,ಅಸಿಟೋಫೀನೋನ್, ಕರ್ಪೂರ ಮುಂತಾದುವುಗಳು ವಾಸನೆ ಮತ್ತು ಸ್ವಾದಕ್ಕೆ ಚಿರಪರಿಚಿತವಾಗಿವೆ. ಸಮಾನ ಅಣುತೂಕವಿರುವ ಇತರೆ ವರ್ಗಗಳ ಸಂಯುಕ್ತಗಳಾದ ಹೈಡ್ರೋಕಾರ್ಬನ್‌ಗಳು. ಈಥರ್‌ಗಳು ಮತ್ತು ಹ್ಯಾಲೋಆರೀನ್‌ಗಳಿಗಿಂತ ಹೆಚ್ಚು ಕುದಿಯುವ ಬಿಂದು ಇರುತ್ತದೆ.

ಆಲ್ಕೋಹಾಲ್‌ಗಳನ್ನು 1) ಆಲ್ಕೀನ್‌ನ ಜಲೀಕರಣದಿಂದ i)ಆಮ್ಲದ ಉಪಸ್ಥಿತಿಯಲ್ಲಿ ಮತ್ತು ii)ಹೈಡ್ರೋಬೋರೇಷನ್ ಉತ್ಕರ್ಷಣೆಯಿಂದ 2)ಕಾರ್ಬೋನೈಲ್ ಸಂಯುಕ್ತಗಳಿಂದ i) ವೇಗವರ್ದಕ ಅಪಕರ್ಷಣೆ ಮತ್ತು ii) ಗ್ರೀಗ್‌ನಾರ್ಡ್ ಕಾರಕಗಳಿಂದ ತಯಾರಿಸಬಹುದು.

- ಫೀನಾಲ್‌ಗಳನ್ನು 1) –ಔಊ ಗುಂಪಿನ ಪ್ರತಿಸ್ಥಾಪನ ಮೂಲಕ i) ಹ್ಯಾಲೋಆರೀನ್‌ಗಳಲ್ಲಿ ಹ್ಯಾಲೋಜನ್ ಪರಮಾಣು ಮತ್ತು ii) ಆರೈಲ್ ಸಲ್ಫೋನಿಕ್ ಆಮ್ಲದಲ್ಲಿನ ಸಲ್ಫೋನಿಕ್ ಆಮ್ಲದ ಗುಂಪು ಪ್ರತಿಸ್ಥಾಪನೆ ಮೂಲಕ 2) ಡೈ ಆಜೋನಿಯಮ್ ಲವಣದ ಜಲೀಯ ವಿಭಜನೆ 3) ಕ್ಯೂಮಿನ್ ಔದ್ಯೋಗಿಕ ಉತ್ಪಾದನೆಯಿಂದ ತಯಾರಿಸಬಹುದು.
- ಆಲ್ಕೋಹಾಲ್‌ಗಳು ಹೈಡ್ರೋಜನ್ ಹ್ಯಾಲೈಡ್‌ನ ಜೊತೆ ನ್ಯೂಕ್ಲೀಯಾಕಾಂಕ್ಷಿ ಆದೇಶ್ಯಯ ಮೂಲಕ ಆಲ್ಕೈಲ್ ಹ್ಯಾಲೈಡ್‌ಗಳನ್ನು ಉತ್ಪತ್ತಿ ಮಾಡುತ್ತವೆ. ಆಲ್ಕೋಹಾಲ್‌ಗಳ ನಿರ್ಜಲೀಕರಣವು ಆಲ್ಕೀನ್‌ಗಳನ್ನು ನೀಡುತ್ತವೆ. ಮಂದ ಉತ್ಕರ್ಷಣೆಕಾರಕಗಳೊಂದಿಗೆ ಪ್ರಾಥಮಿಕ ಆಲ್ಕೋಹಾಲ್‌ಗಳು ಉತ್ಕರ್ಷಣೆಗೊಂಡು ಆಲ್ಡಿಹೈಡ್‌ಗಳನ್ನು ನೀಡುತ್ತವೆ. ಮತ್ತು ಪ್ರಬಲ ಉತ್ಕರ್ಷಣಕಾರಕಗಳೊಂದಿಗೆ ಕಾರ್ಬಾಕ್ಸಿಲಿಕ್ ಆಮ್ಲಗಳನ್ನು ನೀಡುತ್ತವೆ. ಹಾಗೆಯೆ ದ್ವಿತೀಯಕ ಆಲ್ಕೋಹಾಲ್‌ಗಳು ಕೀಟೋನ್‌ಗಳನ್ನು ನೀಡುತ್ತವೆ. ತೃತೀಯಕ ಆಲ್ಕೋಹಾಲ್‌ಗಳು ಉತ್ಕರ್ಷಣೆಯನ್ನು ನಿರೋಧಿಸುತ್ತವೆ.

ಆಲ್ಕೋಹಾಲ್‌ಗಳ ಸಾಮಾನ್ಯ ಮತ್ತು ಹೆಸರುಗಳು

ಸಂಯುಕ್ತ	ಸಾಮಾನ್ಯ ಹೆಸರು	IUPAC ಹೆಸರು
$CH_3 - OH$	ಮಿಥೈಲ್ ಆಲ್ಕೋಹಾಲ್	ಮಿಥೇನೋಲ್
$CH_3 - CH_2 - CH_2 - OH$	ಎನ್–ಪ್ರೋಪೈಲ್ ಆಲ್ಕೋಹಾಲ್	ಪ್ರೋಪೆನ್–1–ಓಲ್
$CH_3 - CH(OH) - CH_3$	ಐಸೋ ಪ್ರೋಪೈಲ್ ಆಲ್ಕೋಹಾಲ್	ಪ್ರೋಪೆನ್–2–ಓಲ್
$CH_3 - CH_2 - CH_2 - CH_2 - OH$	ಎನ್ ಬ್ಯೂಟೈಲ್ ಆಲ್ಕೋಹಾಲ್	ಬ್ಯೂಟೇನ್–1–ಓಲ್
$CH_3 - CH(OH) - CH_2 - CH_3$	ಸೆಕಂಡರಿ ಬ್ಯೂಟೈಲ್ ಆಲ್ಕೋಹಾಲ್	ಬ್ಯೂಟೇನ್–2–ಓಲ್
$CH_3 - CH(CH_3) - CH_2 - OH$	ಐಸೋ ಬ್ಯೂಟೈಲ್ ಆಲ್ಕೋಹಾಲ್	2–ಮಿಥೈಲ್ ಪ್ರೋಪೆನ್–1–ಓಲ್
$CH_3 - C(CH_3)_2 - OH$	ಟರ್ಶಿಯರಿ ಬ್ಯೂಟೈಲ್ ಆಲ್ಕೋಹಾಲ್	2–ಮಿಥೈಲ್ ಪ್ರೋಪೆನ್–2–ಓಲ್
$CH_2(OH) - CH(OH) - CH_2(OH)$	ಗ್ಲಿಸರಾಲ್	ಪ್ರೋಪೆನ್–1,2,3–ಟ್ರೈ–ಓಲ್

ಪ್ರಜಾವಾಣಿ ನೋಡಿಯೊ

ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

21ರಿಂದ ಡಿಜಿಟಲ್ ಮಾರ್ಕೆಟಿಂಗ್ ತರಬೇತಿ ಕಾರ್ಯಾಗಾರ

ಬೆಂಗಳೂರು: ಉಬುಂಟು ಒಕ್ಕೂಟದಿಂದ ಜ.21ರಿಂದ ಮಹಿಳೆಯರಿಗೆ ಡಿಜಿಟಲ್ ಮಾರ್ಕೆಟಿಂಗ್ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಇಂಥದ್ದೇ ಉದ್ಯಮ ಎಂಬ ಭೇದಭಾವವಿಲ್ಲದೇ ಇತ್ತೀಚಿನ ನೂತನ ಮಾರುಕಟ್ಟೆ ವಲಯದಲ್ಲಿ ಅಂತರ್ಜಾಲ ಸಹಿತ ಸಾಮಾಜಿಕ ಜಾಲತಾಣ ಯಾರನ್ನು ಬೇಕಾದರೂ ತಲುಪಲು ಸಾಧ್ಯವಾಗಿದೆ. ಅದರಲ್ಲಿ ಡಿಜಿಟಲ್ ಮಾರುಕಟ್ಟೆ ಮುಖ್ಯ ಪಾತ್ರವಹಿಸುತ್ತದೆ. ಬ್ರ್ಯಾಂಡ್ ಬೆಳವಣಿಗೆ, ಆದಾಯ ವೃದ್ಧಿ, ಸ್ಥಳೀಯ ಮಾರುಕಟ್ಟೆಯಿಂದ ಜಾಗತಿಕ ಮಾರುಕಟ್ಟೆಯೆಡೆಗೆ ಸುಲಭವಾಗಿ ಕಲಿಕೆಗೆ ಇದು ಸಹಕಾರಿ. ತ್ವರಿತ ಬೆಳವಣಿಗೆಯಿಂದ ಹಿಡಿದು ಬಿ2ಬಿ ಬಿ2ಸಿ ಮಾರ್ಕೆಟಿಂಗ್ ಅನ್ನು ಸಮರ್ಥವಾಗಿ ಆನ್‌ಲೈನ್ ಆಂದೋಲನ ಮಾಡಲು ಈ ತರಬೇತಿ ಸಹಕಾರಿಯಾಗಲಿದೆ.

ಎಂ.ಬಿ.ಎ ಅಥವಾ ಎಂ.ಕಾಮ್ ಪದವಿ ಪಡೆದ ಆಸಕ್ತ ಮಹಿಳೆಯರು ಜ. 12ರೊಳಗೆ https://forms.gle/HmqhVmkhgJhHc3339 ಈ ವೆಬ್‌ಸೈಟ್‌ನಲ್ಲಿ ನೋಂದಾಯಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವೈಟ್‌ಫೀಲ್ಡ್ ಮೆಟ್ರೊ ರೈಲುಮಾರ್ಗ

ವೆಬ್‌ಗರ್ಡರ್ ಅಳವಡಿಕೆ ಕಾಮಗಾರಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫಿಲ್ಡ್ ಮೆಟ್ರೊ ರೈಲು ಮಾರ್ಗಕ್ಕೆ ಸವಾಲಾಗಿರುವ ವೆಬ್ ಗರ್ಡರ್ ಅಳವಡಿಕೆಗೆ ಪ್ರಾಥಮಿಕ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಸೋಮವಾರ ಆರಂಭಿಸಿದೆ.

65 ಮೀಟರ್ ಉದ್ದದ ವೆಬ್ ಗರ್ಡರ್ ಇದಾಗಿದ್ದು, ಬೆಂಗಳೂರು ಮೆಟ್ರೊ ರೈಲು ಮಾರ್ಗದಲ್ಲಿ ಅಳವಡಿಕೆ ಆಗುತ್ತಿರುವ ಅತಿ ಉದ್ದದ ವೆಬ್ ಗರ್ಡರ್ ಇದಾಗಿದೆ. ವೆಬ್ ಗರ್ಡರ್ ಅಳವಡಿಕೆ ಕಾಮಗಾರಿಯನ್ನು ಡಿಸೆಂಬರ್ ಕೊನೆ ವಾರದಲ್ಲಿ ನಡೆಸಲು ಉದ್ದೇಶಿಸಲಾಗಿತ್ತು. ಅಟ್ಟಣಿಗೆ ಸೇರಿದಂತೆ ಪೂರ್ವ ಸಿದ್ಧತಾ ಕಾರ್ಯ ಇನ್ನೂ ಬಾಕಿ ಇರುವುದರಿಂದ ಕಾಮಗಾರಿಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿತ್ತು.

ರೈಲ್ವೆ ಮಾರ್ಗ ಮತ್ತು ರಸ್ತೆ ಮೇಲ್ಸೇತುವೆ ಮೇಲೆ ಈ ಗರ್ಡರ್ ಅಳವಡಿಕೆಯಾಗಬೇಕಿದ್ದು, ಸುರಕ್ಷತೆಗೆ ಆದ್ಯತೆ ನೀಡಿದೆ. ಎಲ್ಲಾ ರೀತಿಯ ಮುನ್ನೆಚ್ಚರಿಕೆಗಳನ್ನು ಕೈಗೊಂಡು ಈಗ ಪ್ರಾಥಮಿಕ ಕಾಮಗಾರಿಯನ್ನು ಆರಂಭಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೊಂದೆಡೆ ಕೆ.ಆರ್.ಪುರ–ವೈಟ್‌ಫೀಲ್ಡ್ ನಡುವೆ ಮೆಟ್ರೊ ರೈಲು ಸಂಚಾರ ಆರಂಭಿಸಲು ಸಿದ್ಧತೆಯನ್ನು ಬಿಎಂಆರ್‌ಸಿಎಲ್ ನಡೆಸುತ್ತಿದೆ. ಸುರಕ್ಷತೆ ಪರಿಶೀಲಿಸಲು ಮೆಟ್ರೊ ರೈಲು ಸುರಕ್ಷತಾ ಆಯುಕ್ತರನ್ನು ಫೆಬ್ರುವರಿಯಲ್ಲಿ ಆಹ್ವಾನಿಸಲು ಯೋಚಿಸಲಾಗುತ್ತಿದೆ ಎಂದೂ ಹೇಳಿದ್ದಾರೆ.

ಬೆನ್ನಿಗಾನಹಳ್ಳಿ ಬಳಿ ಮೆಟ್ರೊ ರೈಲು ಮಾರ್ಗದಲ್ಲಿ ವೆಬ್ ಗರ್ಡರ್ ಅಳವಡಿಕೆ ಕಾಮಗಾರಿ ನಡೆಯುತ್ತಿರುವುದು

ಜೆಎನ್‌ಯು ನಿವೃತ್ತ ಪ್ರಾಧ್ಯಾಪಕಿ ಪ್ರೊ. ಜಾನಕಿ ನಾಯರ್ ಅಭಿಮತ

‘ಸಂವಿಧಾನದ ನೆಲೆಯಲ್ಲೇ ಹೋರಾಟ ಕಟ್ಟಬೇಕಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರ ಮೇಲಿನ ಹೇರಿಕೆಗಳನ್ನು ತಡೆಯಲು ಸಂವಿಧಾನದ ತಳಹದಿಯಲ್ಲಿ ಹೋರಾಟಗಳನ್ನು ಕಟ್ಟಬೇಕಿದೆ’ ಎಂದು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಪ್ರೊ. ಜಾನಕಿ ನಾಯರ್ ಹೇಳಿದರು.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ದಶಮಾನೋತ್ಸವದ ಅಂಗವಾಗಿ ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದಲ್ಲಿ ‘ಸಂವಿಧಾನವೇ ಉಸಿರು– ಬಹುತ್ವವೇ ಬದುಕು’ ಘೋಷವಾಕ್ಯದಡಿ ಭಾನುವಾರ ನಡೆದ ‘ಒಗ್ಗೂಡುವ ಹಬ್ಬ’ದ ಉದ್ಘಾಟನಾ ಸಮಾರಂಭದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

‘ಸಂವಿಧಾನವು ಭಾರತದ ಮಹಿಳಾ ಚಳವಳಿಗೆ ಹೆಚ್ಚಿನ ಬಲ ನೀಡಿದೆ. ನಮ್ಮ ಏಕತೆಯು ವೈವಿಧ್ಯ ಮತ್ತು ಭಿನ್ನತೆಯೊಳಗೆ ಇದೆ. ಅದನ್ನು ಮಹಿಳಾ ಚಳವಳಿಗಳು ಎತ್ತಿ ಹಿಡಿಯುತ್ತಲೇ ಬಂದಿವೆ. ಮಹಿಳೆಯರ ರಕ್ಷಣೆಗೆ ಬಲಿಷ್ಠ ಕಾನೂನು ಇದೆ. ಆದರೆ ಅವುಗಳಿಂದ ನ್ಯಾಯ ಸಿಗುವುದು ಅಸಾಧ್ಯವಾದಂತಹ ಕಠಿಣ ಸಾಮಾಜಿಕ ಪರಿಸ್ಥಿತಿ ಇದೆ’ ಎಂದು ಹೇಳಿದರು.

ಪ್ರೊ.ಜಾನಕಿ ನಾಯರ್

‘ಮಹಿಳೆಯರ ರಕ್ಷಣೆಗೆ ಸಂಪ್ರದಾಯಗಳು ಸಾಕು, ಸಂವಿಧಾನದ ಅಗತ್ಯವಿಲ್ಲ ಎಂಬ ವಾದ ಚಾಲ್ತಿಗೆ ಬಂದಿದೆ. ಈ ರೀತಿಯ ದಾಳಿಗಳನ್ನು ಎದುರಿಸಲು ಸಂವಿಧಾನ ಮತ್ತು ಬಹುತ್ವವನ್ನೇ ಆಧಾರವಾಗಿಟ್ಟು-ಕೊಂಡು ಹೋರಾಟ ರೂಪಿಸಬೇಕು. ಆ ದಿಸೆಯಲ್ಲಿ ಮಹಿಳೆಯರು ಹೆಚ್ಚು ಕೆಲಸ ಮಾಡಬೇಕು’ ಎಂದು ಸಲಹೆ ನೀಡಿದರು.

> **ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ಒಂದು ವರ್ಗವಾಗಿ, ಶಕ್ತಿಯಾಗಿ ಒಗ್ಗೂಡಲು ಇರುವ ಅಡ್ಡಿಗಳನ್ನು ಮೀರುವ ದಾರಿಯ ಹುಡುಕಾಟ ಇಂದಿನ ಅಗತ್ಯ**
>
> **ಸಬಿಹಾ ಭೂಮಿಗೌಡ,** ಲೇಖಕಿ

> **ಹೆಣ್ಣು ತನ್ನ ಪ್ರಜ್ಞೆಯನ್ನು ರೂಪಿಸಿಕೊಳ್ಳಲಾಗದಂತೆ ಎಲ್ಲ ಘಟಕಗಳನ್ನು ಕಟ್ಟಲಾಗಿದೆ. ಈ ಕಾರಣಕ್ಕಾಗಿ ನಾವು, ನಮ್ಮ ಒಳಗಿನ ಶತ್ರುವನ್ನು ಕಂಡುಕೊಳ್ಳಬೇಕಿದೆ.**
>
> **ಸಬಿತಾ ಬನ್ನಾಡಿ,** ಲೇಖಕಿ

ಕಾರ್ಯಕ್ರಮ ಉದ್ಘಾಟಿಸಿದ ರಾಷ್ಟ್ರೀಯ ದಲಿತ ಮಹಿಳಾ ಒಕ್ಕೂಟದ ಸಂಸ್ಥಾಪಕಿ ರುತ್ ಮನೋರಮಾ ಮಾತನಾಡಿ, ‘ರಾಜಿರಹಿತವಾದ ಸಾಮೂಹಿಕ ಹೋರಾಟಗಳ ಅಗತ್ಯವಿದೆ. ಯಾವುದೇ ಶ್ರೇಣೀಕರಣ ಇಲ್ಲದ ಪ್ರಜಾತಾಂತ್ರಿಕ ಚಳವಳಿ ಕಟ್ಟುವಲ್ಲಿ ಒಕ್ಕೂಟ ಯಶಸ್ವಿಯಾಗಿದೆ’ ಎಂದರು.

ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಮಹಿಳಾ ಹೋರಾಟ ರೂಪಿಸುವಲ್ಲಿ ಮಹತ್ತರ ಕೆಲಸ ಮಾಡಿರುವ ಹತ್ತು ಹಿರಿಯ ಹೋರಾಟಗಾರ್ತಿಯರನ್ನು ಗೌರವಿಸಲಾಯಿತು.

ನಂತರ ನಡೆದ ಕಾರ್ಯಕ್ರಮ-ದಲ್ಲಿ ‘ಆಚರಣೆಯಲ್ಲಿ ಸ್ತ್ರೀವಾದ’ ಗೋಷ್ಠಿಯಲ್ಲಿ ‘ನ್ಯಾಯಾಂಗ ವ್ಯವಸ್ಥೆಯಲ್ಲಿ ಸ್ತ್ರೀವಾದ’ ಕುರಿತು ಪುಣೆಯ ಡಾ. ಶಶಿಕಲಾ ಗುರುಪುರ, ‘ರಾಜಕಾರಣದಲ್ಲಿ ಸ್ತ್ರೀವಾದ’ ಕುರಿತು ಡಾ.ಎನ್. ಗಾಯತ್ರಿ ಮತ್ತು ‘ಕುಟುಂಬದಲ್ಲಿ ಸ್ತ್ರೀವಾದ’ ಕುರಿತು ಲೇಖಕಿ ಡಾ.ಸಬಿತಾ ಬನ್ನಾಡಿ ಮಾತನಾಡಿದರು.

ಎರಡನೇ ಗೋಷ್ಠಿಯಲ್ಲಿ ಹೋರಾಟಗಾರ್ತಿಯವರ ಅನುಭವ ಕಥನ ಗಳನ್ನು ಹಂಚಿಕೊಳ್ಳಲಾಯಿತು.

ಸಂಜೆ ಕೃತಿ ಪುರಪ್ಪೆಮನೆ ಅವರ ನಿರ್ದೇಶನದಲ್ಲಿ ‘ಪದ್ಮಾವತಿ ಕಾಳಗ’ ಎಂಬ ಸ್ತ್ರೀವಾದಿ ದೃಷ್ಟಿಕೋನದ ತಾಳಮದ್ದಲೆಯನ್ನು ಪ್ರಸ್ತುತ ಪಡಿಸಲಾಯಿತು.

ಮುಗಿಯದ ಕಾಮಗಾರಿ ನಗರದ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಎರಡನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ಕಾಮಗಾರಿಗಾಗಿ ರಸ್ತೆ ಅಗೆದು ಹದಿನೈದು ದಿನಗಳಾದರೂ ಕೆಲಸ ಮುಗಿಯದ ಕಾರಣ ನಾಗರಿಕರು ಇಲ್ಲಿ ಸಂಚರಿಸಲು ಪರದಾಡುವಂತಾಗಿದೆ

ಬೆದರಿಕೆ: ವಿಮಾನ ತುರ್ತು ಭೂಸ್ಪರ್ಶ

ಜಾಮ್‌ನಗರ (ಪಿಟಿಐ): ಮಾಸ್ಕೊದಿಂದ ಗೋವಾಗೆ ಬರುತ್ತಿದ್ದ ವಿಮಾನವು ಸೋಮವಾರ ರಾತ್ರಿ ಬಾಂಬ್ ಬೆದರಿಕೆಯಿಂದಾಗಿ ಗುಜರಾತ್‌ನ ಜಾಮ್‌ನಗರ ವಿಮಾನನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿತು.

ವಿಮಾನದಲ್ಲಿ 236 ಪ್ರಯಾಣಿಕರು, ಸಿಬ್ಬಂದಿ ಇದ್ದರು. ಸುರಕ್ಷಿತವಾಗಿ ಅವರನ್ನು ಹೊರಗೆ ಕಳುಹಿಸಿ ತಪಾಸಣೆ ನಡೆಸಲಾಯಿತು ಎಂದು ಐಜಿಪಿ ಅಶೋಕ್ ಕುಮಾರ್ ಯಾದವ್ ತಿಳಿಸಿದರು.

ಮುಂಜಾಗ್ರತೆ ವಹಿಸಿದ್ದು, ಇಡೀ ವಿಮಾನವನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಯಿಲ್ ಸ್ಪರ್ಶಿಸಿ ಯುವತಿ ಸಾವು

ಬೆಂಗಳೂರು: ನೀರು ಕಾಯಿಸುವ ಕಾಯಿಲ್ ಸ್ಪರ್ಶಿಸಿದ್ದರಿಂದ ವಿದ್ಯುತ್ ತಗುಲಿ ಗಾಯತ್ರಿ ಹೆಗಡೆ (22) ಎಂಬುವರು ಮೃತಪಟ್ಟಿದ್ದು, ಈ ಸಂಬಂಧ ರಾಜಾಜಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬೆಳಗಾವಿಯ ಗಾಯತ್ರಿ, ಲೆಕ್ಕ ಪರಿಶೋಧಕರ (ಸಿ.ಎ) ಪರೀಕ್ಷೆಗೆ ತಯಾರಿ ನಡೆಸುತ್ತಿದ್ದರು. ಮೂರು ದಿನಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದು ಮರಿಯಪ್ಪನ ಪಾಳ್ಯದಲ್ಲಿ ಬಾಡಿಗೆ ಮನೆಯಲ್ಲಿ ಒಬ್ಬರೇ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ಭಾನುವಾರ ಬೆಳಿಗ್ಗೆ ಸ್ನಾನಕ್ಕೆಂದು ಬಕೆಟ್‌ನಲ್ಲಿ ನೀರು ತುಂಬಿಟ್ಟಿದ್ದ ಅವರು, ಬಿಸಿ ಮಾಡಲು ಎಲೆಕ್ಟ್ರಿಕ್ ಕಾಯಿಲ್ ಹಾಕಿದ್ದರು. ವಿದ್ಯುತ್ ಸ್ವಿಚ್ ಆನ್ ಮಾಡಿದ್ದರು. ಕೆಲ ನಿಮಿಷಗಳ ನಂತರ ನೀರು ಕಾದಿದೆಯಾ ಎಂಬುದನ್ನು ನೋಡಲು ಬಕೆಟ್‌ನಲ್ಲಿ ಕೈ ಹಾಕಿದ್ದರು. ಇದೇ ಸಂದರ್ಭದಲ್ಲಿ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

‘ಯುವತಿಯ ಮೃತದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಯಿತು, ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಸದಾಶಿವ ಆಯೋಗ ವರದಿ ಶಕ್ತಿ ಪ್ರದರ್ಶನಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳ ಮೀಸಲಾತಿ ಜಾರಿಗಾಗಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಒಂದು ತಿಂಗಳು ಪೂರೈಸುತ್ತಿದ್ದು, ಇದೇ ಹೊತ್ತಿನಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಚರ್ಚೆಗೊಳಪಡಿಸದೆ ಶಿಫಾರಸು ಮಾಡದಂತೆ ಆಗ್ರಹಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟವು ಮಂಗಳವಾರ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದೆ.

ಭೋವಿ, ಲಂಬಾಣಿ, ಕೊರಮ, ಕೊರಚ, ಬುಡ್ಗಜಂಗಮ, ಶಿಳ್ಳೆಕ್ಯಾತ, ದೊಂಬರು ಸೇರಿ ಪರಿಶಿಷ್ಟ ಜಾತಿಯಲ್ಲಿನ ವಿವಿಧ ಸಮುದಾಯಗಳು ಪ್ರತಿಭಟನೆಗೆ ನಿರ್ಧರಿಸಿವೆ.

‘ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಹೊರಡಲಿದ್ದು, ಎಲ್ಲಾ ಸಮುದಾಯಗಳು ತಮ್ಮ ಸಾಂಸ್ಕೃತಿಕ ಕಲೆಗಳನ್ನು ಪ್ರದರ್ಶಿಸಲಿವೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಪರಿಶಿಷ್ಟ ಜಾತಿಗಳ ಐಕ್ಯತಾ ಸಮಾವೇಶ ನಡೆಯಲಿದೆ. ಒಂದು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ’ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎನ್. ಅನಂತನಾಯಕ್ ತಿಳಿಸಿದರು.

ಇನ್ನೊಂದೆಡೆ ಒಳ ಮೀಸಲಾತಿಗಾಗಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ನಡೆಸುತ್ತಿರುವ ಅನಿರ್ದಿ-ಷ್ಟಾವಧಿ ಧರಣಿ ಒಂದು ತಿಂಗಳು ಪೂರೈಸಿರುವ ಸಂದರ್ಭದಲ್ಲಿ ಮುಂದಿನ ಹೋರಾಟ ಕಟ್ಟುವ ಸಭೆಯೂ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆಯಲಿದೆ.

ಜ್ಞಾನಪ್ರಕಾಶ ಸ್ವಾಮೀಜಿ, ಬಸವ ನಾಗೀದೇವ ಸ್ವಾಮೀಜಿ, ಷಡಕ್ಷರಿ ಸ್ವಾಮೀಜಿ, ಶಿವಶರಣ ಹರಳಯ್ಯ ಸ್ವಾಮೀಜಿ, ಮತಂಗಮುನಿ ಸ್ವಾಮೀಜಿ ಸೇರಿ ಹಲವು ಸ್ವಾಮೀಜಿಗಳು ಭಾಗವಹಿಸುವರು. ದಲಿತ ಹೋರಾಟ ಗಾರರಾದ ಮಾವಳ್ಳಿ ಶಂಕರ್, ಮೋಹನ್‌ರಾಜ್, ವಿ.ನಾಗರಾಜ್, ಗುರುಮೂರ್ತಿ, ಹೆಣ್ಣೂರು ಶ್ರೀನಿವಾಸ್, ಗುರುಪ್ರಸಾದ್ ಕೆರಗೋಡು, ಬಿ.ಗೋಪಾಲ್, ಎನ್. ವೆಂಕಟೇಶ್, ಎನ್.ಮುನಿಸ್ವಾಮಿ, ಬಸವರಾಜ ಕೌತಾಳ್, ಅಂಬಣ್ಣ ಅರೋಲಿಕರ್ ಹಾಗೂ ಹೆಣ್ಣೂರು ಲಕ್ಷ್ಮೀ ನಾರಾಯಣ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

ಬೆಸ್ಕಾಂ, ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ

ಟ್ರಾನ್ಸ್‌ಫಾರ್ಮರ್ ಸುತ್ತ ಸ್ವಚ್ಛತೆ ಕಾಪಾಡಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಾದಚಾರಿ ಮಾರ್ಗಗಳೂ ಸೇರಿದಂತೆ ವಿದ್ಯುತ್ ಪ್ರಸರಣ ಘಟಕಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಎಚ್ಚರ ವಹಿಸಬೇಕು‘ ಎಂದು ಹೈಕೋರ್ಟ್, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ನಿರ್ದೇಶಿಸಿದೆ.

‘ಬೆಂಗಳೂರು ಮಹಾನಗರ-ದಲ್ಲಿ ಪಾದಚಾರಿ ಮಾರ್ಗ ಹಾಗೂ ರಾಜಕಾಲುವೆಗಳ ಮೇಲೆ ಅಳವಡಿಸಲಾಗಿರುವ ಟ್ರಾನ್ಸ್‌ಫಾರ್ಮರ್ ತೆರವುಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿ ನಿವೃತ್ತ ವಿಂಗ್ ಕಮಾಂಡರ್ ಜಿ.ಬಿ.ಅತ್ರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, ‘ಟ್ರಾನ್ಸ್ ಫಾರ್ಮರ್ ಅಳವಡಿಕೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾರ್ವಜನಿಕರು ಮೂತ್ರ ವಿಸರ್ಜನೆ ಮಾಡುತ್ತಾರೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ನ್ಯಾಯಪೀಠ, ‘ಟ್ರಾನ್ಸ್ ಫಾರ್ಮರ್ ಸೇರಿದಂತೆ ವಿದ್ಯುತ್ ಘಟಕಗಳ ಸುತ್ತಲ ಜಾಗಗಳಲ್ಲಿ ಸಾರ್ವಜನಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ನೈರ್ಮಲ್ಯ ಕಾಪಾಡಬೇಕು‘ ಎಂದು ಸೂಚಿಸಿತು.

ವರದಿ ಸಲ್ಲಿಸಿ: ‘ಒಟ್ಟು 2,587 ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಈವರೆಗೂ 1,554 ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲಾಗಿದ್ದು, 1,033 ಬಾಕಿ ಉಳಿದಿವೆ. ಇವುಗಳ ಸ್ಥಳಾಂತರ ಕಾರ್ಯವನ್ನು ಹಂತ ಹಂತವಾಗಿ ಮಾಡಲಾಗುತ್ತಿದ್ದು 2023ರ ಸೆಪ್ಟೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು’ ಎಂದು ಬೆಸ್ಕಾಂ ಪರ ವಕೀಲರು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಪ್ರತಿ ತಿಂಗಳೂ ಸ್ಥಳಾಂತರ ಮಾಡಿದ ಟ್ರಾನ್ಸ್‌ಫಾರ್ಮರ್‌ಗಳ ವಿವರವನ್ನು ನ್ಯಾಯಪೀಠಕ್ಕೆ ಒದಗಿಸಬೇಕು‘ ಎಂದು ಸೂಚಿಸಿ ವಿಚಾರಣೆ ಮುಂದೂಡಿತು.

₹ 258 ಕೋಟಿ ವೆಚ್ಚದಲ್ಲಿ ರಾಜ್ಯದ ಎಲ್ಲ ಸ್ಥಿರಾಸ್ತಿಗಳ ಸರ್ವೆ

‘ವರ್ಷದೊಳಗೆ ಡ್ರೋನ್ ಸರ್ವೆ ಪೂರ್ಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 258 ಕೋಟಿ ವೆಚ್ಚದಲ್ಲಿ ಡ್ರೋನ್ ಕ್ಯಾಮೆರಾ ಬಳಸಿ ರಾಜ್ಯದ ಎಲ್ಲ ಸ್ಥಿರಾಸ್ತಿಗಳ ಭೂಮಾಪನ (ಸರ್ವೆ) ನಡೆಸಲಾಗುತ್ತಿದೆ. ಒಂದು ವರ್ಷದೊಳಗೆ ಈ ಪ್ರಕ್ರಿಯೆ ಪೂರ್ಣಗೊಳಿಸಿ ಡಿಜಿಟಲ್ ವ್ಯವಸ್ಥೆಯಡಿ ಆಸ್ತಿಗಳ ನಕ್ಷೆ ವಿತರಿಸುವ ಗುರಿ ಹೊಂದಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ರಾಮನಗರ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಯೋಜನೆ ಜಾರಿಗೊಳಿಸಿದ್ದು, ಡ್ರೋನ್ ಕ್ಯಾಮೆರಾಗಳ ಮೂಲಕ ಸ್ಥಿರಾಸ್ತಿಗಳ ಭೂಮಾಪನ ಆರಂಭವಾಗಿದೆ. ಈ ಯೋಜನೆಯನ್ನು ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ₹ 258 ಕೋಟಿ ಅನುದಾನ ಒದಗಿಸಲಾಗಿದೆ’ ಎಂದರು.

ಡ್ರೋನ್ ಮೂಲಕ ಆಸ್ತಿಗಳ ಭೂಮಾಪನ ನಡೆಸಲು ಪ್ರತಿ ಜಿಲ್ಲೆಗೂ ಪ್ರತ್ಯೇಕವಾಗಿ ಗುತ್ತಿಗೆ ನೀಡಲಾಗುವುದು. ಇದಕ್ಕಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ. ಸರ್ಕಾರಿ ಮತ್ತು ಖಾಸಗಿ ಆಸ್ತಿಗಳೆಲ್ಲವನ್ನೂ ಭೂಮಾಪನ ನಡೆಸಿ, ನಕ್ಷೆಗಳನ್ನು ಸಿದ್ಧಪಡಿಸಲಾಗುವುದು. ಅವುಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿಡಲಾಗುವುದು ಎಂದು ವಿವರಿಸಿದರು.

ಭೂ ದಾಖಲೆಗಳನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆಂಬುದು ಪ್ರಧಾನಿ ನರೇಂದ್ರ ಮೋದಿಯವರ ಆಶಯ. ಅದಕ್ಕೆ ಪೂರಕವಾಗಿ ಈ ಯೋಜನೆಯನ್ನು ರಾಜ್ಯ ಸರ್ಕಾರ ಕೈಗೆತ್ತಿಕೊಂಡಿದೆ. ಭೂ ದಾಖಲೆಗಳನ್ನು ಸಿದ್ಧಪಡಿಸುವುದು ಮತ್ತು ವಿತರಣೆಯಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಇದು ಸಹಕಾರಿಯಾಗಲಿದೆ ಎಂದರು.

ನರ್ಸಿಂಗ್ ಕಾಲೇಜು: ಸದನ ಸಮಿತಿ ಮಾನ್ಯತೆ ಎತ್ತಿ ಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರ್ಸಿಂಗ್ ಕಾಲೇಜುಗಳ ಕಾರ್ಯನಿರ್ವಹಣೆ ಖಚಿತಪಡಿಸಿಕೊಳ್ಳಲು ರಾಜ್ಯ ವಿಧಾನ ಪರಿಷತ್ ರಚಿಸಿದ್ದ ಸದನ ಸಮಿತಿಯ ಮಾನ್ಯತೆಯನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

ಈ ಬಗ್ಗೆ ‘ಕರ್ನಾಟಕ ರಾಜ್ಯ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಇನ್‌ಸ್ಟಿಟ್ಯೂಷನ್ಸ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್’ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಪೀಠ ವಜಾಗೊಳಿಸಿದೆ.

‘ಕಾಲೇಜುಗಳ ಕಾರ್ಯನಿರ್ವಹಣೆ ಅಧ್ಯಯನಕ್ಕಾಗಿ ಮಾತ್ರವೇ ಸದನ ಸಮಿತಿ ರಚಿಸಲಾಗಿದೆ. ಮೂಲಸೌಕರ್ಯ ಇತ್ಯಾದಿ ಅಂಶಗಳ ಕುರಿತಂತೆ ಅಧ್ಯಯನಕ್ಕಾಗಿ ಈ ಸಮಿತಿಗೆ ನರ್ಸಿಂಗ್ ಕಾಲೇಜುಗಳಿಗೆ ಭೇಟಿ ನೀಡುವ ಅಧಿಕಾರವಿದೆ. ಈ ಸಮಿತಿಯು ಸಾಂವಿಧಾನಿಕ ಯೋಜನೆಯಡಿ ನ್ಯಾಯಾಂಗಕ್ಕೆ ಸೇರಿರುವ ಯಾವುದೇ ನ್ಯಾಯಮಂಡಳಿ ಅಧಿಕಾರವನ್ನು ಹೊಂದಿಲ್ಲ’ ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸರ್ಕಾರದ ಪರ ವಾದ ಮಂಡಿಸಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, ‘ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ವ್ಯವಹಾರದ ನಿಯಮಗಳ 199ರ ಅನುಸಾರವೇ ಈ ಸಮಿತಿಯನ್ನು ರಚಿಸಲಾಗಿದೆ. ಭಾರತೀಯ ನರ್ಸಿಂಗ್ ಕೌನ್ಸಿಲ್ ಹೊರಡಿಸಿದ ಮಾರ್ಗಸೂಚಿಗಳ ಅನುಸಾರ ಇದು ಕಾರ್ಯನಿರ್ವಹಿಸುತ್ತದೆ’ ಎಂದು ಸರ್ಕಾರದ ನಿಲುವನ್ನು ಸಮರ್ಥಿಸಿಕೊಂಡಿದ್ದರು.

ವಿಧಾನ ಪರಿಷತ್ 2022ರ ಮೇ 4ರಂದು ಸದನ ಸಮಿತಿ ರಚಿಸಿತ್ತು. ಈ ನಿರ್ಧಾರವನ್ನು ಪ್ರಶ್ನಿಸಿ ನರ್ಸಿಂಗ್ ಕಾಲೇಜುಗಳು ಹೈಕೋರ್ಟ್ ಮೆಟ್ಟಿಲೇರಿದ್ದವು. ಏಕಸದಸ್ಯ ನ್ಯಾಯಪೀಠ ಹಿಂದೆ ಸಮಿತಿಯ ಸಿಂಧುತ್ವವನ್ನು ಎತ್ತಿಹಿಡಿದಿತ್ತು.

ರಾಚಪ್ಪ ಎಸ್‌. ಹೋಳೂರು ಅವರ ‘ಹೋಳೂರಿನಿಂದ ದುಬೈ ಎಂಬ ಮಾಯಾನಗರಿಗೆ’ ಪುಸ್ತಕವನ್ನು ಮೈಸೂರಿನ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಸಾಹಿತಿ ಚಂದ್ರಶೇಖರ ಕಂಬಾರ, ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್‌. ಕಿರಣ್‌ಕುಮಾರ್, ಲೇಖಕ ರಾಚಪ್ಪ ಎಸ್‌.ಹೋಳೂರು ಇದ್ದರು —ಪ್ರಜಾವಾಣಿ ಚಿತ್ರ

46 ಜಾತಿಗಳಿಗಾಗಿ ಹಿಂದುಳಿದ ಪಂಗಡ ಸೃಷ್ಟಿಗೆ ಆಗ್ರಹ

ಬೆಂಗಳೂರು: ಪ್ರತ್ಯೇಕ ಹಿಂದುಳಿದ ಪಂಗಡ (ಬಿ.ಟಿ) ಸೃಷ್ಟಿಸಿ, ಅದರಲ್ಲಿ ಕರ್ನಾಟಕದ ಅಲೆಮಾರಿ ಮತ್ತು ಅರೆ–ಅಲೆಮಾರಿ ಸಮುದಾಯದ 46 ಜಾತಿಗಳನ್ನು ಸೇರಿಸಬೇಕೆಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಲೆಮಾರಿ ಮತ್ತು ಅರೆ–ಅಲೆಮಾರಿ ವಿಮುಕ್ತ ಬುಡಕಟ್ಟು ಸಮುದಾಯಗಳ ಮಹಾ ಒಕ್ಕೂಟ ಸೋಮವಾರ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಕಾರ್ಯಾಧ್ಯಕ್ಷ ಸುನಿಲ್ ಕಾಂತ್ ಹೆಳವರ್, ‘ನಮ್ಮ ಸಮುದಾಯದವರಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಲೆಮಾರಿಗಳಿಗೆ ಸಿಗುತ್ತಿರುವ ಸೌಲಭ್ಯಗಳು ಸಿಗುತ್ತಿಲ್ಲ. ಅಲೆಮಾರಿ ಮತ್ತು ಅರೆ–ಅಲೆಮಾರಿ ಸಮುದಾಯದ 46 ಜಾತಿಗಳು ಪ್ರವರ್ಗ–1ರಲ್ಲಿವೆ. ಇಲ್ಲಿರುವ ಪ್ರಬಲ ಸಮುದಾಯಗಳೊಡನೆ ಸ್ಪರ್ಧಿಸಲಾಗದೇ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿವೆ. ಹೀಗಾಗಿ ಪ್ರತ್ಯೇಕ ಪ್ರವರ್ಗ ಸೃಷ್ಟಿಸಿ ಶೇ 3ರಷ್ಟು ಮಿಸಲಾತಿ ನೀಡಬೇಕು’ ಎಂದು ಆಗ್ರಹಿಸಿದರು.

ಒಕ್ಕೂಟದ ಅಧ್ಯಕ್ಷ ಶಿವಾನಂದ ಲಕ್ಷ್ಮಣ ಪಾಚಂಗಿ ಮಾತನಾಡಿ, ‘ಹಿಂದುಳಿದ ಅಲೆಮಾರಿ ಬುಡಕಟ್ಟುಗಳ ನಿಗಮಕ್ಕೆ ಬುಡಕಟ್ಟು ಸಮುದಾಯದವರನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕು. ಅಲೆಮಾರಿ ನಿಗಮಕ್ಕೆ ಈ ಹಿಂದೆ ₹ 100 ಕೋಟಿ ಅನುದಾನ ಮೀಸಲಿಡಲಾಗಿತ್ತು. ಈ ವರ್ಷದಲ್ಲಿ ₹ 6 ಕೋಟಿ ಅನುದಾನ ಬಿಡುಗಡೆ ಮಾಡಿ ಅಲೆಮಾರಿ ಸಮುದಾಯಗಳಿಗೆ ರಾಜ್ಯ ಸರ್ಕಾರ ಅನ್ಯಾಯ ಮಾಡಿದೆ’ ಎಂದು ಹೇಳಿದರು.

ಕಾಂಗ್ರೆಸ್ ನಾಯಕ ಎಚ್‌.ಸಿ. ಬಾಲಕೃಷ್ಣ ಹೇಳಿಕೆ

‘ಬಿಜೆಪಿ ಸೇರಲು ಯತ್ನಿಸಿದ್ದ ಮಾಗಡಿ ಶಾಸಕ’

ಪ್ರಜಾವಾಣಿ ವಾರ್ತೆ

ಮಾಗಡಿ: ‘ಜೆಡಿಎಸ್ ಶಾಸಕ ಎ.ಮಂಜುನಾಥ್ ಅವರು ಬಿಜೆಪಿ ಸೇರಲು ಪ್ರಯತ್ನ ನಡೆಸಿದ್ದರು. ಅದಕ್ಕೆ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಮಧ್ಯಸ್ಥಿಕೆ ವಹಿಸಿದ್ದರು’ ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ. ಬಾಲಕೃಷ್ಣ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಯೋಗೇಶ್ವರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದ ಮಾಗಡಿ ಶಾಸಕರು ವಿಧಾನಸಭೆಯಲ್ಲಿ ಒಂದು ದಿನ ಓಡಾಡಿದ್ದರು. ಎಚ್‌.ಸಿ. ಬಾಲಕೃಷ್ಣ ಅವರನ್ನೂ ಬಿಜೆಪಿಗೆ ಆಹ್ವಾನಿಸಿರಿ. ಅವರ ಜೊತೆಯಲ್ಲಿಯೇ ನಾನೂ ಬಿಜೆಪಿ ಸೇರುತ್ತೇನೆ ಎಂಬುದಾಗಿ ಹೇಳಿದ್ದರು’ ಎಂದು ತಿಳಿಸಿದರು.

‘ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಮತ್ತು ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಹೆದರಿಕೊಂಡು ಅವರು ಇನ್ನೂ ಜೆಡಿಎಸ್‌ನಲ್ಲಿ ಇದ್ದಾರೆ. ನನ್ನಷ್ಟು ಅವರಿಗೆ ಧೈರ್ಯ ಇಲ್ಲ. ಆದರೆ, ಸಚಿವ ಅಶ್ವತ್ಥನಾರಾಯಣ ಅವರ ಜೊತೆ ಅವರು ಯಾವಾಗ ಬಿಜೆಪಿಗೆ ಕಾಲು ಕೀಳುತ್ತಾರೋ ಕಾದುನೋಡಿ’ ಎಂದು ಬಾಲಕೃಷ್ಣ ಅವರು ಹೇಳಿದ್ದಾರೆ.

ಜೆಡಿಎಸ್ ತೊರೆಯಲ್ಲ: ಮಂಜುನಾಥ್ ಸ್ಪಷ್ಟನೆ

ಬಾಲಕೃಷ್ಣ ಅವರ ಹೇಳಿಕೆ ಬೆನ್ನಲ್ಲೇ ತುರ್ತು ಸುದ್ದಿಗೋಷ್ಠಿ ಕರೆದ ಶಾಸಕ ಎ. ಮಂಜುನಾಥ್ ಅವರು, ‘ಜೆಡಿಎಸ್ ನನಗೆ ಎಲ್ಲವನ್ನೂ ನೀಡಿದೆ. ಹೀಗಿರುವಾಗ ಜೆಡಿಎಸ್ ಬಿಟ್ಟು ಬಿಜೆಪಿ ಏಕೆ ಸೇರಲಿ. ನಾನು ದೇವೇಗೌಡರ ಕುಟುಂಬದ ನಿಯತ್ತಿನ ನಾಯಿ’ ಎಂದು ಸಮಜಾಯಿಷಿ ನೀಡಿದರು.

ಸುದ್ದಿಗೋಷ್ಠಿಯುದ್ದಕ್ಕೂ ಎಚ್‌.ಸಿ. ಬಾಲಕೃಷ್ಣ ವಿರುದ್ಧ ಏಕವಚನದಲ್ಲೇ ಹರಿಹಾಯ್ದ ಅವರು, ‘ಎಚ್‌.ಸಿ. ಬಾಲಕೃಷ್ಣ ಅವರೇ ಸಿ.ಪಿ. ಯೋಗೇಶ್ವರ್ ಅವರನ್ನು ನನ್ನ ಬಳಿ ಕಳುಹಿಸಿ ಗಾಳ ಹಾಕಿದ್ದರು. ನಾನು ದೇವೇಗೌಡ ಅವರು ಬೆಳೆಸಿದ ತಿಮಿಂಗಿಲ. ಅಷ್ಟು ಸುಲಭವಾಗಿ ಯಾರ ಗಾಳಕ್ಕೂ ಬೀಳುವ ಮೀನು ಅಲ್ಲ’ ಎಂದು ತಿರುಗೇಟು ನೀಡಿದರು.

‘ನನ್ನನ್ನು ಯೋಗೇಶ್ವರ್ ವಿಧಾನಸೌಧಕ್ಕೆ ಕರೆಸಿದ್ದು ನಿಜ. ಆದರೆ, ನಾನು ಕೂಡಲೇ ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ವಿಷಯ ತಿಳಿಸಿದ್ದೆ. ಸಚಿವ ಡಾ.ಅಶ್ವತ್ಥನಾರಾಯಣ ನನ್ನನ್ನು ಎಂದಿಗೂ ಬಿಜೆಪಿ ಸೇರುವಂತೆ ಕರೆದಿಲ್ಲ’ ಎಂದು ಹೇಳಿದರು.

ಕಾಂಗ್ರೆಸ್ ಟಿಕೆಟ್ ಕೇಳಿದ ಪಕ್ಷೇತರ ಶಾಸಕ ನಾಗೇಶ್

ಬೆಂಗಳೂರು: ಮಹದೇವಪುರ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿರುವ ಮುಳಬಾಗಿಲು ಕ್ಷೇತ್ರದ ಪಕ್ಷೇತರ ಶಾಸಕ,ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಚ್. ನಾಗೇಶ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಭೇಟಿ ಮಾಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ನಾಗೇಶ್, ‘ಮಂಗಳವಾರ ಬರುವಂತೆ ಶಿವಕುಮಾರ್ ಹೇಳಿದ್ದಾರೆ.ಮುಂದಿನ ಚುನಾವಣೆಯಲ್ಲಿ ಎಲ್ಲಿಂದ ಕಣಕ್ಕಿಳಿಯಬೇಕೆಂದು ನಿರ್ಧರಿಸಲು ಸಮಯವಿದೆ. ಸದ್ಯ ಮುಳಬಾಗಿಲು ಕ್ಷೇತ್ರದಿಂದಲೇ ಕಾಂಗ್ರೆಸ್ ಟಿಕೆಟ್ ಕೇಳಲು ಬಂದಿದ್ದೆ’ ಎಂದರು. ಈ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಅವರು ನಮ್ಮ ಪಕ್ಷದಲ್ಲಿ ಇದ್ದವರು. ಅವರ ಜೊತೆ ಮಾತನಾಡಲು ಹಲವು ವಿಚಾರಗಳಿವೆ. ಮುಂದೆ ತಿಳಿಸುತ್ತೇನೆ’ ಎಂದರು.

ಬೈಕ್ ಟ್ಯಾಕ್ಸಿಗೆ ಅನುಮತಿ ನೀಡದಂತೆ ಒತ್ತಾಯ

ಪ್ರತಿಭಟನೆ: ವಿಷ ಕುಡಿದ ಆಟೋರಿಕ್ಷಾ ಚಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಬೈಕ್ ಟ್ಯಾಕ್ಸಿಗಳಿಗೆ ಅನುಮತಿ ನೀಡಬಾರದು’ ಎಂದು ಆಗ್ರಹಿಸಿ ಸಾರಿಗೆ ಇಲಾಖೆ ಕಚೇರಿ ಎದುರು ಆಟೊರಿಕ್ಷಾ ಚಾಲಕರು ಸೋಮವಾರ ಪ್ರತಿಭಟನೆ ನಡೆಸಿದರು. ಇದೇ ವೇಳೆ ಚಾಲಕ ಸುನೀಲ್ ಎಂಬುವವರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದು, ಅಸ್ವಸ್ಥಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಾಂತಿನಗರ ಬಸ್ ನಿಲ್ದಾಣ ಕಟ್ಟಡದ ಎರಡನೇ ಮಹಡಿಯಲ್ಲಿರುವ ಸಾರಿಗೆ ಇಲಾಖೆ ಮುಖ್ಯ ಕಚೇರಿ ಬಳಿ ಸೇರಿದ್ದ ಚಾಲಕರು, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಶಾಂತಿನಗರ ಮುಖ್ಯರಸ್ತೆಯಲ್ಲೂ ಜಮಾಯಿಸಿದ್ದ ಚಾಲಕರು, ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿ ಪ್ರತಿಭಟನೆ ಮುಂದುವರಿಸಿದರು. ಬಿಎಂಟಿಸಿ ಬಸ್ ಚಕ್ರದಡಿ ಮಲಗಿ ಆಕ್ರೋಶ ಹೊರಹಾಕಿದರು. ಪ್ರತಿಭಟನೆಯಿಂದಾಗಿ ಶಾಂತಿನಗರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ವಿಪರೀತ ದಟ್ಟಣೆ ಉಂಟಾಯಿತು.

> **ಬೈಕ್ ಟ್ಯಾಕ್ಸಿ ಪರಿಚಯಿಸುವ ವಿಷಯ ಹೈಕೋರ್ಟ್‌ನಲ್ಲಿದ್ದು, ನ್ಯಾಯಾಲಯದಿಂದ ಸಮ್ಮತಿ ದೊರೆತರೆ ಮರುದಿನವೇ ಇ-ಬೈಕ್ ಟ್ಯಾಕ್ಸಿ ಪರಿಚಯಿಸಲು ನಿರ್ಧರಿಸಿದ್ದೇವೆ.**
> **ಹೇಮಂತ್‌ಕುಮಾರ್,** ಸಾರಿಗೆ ಇಲಾಖೆ ಹೆಚ್ಚುವರಿ ಆಯುಕ್ತ

ಸ್ಥಳಕ್ಕೆ ಬಂದ ಪೊಲೀಸರು, ‘ಪ್ರತಿಭಟನೆಗೆ ಅನುಮತಿ ಇಲ್ಲ. ಸ್ಥಳದಿಂದ ಹೊರಟು ಹೋಗಿ’ ಎಂದರು. ಇದೇ ವೇಳೆ ಚಾಲಕರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಪೊಲೀಸರು, ಲಘು ಲಾಠಿ ಬೀಸಿ ಪ್ರತಿಭಟನಕಾರರನ್ನು ಚದುರಿಸಿದರು.

ಪ್ರತಿಭಟನೆ ನಡೆಸಿದರೂ ಕಿಮ್ಮತ್ತಿಲ್ಲ: ‘ಕೋವಿಡ್ ಲಾಕ್‌ಡೌನ್‌ನಿಂದ ಆಟೊ ಚಾಲಕರ ಬದುಕು ಬೀದಿಗೆ ಬಂದಿತ್ತು. ಕೋವಿಡ್ ನಂತರ ಆರ್ಥಿಕತೆಯಲ್ಲಿ ಚೇತರಿಕೆ ಕಂಡುಬಂದಿದೆ. ವ್ಯಾಪಾರ–ವಹಿವಾಟು ಯಥಾಸ್ಥಿತಿಗೆ ತಲುಪಿ, ಆಟೊ ಚಾಲಕರು ಸುಧಾರಿಸಿಕೊಳ್ಳುತ್ತಿದ್ದಾರೆ. ಇಂಥ ಸ್ಥಿತಿಯಲ್ಲಿ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿ, ಚಾಲಕರಿಗೆ ಅನ್ಯಾಯ ಮಾಡಲಾಗುತ್ತಿದೆ’ ಎಂದು ಪ್ರತಿಭಟನಕಾರರು ದೂರಿದರು.

‘ಬೈಕ್ ಟ್ಯಾಕ್ಸಿ ವಿರೋಧಿಸಿ ನಿರಂತರವಾಗಿ ಪ್ರತಿಭಟನೆ ನಡೆಸಲಾಗುತ್ತಿದೆ. ನಮ್ಮ ಪ್ರತಿಭಟನೆಗೆ ಸಾರಿಗೆ ಇಲಾಖೆ ಸಚಿವರು ಹಾಗೂ ಅಧಿಕಾರಿಗಳು ಕಿಮ್ಮತ್ತು ನೀಡುತ್ತಿಲ್ಲ. ಇದೇ ವರ್ತನೆ ಮುಂದುವರಿದರೆ, ಗಂಭೀರ ಸ್ವರೂಪದ ಹೋರಾಟ ನಡೆಸಬೇಕಾಗುತ್ತದೆ’ ಎಂದು ಎಚ್ಚರಿಸಿದರು.

ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ: ‘ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿರುವ ಆಟೊ ಚಾಲಕ ಸುನೀಲ್ ಅವರಿಗೆ ವಿಲ್ಸನ್ ಗಾರ್ಡನ್ ಅಗಡಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 24 ಗಂಟೆಯ ಬಳಿಕ ಅವರ ಆರೋಗ್ಯ ಸ್ಥಿತಿ ಬಗ್ಗೆ ಮಾಹಿತಿ ನೀಡಲಾಗುವುದೆಂದು ವೈದ್ಯರು ಹೇಳಿದ್ದಾರೆ’ ಎಂದು ಕುಟುಂಬದವರು ತಿಳಿಸಿದರು.

ನಗರದಲ್ಲಿ ಇಂದು

ಮಕ್ಕಳ ವಚನ ಮೇಳ: ಉದ್ಘಾಟನೆ: ಶಿವರುದ್ರ ಸ್ವಾಮೀಜಿ, ಉಪಸ್ಥಿತಿ: ಸಿದ್ಧಯ್ಯ ಗುರೂಜಿ, ‘ವಚನಜ್ಯೋತಿ ಪಯಣ’ ಪುಸ್ತಕ ಬಿಡುಗಡೆ: ಎಸ್‌.ಟಿ. ಸೋಮಶೇಖರ್, ‘ವಚನ ಪ್ರಶ್ನೋತ್ತರ ಮತ್ತು ಅಂತ್ಯಾಕ್ಷರಿ’ ಪುಸ್ತಕ ಬಿಡುಗಡೆ: ಎಂ.ಬಿ.ಪಾಟೀಲ್, ಅಭಿನಂದನೆ: ಎಸ್‌. ಷಡಕ್ಷರಿ, ಅತಿಥಿಗಳು: ಸಿ. ಸೋಮಶೇಖರ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9.45

‘ಚಾರಿತ್ರಿಕ ದಾಖಲೆಗಳು ಮತ್ತು ಛಾಯಾಚಿತ್ರಗಳ ಪ್ರದರ್ಶನ’: ಉದ್ಘಾಟನೆ: ಜಯಕರ್ ಎಸ್‌.ಎಂ., ಅತಿಥಿಗಳು: ಎನ್‌.ಮಹೇಶ್ ಬಾಬು, ಜೆ.ಟಿ. ದೇವರಾಜು, ಅಜಿತ್ ಕುಮಾರ್ ಹೆಗ್ಡೆ, ಗವಿಸಿದ್ದಯ್ಯ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

‘ಸುವರ್ಣ ಸಂಭ್ರಮ ಮತ್ತು ಕಾಲೇಜು ವಾರ್ಷಿಕೋತ್ಸವ 2022–23’: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಎನ್‌.ಆರ್. ಪಂಡಿತಾರಾಧ್ಯ, ಅತಿಥಿಗಳು: ಕಮಲಾ ಹಂಪನಾ, ಪ್ರೊಡೇ. ಪಿ. ಕೃಷ್ಣ, ಸಾಂಸ್ಕೃತಿಕ ಕಾರ್ಯಕ್ರಮ: ಸುಧಾಕರ್ ಮತ್ತು ತಂಡ, ಇಂದುಮತಿ ಸಾಲಿಮಠ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸ್ವತಂತ್ರ ಪದವಿಪೂರ್ವ ಕಾಲೇಜು ಆವರಣ, ಬೆಳಿಗ್ಗೆ 10

ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಮತ್ತು ಸಂಗೀತೋತ್ಸವ: ಗಾಯನ: ಶೃಂಗೇರಿ ಎಚ್‌.ಎಸ್‌. ನಾಗರಾಜ್ ಅವರ ಶಿಷ್ಯರು, ಪಿಟೀಲು: ಎಸ್‌.ಆರ್. ಕಾರ್ತಿಕೇಯ, ಮೃದಂಗ: ಕೆ.ಆರ್. ರಕ್ಷಿತ್ ಶರ್ಮ, ವಿ.ಚಿದಾನಂದ್, ಆಯೋಜನೆ: ತ್ಯಾಗಬ್ರಹ್ಮ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರಮಠ, ಚಾಮರಾಜಪೇಟೆ, ಸಂಜೆ 5ರಿಂದ ಪ್ರಾರಂಭ

ರಂಗನಾಯಕಮ್ಮ ಮತ್ತು ಜಿ. ಸುಬ್ಬರಾವ್ ಸಂಗೀತ ದತ್ತಿ ಕಾರ್ಯಕ್ರಮ: ಗಾಯನ: ಸಂಧ್ಯಾ ಶ್ರೀನಾಥ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್‌.ಆರ್. ಕಾಲೊನಿ, ಸಂಜೆ 5

‘ಗೋಪಾಲಕೃಷ್ಣ ನಾಯರಿ ಅವರಿಗೆ ನುಡಿನಮನ’: ಉಪಸ್ಥಿತಿ: ಎಚ್‌.ಎಸ್‌. ಶಿವಪ್ರಕಾಶ್, ಜೆ. ಶ್ರೀನಿವಾಸಮೂರ್ತಿ, ಎಸ್‌. ರಘುನಂದನ್, ಸುರೇಶ್ ಆನಗಳ್ಳಿ, ಸಿ.ಕೆ. ಗುಂಡಣ್ಣ, ಬಿ.ವಿ. ರಾಜಾರಾಂ, ಕೆ.ವಿ. ನಾಗರಾಜಮೂರ್ತಿ, ಬಿ. ಪರಶುರಾಂ ಹರಪನಹಳ್ಳಿ, ದಾಕ್ಷಾಯಣಿ ಭಟ್, ಆಯೋಜನೆ: ರಂಗ ಗೆಳೆಯರು, ಸ್ಥಳ; ಪುರುಷರ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ಭಜನ-ಪ್ರವಚನ: ಭಾರತೀ ಭಜನಾ ಮಂಡಳಿ, ಶ್ರೀಮದ್ಭಾಗವತ ಪ್ರವಚನ: ಶ್ರೀವತ್ಸಾಚಾರ್ ಕಂಬಾಲೂರು, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ದುರ್ಗಾಪರಮೇಶ್ವರಿ ದೇವಸ್ಥಾನ,17ನೇ ಅಡ್ಡರಸ್ತೆ, ನಾಗರಬಾವಿ, ಚಂದ್ರಲೇಔಟ್, ಸಂಜೆ 6

‘ವೆಡ್ಡಿಂಗ್ ರಿಂಗ್’ ನಾಟಕ ಪ್ರದರ್ಶನ: ರಚನೆ: ಅಭಿಷೇಕ್ ಅಯ್ಯಂಗಾರ್, ರಂಗ ವಿನ್ಯಾಸ ಮತ್ತು ನಿರ್ದೇಶನ: ಅರ್ಚನಾ ಶ್ಯಾಂ, ಆಯೋಜನೆ: ಅಂತರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ಧ್ವನಿ ಎತ್ತಿದರೆ ಕಠಿಣ ಕ್ರಮ ಖಚಿತ– ಅಕ್ಕಲಕೋಟೆ, ಜತ್ತ ಕನ್ನಡಿಗರಿಗೆ ಮಹಾರಾಷ್ಟ್ರ ಬೆದರಿಕೆ

‘ರಾಜ್ಯ ದ್ರೋಹ’ದ ಎಫ್‌ಐಆರ್: ಎಚ್ಚರಿಕೆ

• ರಾಜೇಶ್ ರೈ ಚಟ್ಲ

ಬೆಳಗಾವಿ ಗಡಿ ವಿವಾದ ಭುಗಿಲೆದ್ದ ಬಳಿಕ ಅಕ್ಕಲಕೋಟೆ, ಜತ್ತದ ಕನ್ನಡಿಗರ ಮೇಲೆ ಮಹಾರಾಷ್ಟ್ರ ಸರ್ಕಾರ ದೌರ್ಜನ್ಯ ಹೆಚ್ಚಿದೆ. ಕರ್ನಾಟಕ ಸರ್ಕಾರ ಮಧ್ಯಪ್ರವೇಶಿಸಬೇಕು.

ಸೋಮಶೇಖರ್ ಜಮಶೆಟ್ಟಿ, ಅಧ್ಯಕ್ಷ, ಕನ್ನಡ ಮಹಾರಾಷ್ಟ್ರ ಘಟಕ

ಬೆಂಗಳೂರು: ಕನ್ನಡಪರ ಘೋಷಣೆ ಕೂಗಿದ ಮಹಾರಾಷ್ಟ್ರದ ಅಕ್ಕಲಕೋಟೆ ತಾಲ್ಲೂಕಿನ 17 ಕನ್ನಡಿಗರಿಗೆ ನೋಟಿಸ್ ನೀಡಿರುವ ಸ್ಥಳೀಯ ಪೊಲೀಸರು, ಈ ನಡವಳಿಕೆ ಮುಂದುವರಿಸಿದರೆ ‘ರಾಜ್ಯ ದ್ರೋಹ’ ಆರೋಪ ಹೊರಿಸಿ ಪ್ರಕರಣ ದಾಖಲಿಸುವ ಎಚ್ಚರಿಕೆ ನೀಡಿದ್ದಾರೆ.

ಅಲ್ಲದೆ, ತಾಲ್ಲೂಕಿನ ಉಡಗಿ ಗ್ರಾಮದಲ್ಲಿ ಕರ್ನಾಟಕಕ್ಕೆ ಸೇರುವುದಾಗಿ ಆಗ್ರಹಿಸಿ ಪ್ರತಿಭಟನೆ ನಡೆಸಿದ ಖಾಸಗಿ ಕನ್ನಡ ಶಾಲೆಯ ಸಿಬ್ಬಂದಿಯನ್ನು ಶಾಲಾಡಳಿತ ಅಮಾನತು ಮಾಡಿದೆ. ಜತ್ತ ತಾಲ್ಲೂಕಿನಲ್ಲಿ ಕನ್ನಡ ಸರ್ಕಾರಿ ಶಾಲೆಯೊಂದರ ಶಿಕ್ಷಕರೊಬ್ಬರಿಗೆ ನೋಟಿಸ್ ನೀಡಲಾಗಿದೆ.

ಡಿಸೆಂಬರ್‌ನಲ್ಲಿ ಗಡಿ ವಿವಾದ ಭುಗಿಲೆದ್ದಿದ್ದಂತೆ ಸೊಲ್ಲಾಪುರ ಜಿಲ್ಲೆಯ ವಿವಿಧೆಡೆ ಕನ್ನಡ ಸಂಘಟನೆಗಳು ಕರ್ನಾಟಕವನ್ನು ಬೆಂಬಲಿಸಿ ಪ್ರತಿಭಟನೆ ನಡೆಸಿದ್ದವು. ಪ್ರತಿಭಟನೆಯ ಮುಂಚೂಣಿಯಲ್ಲಿ ಕಾಣಿಸಿಕೊಂಡವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮಹಾರಾಷ್ಟ್ರ ಸರ್ಕಾರ ಮುಂದಾಗಿದೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಅವರಿಗೆ ಪತ್ರ ಬರೆದಿರುವ ಮಹಾರಾಷ್ಟ್ರದ ಅಖಿಲ ಕನ್ನಡ ಬಳಗ, ‘ಅಕ್ಕಲಕೋಟೆ, ಜತ್ತ ಕನ್ನಡಿಗರ ಮೇಲೆ ಇಲ್ಲಿನ ಸರ್ಕಾರ ಕ್ರಮಕ್ಕೆ ಮುಂದಾಗಿರುವುದು ಈ ಭಾಗದಲ್ಲಿ ಭೀತಿ ಹುಟ್ಟಿಸಿದೆ. ಹೀಗಾಗಿ ಎರಡೂ ರಾಜ್ಯಗಳ (ಕರ್ನಾಟಕ-ಮಹಾರಾಷ್ಟ್ರ) ಮುಖ್ಯಮಂತ್ರಿಗಳ ಸಭೆ ಏರ್ಪಡಿಸಿ, ಅನ್ಯಾಯ ಆಗದಂತೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಮತ್ತು ಇತರರ ಮೇಲೆ ದಾಖಲಾಗಿರುವ ದೂರುಗಳನ್ನು ಹಿಂಪಡೆಯಲು ಶೀಘ್ರ ಕ್ರಮ ತೆಗೆದುಕೊಳ್ಳಬೇಕು’ ಎಂದೂ ಮನವಿ ಮಾಡಿದೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಸೋಮಶೇಖರ್ ಜಮಶೆಟ್ಟಿ, ‘ಅಕ್ಕಲಕೋಟೆಯ ಉಡಗಿ ಗ್ರಾಮಕ್ಕೆ ಮೂಲಸೌಲಭ್ಯ ಒದಗಿಸಬೇಕು. ಇಲ್ಲದಿದ್ದರೆ ಕರ್ನಾಟಕಕ್ಕೆ ಸೇರಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ 17 ಜನರ ಹೆಸರು ಮರಾಠಿ ಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತು. ಅವರೆಲ್ಲರಿಗೂ ನೋಟಿಸ್ ನೀಡಿರುವ ಪೊಲೀಸರು, ‘ಇಲ್ಲಿ ಯಾಕೆ ಕನ್ನಡ ಪರ ಘೋಷಣೆ ಕೂಗಿದ್ದೀರಿ, ಧ್ವಜ ಹಾರಿಸಿದ್ದೀರಿ. ಇದೇ ರೀತಿ ಮುಂದುವರಿದರೆ ರಾಜ್ಯ ದ್ರೋಹದ ಆರೋಪದಡಿ ಎಫ್‌ಐಆರ್ ದಾಖಲಿಸಬೇಕಾಗುತ್ತದೆ’ ಎಚ್ಚರಿಕೆ ನೀಡಿದ್ದಾರೆ’ ಎಂದರು.

ಅಮಾನತಿನ ಅಸ್ತ್ರ ಬಳಕೆ

ಕರ್ನಾಟಕ ರಕ್ಷಣಾ ವೇದಿಕೆಯ ಸೊಲ್ಲಾಪುರ ಜಿಲ್ಲಾ ಘಟಕದ ಅಧ್ಯಕ್ಷ, ಭಾಷಾ ಅಲ್ಪಸಂಖ್ಯಾತ ಶಾಲೆಯಾದ ಅಕ್ಕಲಕೋಟೆಯ ಹೈದ್ರಾ ಪ್ರೌಢಶಾಲೆಯ ‘ಡಿ’ ದರ್ಜೆಯ ನೌಕರ ಕರ್ಜಗಿ ಮಲ್ಲಿನಾಥ ಶರಣಪ್ಪ ಎಂಬುವವರನ್ನು ಶಾಲಾ ಆಡಳಿತ ಜ. 2ರಂದು ಅಮಾನತು ಮಾಡಿದೆ. ಉಡಗಿ ಗ್ರಾಮದಲ್ಲಿ ಸುಮಾರು 20 ಮಂದಿಯೊಂದಿಗೆ ಡಿ. 2ರಂದು ಮಧ್ಯಾಹ್ನ ಪ್ರತಿಭಟನೆ ನಡೆಸುವ ಮೂಲಕ ಮಹಾರಾಷ್ಟ್ರ ಸರ್ಕಾರದ ಕಾನೂನು ಉಲ್ಲಂಘಿಸಿದ ಆರೋಪದಲ್ಲಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಅಕ್ಕಲಕೋಟೆ ಪೊಲೀಸರು, ನೌಕರನ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸೊಲ್ಲಾಪುರ ಜಿಲ್ಲಾ ಪರಿಷತ್‌ನ ಶಿಕ್ಷಣಾಧಿಕಾರಿ (ಮಾಧ್ಯಮಿಕ) ಪತ್ರ ಬರೆದಿತ್ತು. ಪೊಲೀಸರ ಸೂಚನೆಯಂತೆ ಹೈದ್ರಾ ಪ್ರೌಢಶಾಲಾ ಆಡಳಿತ ಮಂಡಳಿಗೆ ಶಿಕ್ಷಣಾಧಿಕಾರಿ ನೋಟಿಸ್ ನೀಡಿದ್ದರು.

ಇದೇ 15ಕ್ಕೆ ‘ಯೋಗಥಾನ್ 2022’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಪದವಿಪೂರ್ವ ಕಾಲೇಜುಗಳ ಆವರಣಗಳಲ್ಲಿ ಇದೇ 15ರಂದು ಬೆಳಿಗ್ಗೆ 6.30ಕ್ಕೆ ಯೋಗ ಶಿಷ್ಟಾಚಾರ ಆಧರಿಸಿ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸ ‘ಯೋಗಥಾನ್-2022’ ಮಾಡಿಸುವಂತೆ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ಪದವಿಪೂರ್ವ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

‘ಈ ಯೋಗಥಾನ್‌ಗಾಗಿ ಆಯಾ ಜಿಲ್ಲೆಗಳ ಪದವಿಪೂರ್ವ ಕಾಲೇಜುಗಳ ದೈಹಿಕ ಶಿಕ್ಷಣ ಉಪನ್ಯಾಸಕರನ್ನು ‘ಯೋಗ ಸರ್ಟಿಫಿಕೇಟ್ ಬೋರ್ಡ್’ನಲ್ಲಿ ಯೋಗ ಶಿಕ್ಷಕರಾಗಿ ಹಾಗೂ ಎಲ್ಲ ವಿದ್ಯಾರ್ಥಿಗಳನ್ನು ವೆಬ್‌ಸೈಟ್‌ನಲ್ಲಿ (www.yogathon2022.com) ನೋಂದಾಯಿಸಬೇಕು’ ಎಂದೂ ಸುತ್ತೋಲೆಯಲ್ಲಿ ಇಲಾಖೆಯ ನಿರ್ದೇಶಕ ಆರ್. ರಾಮಚಂದ್ರನ್ ಅವರು ತಿಳಿಸಿದ್ದಾರೆ.

ಸುಧಾ, ಮಯೂರ ಓದಿರಿ

ಸ್ಯಾಂಟ್ರೊ ರವಿ ಅಣತಿಯಂತೆ ಸಹೋದರಿಯರ ಬಂಧನ

ಸುಳ್ಳು ಪಾತ್ರ, ಸಾಕ್ಷ್ಯ ಸೃಷ್ಟಿಸಿದ್ದ ಇನ್‌ಸ್ಪೆಕ್ಟರ್

ಪ್ರಜಾವಾಣಿ ವಾರ್ತೆ

ಪ್ರವೀಣ್

ಬೆಂಗಳೂರು: ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ ಕೊಲೆ ಬೆದರಿಕೊಡ್ಡಿದ್ದ ಪ್ರಕರಣದ ಆರೋಪಿ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಸಂಚಿನಲ್ಲಿ ಭಾಗಿಯಾಗಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಪ್ರವೀಣ್, ಸುಳ್ಳು ಪಾತ್ರ ಹಾಗೂ ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿ ಅಮಾಯಕ ಸಹೋದರಿಯರನ್ನು ಬಂಧಿಸಿದ್ದ ಸಂಗತಿ ತನಿಖೆಯಿಂದ ಬಯಲಾಗಿದೆ.

ಮೈಸೂರು ವಿಜಯನಗರ ಠಾಣೆಗೆ ಜ. 2ರಂದು ದೂರು ನೀಡಿದ್ದ ಸಂತ್ರಸ್ತೆ, ‘ನನ್ನ ಹಾಗೂ ನನ್ನ ಸಹೋದರಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದ ಕಾಟನ್‌ಪೇಟೆ ಠಾಣೆ ಇನ್‌ಸ್ಪೆಕ್ಟರ್ ಪ್ರವೀಣ್, ನಮ್ಮಿಬ್ಬರನ್ನು ಬಂಧಿಸಿದ್ದರು. ಕೆ.ಎಸ್. ಮಂಜುನಾಥ್ ಅಣತಿಯಂತೆ ಕೆಲಸ ಮಾಡಿದ್ದ ಪ್ರವೀಣ್, ನಾವಿಬ್ಬರೂ ಘಟನಾ ಸ್ಥಳದಲ್ಲಿ ಇಲ್ಲದಿದ್ದರೂ ಸುಳ್ಳು ಪಾತ್ರ ಹಾಗೂ ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿದ್ದರು’ ಎಂದು ಪೊಲೀಸರ ಎದುರು ಅಳಲು ತೋಡಿಕೊಂಡಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ತನಿಖೆ ನಡೆಸಿ ವರದಿ ನೀಡುವಂತೆ ಕಮಿಷನರ್ ಪ್ರತಾಪ್ ರೆಡ್ಡಿ ಮೂಲಕ ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಅವರಿಗೆ ಸೂಚಿಸಿದ್ದರು. ಅದರಂತೆ ತನಿಖೆ ಪೂರ್ಣಗೊಳಿಸಿ, ವರದಿಯನ್ನು ಪ್ರವೀಣ್ ಸೂದ್ ಅವರಿಗೆ ಸಲ್ಲಿಸಲಾಗಿದೆ.

ಸಹೋದರಿಯರನ್ನು ಜೈಲಿಗಟ್ಟಲು ಸಂಚು: ‘ಸದ್ಯ ಮೈಸೂರಿನಲ್ಲಿ ದೂರು ಸಲ್ಲಿಸಿರುವ ಸಂತ್ರಸ್ತೆ, ಸಹೋದರಿ ಹಾಗೂ ಪೋಷಕರ ಜೊತೆ ವಾಸವಿದ್ದರು. ತನ್ನ ವಿರುದ್ಧ ತಿರುಗಿಬಿದ್ದರೆಂಬ ಕಾರಣಕ್ಕೆ ಸಂತ್ರಸ್ತೆ ಹಾಗೂ ಸಹೋದರಿಯನ್ನು ಜೈಲಿಗಟ್ಟಲು ಆರೋಪಿ ಸ್ಯಾಂಟ್ರೊ ರವಿ ಸಂಚು ರೂಪಿಸಿದ್ದ. ಇದಕ್ಕಾಗಿ ಇನ್‌ಸ್ಪೆಕ್ಟರ್ ಪ್ರವೀಣ್ ಸಹಾಯ ಪಡೆದಿದ್ದ.’

‘ಸದ್ಯ ಗುಪ್ತದಳದ ಕೆಲಸ ಮಾಡುತ್ತಿರುವ ಪ್ರವೀಣ್, 2022ರ ಡಿಸೆಂಬರ್‌ನಲ್ಲಿ ಕಾಟನ್‌ಪೇಟೆ ಇನ್‌ಸ್ಪೆಕ್ಟರ್ ಆಗಿದ್ದರು. ವರ್ಗಾವಣೆ ವಿಚಾರಕ್ಕಾಗಿ ರವಿಯನ್ನು ಸಂಪರ್ಕಿಸಿದ್ದರು. ಹೀಗಾಗಿ, ರವಿ, ತನ್ನ ಕೆಲಸ ಮಾಡಿಸಿಕೊಂಡಿದ್ದ’ ಎಂದು ಮೂಲಗಳು ತಿಳಿಸಿವೆ.

‘ದೃಶ್ಯ’ ಸಿನಿಮಾ ಮೀರಿಸಿದ ಕಥೆ: ‘2022ರ ನವೆಂಬರ್ 23ರಂದು ಮೆಜೆಸ್ಟಿಕ್ ಬಳಿಯ ಪ್ರವೀಣ್ ಗೋದಾಮಿನ ರೈಲ್ವೆ ಕೆಲಸದ ಬಳಿ ಪ್ರಕಾಶ್ ಎಂಬುವವರ ಮೇಲೆ ಸ್ಯಾಂಟ್ರೊ ರವಿ ಸಹಚರ ಶೇಖ್ ಎಂಬಾತ ಹಲ್ಲೆ ಮಾಡಿದ್ದ. ಪ್ರಕಾಶ್ ಹಾಗೂ ಶೇಖ್, ರವಿ ಸಂಚಿನಂತೆ ಪರಸ್ಪರ ಒಪ್ಪಿ ಸೃಷ್ಟಿಸಿದ್ದ ಪ್ರಕರಣವಿದು. ಇದಾಗಿತ್ತು. ಹಲ್ಲೆ ಸಂಬಂಧ ಪ್ರಕಾಶ್ ದೂರು ನೀಡಿದ್ದರು. ಇದೇ ಪ್ರಕರಣದಲ್ಲಿ ಸಹೋದರಿಯರನ್ನು ಆರೋಪಿಯನ್ನಾಗಿ ಮಾಡುವಂತೆ ಇನ್‌ಸ್ಪೆಕ್ಟರ್‌ಗೆ ಸ್ಯಾಂಟ್ರೊ ರವಿ ಸೂಚಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಘಟನಾ ಸ್ಥಳದಲ್ಲಿ ಸಹೋದರಿಯರು ಇದ್ದರೆಂದು ಸುಳ್ಳು ಪಾತ್ರ ಸೃಷ್ಟಿಸಿ ಎಫ್‌ಐಆರ್ ದಾಖಲಿಸಿದ್ದ ಇನ್‌ಸ್ಪೆಕ್ಟರ್ ಪ್ರವೀಣ್, ದೃಶ್ಯ ಸಿನಿಮಾ ರೀತಿಯಲ್ಲೇ ನಕಲಿ ಸಾಕ್ಷ್ಯಗಳನ್ನು ಹುಟ್ಟುಹಾಕಿದ್ದರು.’

‘ಸಹೋದರಿಯರು, ದೂರುದಾರ ಪ್ರಕಾಶ್ ಬಳಿ ₹ 5 ಲಕ್ಷ ಸಾಲ ಕೇಳಿದ್ದರು. ಅದಕ್ಕೆ ಭದ್ರತೆಯಾಗಿ ಕೆನರಾ ಬ್ಯಾಂಕ್‌ನ ಚೆಕ್ ನೀಡಿದ್ದರು. ಹಣ ಕೊಡುವುದಕ್ಕಾಗಿ ಪ್ರಕಾಶ್, ಗೋದಾಮಿನ ಸಮೀಪದ ರೈಲ್ವೆ ಕೆಲಸಕ್ಕೆ ಬರುವಂತೆ ಸಹೋದರಿಯರು ಕೆನರಾ ಬ್ಯಾಂಕ್ ಚೆಕ್ ಹಿಂದಿರುಗಿಸುವಂತೆ ಗಟ್ಟಿಯಾಗಿ ಹಿಡಿದುಕೊಂಡಿದ್ದ. ಸಂತ್ರಸ್ತೆ ಮಹಿಳೆ, ಪ್ರಕಾಶ್ ಹಣಕ್ಕೆ ಚಾಕು ಹಿಡಿದಿದ್ದರು. ಅವರ ಸಹೋದರಿ, ಕತ್ತಿನಲ್ಲಿದ್ದ ಚಿನ್ನಾಭರಣ ಹಾಗೂ ₹ 9 ಸಾವಿರ ಹಣ ಕಿತ್ತುಕೊಂಡಿದ್ದರು. ಇದೇ ವೇಳೆ ಮೂವರು, ಪ್ರಕಾಶ್ ಮೇಲೆ ಹಲ್ಲೆ ಮಾಡಿದ್ದರು’ ಎಂಬುದಾಗಿ ಇನ್‌ಸ್ಪೆಕ್ಟರ್ ಸುಳ್ಳು ಕಥೆ ಕಟ್ಟಿದ್ದ.’

‘ಪುರಾವೆಯಾಗಿ ಕೆನರಾ ಬ್ಯಾಂಕ್ ಚೆಕ್, ಚಾಕು, ಬಸ್ ಪ್ರಯಾಣದ ಟಿಕೆಟ್, ಕೆಲ ಸುಳ್ಳು ಸಾಕ್ಷಿಗಳನ್ನು ತಾನೇ ಸೃಷ್ಟಿಸಿದ್ದ. ಸ್ಯಾಂಟ್ರೊ ರವಿ ಸಹ ಸಹೋದರಿಯರ ಮೊಬೈಲ್‌ಗಳನ್ನು ಕದ್ದು ಶೇಖ್ ಬಳಿ ಕೊಟ್ಟು ಕಳುಹಿಸಿದ್ದ. ಹೀಗಾಗಿ, ಸ್ಥಳದಲ್ಲಿ ಮೊಬೈಲ್ ನೆಟ್‌ವರ್ಕ್ ಇರುವಂತೆ ಬಿಂಬಿಸಲಾಗಿತ್ತು. ಎಲ್ಲ ಪುರಾವೆಗಳನ್ನು ನಿಜವೆಂದು ನ್ಯಾಯಾಲಯಕ್ಕೆ ನಂಬಿಸಿದ್ದ ಇನ್‌ಸ್ಪೆಕ್ಟರ್, ಸಹೋದರಿಯರನ್ನು ಜೈಲಿಗೆ ಬಂಧಿಸಿದ್ದರು. ‘ಇವೆಲ್ಲ ಸಂಗತಿ ಡಿಸಿಪಿ ಅವರ ತನಿಖಾ ವರದಿಯಲ್ಲಿದೆ’ ಎಂದು ಮೂಲಗಳು ವಿವರಿಸಿವೆ.

‘ಹತಾಶೆಯಿಂದ ತೇಜೋವಧೆಗೆ ಇಳಿದ ಕುಮಾರಸ್ವಾಮಿ’

ಬೆಂಗಳೂರು: ‘ನನ್ನ ಮನೆಗೆ ಬಂದು ಹಣದ ಗಂಟು ಬಿಚ್ಚುವ ಧೈರ್ಯ ತೋರಲು ಯಾರಿಗೂ ಈವರೆಗೆ ಅವಕಾಶ ನೀಡಿಲ್ಲ. ರಾಜಕೀಯವಾಗಿ ಹತಾಶರಾಗಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಸುಳ್ಳು ಆರೋಪದ ಮೂಲಕ ನನ್ನ ತೇಜೋವಧೆಗೆ ಪ್ರಯತ್ನಿಸುತ್ತಿದ್ದಾರೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ. ‘ಸ್ಯಾಂಟ್ರೊ ರವಿ ಗೃಹ ಸಚಿವರ ಮನೆಯಲ್ಲೇ ಹಣದ ಗಂಟು ಬಿಚ್ಚಿ, ಎಣಿಕೆ ಮಾಡುತ್ತಿರುವ ವಿಡಿಯೊ ಇದೆ’ ಎಂಬ ಕುಮಾರಸ್ವಾಮಿ ಹೇಳಿಕೆ ಕುರಿತು ಸೋಮವಾರ ಪ್ರತಿಕ್ರಿಯಿಸಿರುವ ಅವರು, ‘ನಾನು ಜೀವನದಲ್ಲಿ ನೈತಿಕತೆ ಪಾಲಿಸಿಕೊಂಡು ಬಂದಿದ್ದೇನೆ. ಯಾರಿಗೂ ನನ್ನ ಮನೆಗೆ ಬಂದು ಹಣದ ಗಂಟು ಬಿಚ್ಚುವ ಅವಕಾಶ ನೀಡಿಲ್ಲ’ ಎಂದಿದ್ದಾರೆ.



ಆರಗ ಜ್ಞಾನೇಂದ್ರ

ಸ್ಯಾಂಟ್ರೊ ರವಿ ಪತ್ತೆಗೆ ಶೋಧ

ಬೆಂಗಳೂರು: ಮೈಸೂರಿನಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿರುವ ಸ್ಯಾಂಟ್ರೊ ರವಿ ಪತ್ತೆಗಾಗಿ ಮೈಸೂರು ಪೊಲೀಸರ ತಂಡ ಬೆಂಗಳೂರಿನಲ್ಲಿ ಶೋಧ ನಡೆಸುತ್ತಿದೆ.

‘ಸ್ಯಾಂಟ್ರೊ ರವಿಗೆ ಸೇರಿದ್ದು ಎನ್ನಲಾದ ಶೇಷಾದ್ರಿಪುರದ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್ ಹಾಗೂ ಬಸವನಗುಡಿಯ ಮನೆಯಲ್ಲಿ ಪೊಲೀಸರು ತಪಾಸಣೆ ನಡೆಸಿದರು. ಆದರೆ, ರವಿ ಪತ್ತೆಯಾಗಿಲ್ಲ. ರಾಜ್ಯ ತೊರೆದು ಬೇರೆಡೆ ಹೋಗಿರುವ ಮಾಹಿತಿ ಇದೆ. ಆತನ ಪತ್ತೆಗಾಗಿ 11 ತಂಡಗಳು ಹುಡುಕಾಟ ಮುಂದುವರಿಸಿವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಅಮಾನತು ಸಾಧ್ಯತೆ’

‘ಇನ್‌ಸ್ಪೆಕ್ಟರ್ ಪ್ರವೀಣ್ ಕೃತ್ಯದ ತನಿಖಾ ವರದಿ ಡಿಜಿ-ಐಜಿಪಿ ಕೈ ಸೇರಿದೆ. ಅದನ್ನು ಪರಿಶೀಲಿಸಿದ ಬಳಿಕ, ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡುವ ಸಾಧ್ಯತೆ ಇದೆ. ಜೊತೆಗೆ, ಮತ್ತಷ್ಟು ಪೊಲೀಸರು ಕೃತ್ಯಕ್ಕೆ ಸಹಕರಿಸಿರುವ ಮಾಹಿತಿಯೂ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ಯಾಂಟ್ರೊ ರವಿ ಅಕ್ರಮ ಆಸ್ತಿ ತನಿಖೆಯಾಗಲಿ’

ಪ್ರಧಾನಿ ಮೋದಿ, ಅಮಿತ್ ಶಾ, ಐಟಿ ಅಧಿಕಾರಿಗಳಿಗೆ ಒಡನಾಡಿ ಸಂಸ್ಥೆ ಮನವಿ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿಯ ಅಕ್ರಮ ಆಸ್ತಿ ಹಾಗೂ ವ್ಯವಹಾರದ ಕುರಿತು ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು’ ಎಂದು ಕೋರಿ ಒಡನಾಡಿ ಸಂಸ್ಥೆ ಕಾರ್ಯದರ್ಶಿಗಳಾದ ಸ್ಟ್ಯಾನ್ಲಿ ಮತ್ತು ಪರಶುರಾಮ್ ಅವರು ಸೋಮವಾರ ಬೆಂಗಳೂರಿನಲ್ಲಿ ಆದಾಯ ತೆರಿಗೆ ಇಲಾಖೆಯ ಅಧಿಕಾರಿ ಭಾಸ್ಕರ್ ರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಜೊತೆಗೆ ಅವರು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹೈಕೋರ್ಟ್ ರಿಜಿಸ್ಟ್ರಾರ್, ಡಿಜಿಪಿ ಪ್ರವೀಣ್ ಸೂದ್ ಹಾಗೂ ಆರ್ಥಿಕ ಅಪರಾಧಗಳ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿಗೂ ಇ-ಮೇಲ್ ಮೂಲಕ ಮನವಿ ಸಲ್ಲಿಸಿದ್ದಾರೆ. ಮನವಿಯೊಂದಿಗೆ, ಮೈಸೂರಿನಲ್ಲಿ ಆತನ ವಿರುದ್ಧ ಜ.2ರಂದು ದಾಖಲಾಗಿರುವ ಎಫ್‌ಐಆರ್ ಪ್ರತಿಯನ್ನೂ ನೀಡಿದ್ದಾರೆ.

ಪತ್ರದಲ್ಲೇನಿದೆ?: ‘ರವಿ ಅಮಾಯಕ ಹೆಣ್ಣುಮಕ್ಕಳನ್ನು ಅನೈತಿಕ ಚಟುವಟಿಕೆಗಳಿಗೆ ಮಾರಾಟ ಮಾಡಿ, ಕೆಲವು ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆಯಲ್ಲಿ ತೊಡಗಿ, ಅಕ್ರಮವಾಗಿ ಹಣ ಸಂಪಾದಿಸಿ, ಸಮಾಜಕ್ಕೆ ತೊಡಕಾಗಿದ್ದಾನೆ. ಹಣ, ಉದ್ಯೋಗ ಮತ್ತು ಐಷಾರಾಮಿ ಜೀವನದ ಆಮಿಷ ಒಡ್ಡಿ ವೇಶ್ಯಾವಾಟಿಕೆಗೆ ದೂಡಿದ್ದಾನೆ’ ಎಂದು ಆರೋಪಿಸಿರುವ ಅವರು, ‘ಆರೋಪಿಯು ಬೆಂಗಳೂರು ಮತ್ತು ಮೈಸೂರಿನ ಮನೆಯ ವಿಳಾಸ ಹಾಗೂ ಮೈಸೂರಿನಲ್ಲಿ ಎರಡು ಕಡೆ ಇರುವ ಆತನ ಹಣಕಾಸು ಸಂಸ್ಥೆಯ ವಿಳಾಸಗಳನ್ನೂ ನೀಡಿದ್ದಾರೆ.

‘₹ 20 ಸಾವಿರಕ್ಕಿಂತಲೂ ಹೆಚ್ಚಿನ ಹಣವನ್ನು ಅಕ್ರಮವಾಗಿಟ್ಟುಕೊಳ್ಳುವಂತಿಲ್ಲ ಎಂಬ ನಿಯಮ ಮೀರಿ ಆರೋಪಿ ಮನೆಯಲ್ಲಿ ಹೆಚ್ಚು ಹಣ ಇಟ್ಟುಕೊಂಡಿದ್ದ. ಕಾನೂನುಬಾಹಿರ ಚಟುವಟಿಕೆಯಿಂದ ಸಂಗ್ರಹಿಸಿದ್ದ ಹಣದಿಂದ ಆತ ಹಣಕಾಸು ಸಂಸ್ಥೆ ಸ್ಥಾಪಿಸಿದ್ದ. ಸಂಸ್ಥೆಯಲ್ಲಿ ಕೆಲಸ ನೀಡುವುದಾಗಿ ಪ್ರಕಟಣೆ ನೀಡಿ, ಅಲ್ಲಿಗೆ ಬರುತ್ತಿದ್ದ ಹೆಣ್ಣುಮಕ್ಕಳನ್ನು ಅನೈತಿಕ ಚಟುವಟಿಕೆಗೆ ಬಳಸಿಕೊಂಡಿದ್ದಾನೆ’ ಎಂದು ದೂರಿದ್ದಾರೆ.

‘ಅಕ್ರಮವಾಗಿ ಸಂಪಾದಿಸಿದ ಹಣದಲ್ಲಿ ಮೈಸೂರಿನ ದಟ್ಟಗಳ್ಳಿಯಲ್ಲಿ ನಿವೇಶನ ಖರೀದಿಸಿದ್ದ, 2022ರ ಜೂನ್‌ನಲ್ಲಿ ನೋಂದಣಿ ಮಾಡಿಸಿದ್ದಾನೆ. ವರ್ಗಾವಣೆ ಹಣ ಸಂಗ್ರಹಿಸಲು ಅಧಿಕಾರಿಗಳೊಡನೆ ಶಾಮೀಲಾಗಿ, ಕುಮಾರಕೃಪಾ ಅತಿಥಿಗೃಹದಲ್ಲಿ ಕೊಠಡಿ ಪಡೆದುಕೊಂಡಿದ್ದಾನೆ. ಕೆಲವು ಐಎಎಸ್, ಐಪಿಎಸ್ ಹಾಗೂ ಉನ್ನತ ಅಧಿಕಾರಿಗಳು ಆತನ ಮೂಲಕ ಹಣ ತೊಡಗಿಸಿದ್ದಾರೆ’ ಎಂದು ದೂರಿ ಹಲವು ದಾಖಲೆಗಳನ್ನು ಸಲ್ಲಿಸಿದ್ದಾರೆ.

2005ರಲ್ಲಿ ಅಂದಿನ ಮೈಸೂರು ನಗರ ಪೊಲೀಸ್ ಆಯುಕ್ತ ಪ್ರವೀಣ್ ಸೂದ್ ಅವರು ಹೊರಡಿಸಿದ್ದ ಬಂಧನದ ಆದೇಶದ ಪ್ರತಿಯನ್ನೂ ನೀಡಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ನಂ: ಕಾಇಅ/ಪಂ.ರಾ.ಇಂ.ವಿ/ಬ/ಎ-1/ವಿ.ವಿ.ಟೆ.ತಿ/ಟೆಂಡರ್/2022-23/1521 ದಿನಾಂಕ 07-01-2023.

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ... 3054 ಸಿ. ಎಂ. ಜಿ. ಎಸ್. ವೈ. 3054 ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ... ಒಟ್ಟು 27 ಕಾಮಗಾರಿಗಳಿಗೆ ... ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 09 ಕಾಮಗಾರಿಗಳನ್ನು ಮತ್ತು ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 03 ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.

ಟೆಂಡರ್ ನಮೂನೆಯನ್ನು www.eproc.karnataka.gov.in/e-portal/index.seam ಅಂತರ್ಜಾಲದಲ್ಲಿ ದಿನಾಂಕ 09-01-2023 ರಿಂದ ದಿನಾಂಕ 17-01-2023 ರಂದು ಸಂಜೆ 4.00 ಗಂಟೆವರೆಗೆ ... ದಿನಾಂಕ: 17-01-2023 ರ 16.00 ಗಂಟೆಯವರೆಗೆ ... ದಿನಾಂಕ: 18-01-2023 ರಂದು 17.00 ಗಂಟೆಗೆ ತೆರೆಯಲಾಗುವುದು. ... (www.eproc.karnataka.gov.in/e-portal/index.seam) ... ದೂರವಾಣಿ ಸಂಖ್ಯೆ 08392-266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/792/ಎಂಸಿಎ/2022-23

Air Force School, ASTE
NAL Wind Tunnel Road, Murgeshpalya, Bengaluru-560017

TENDER NOTIFICATION

Air Force School, ASTE, invites tender for purchase of 4 nos. of 86" Interactive Flat Panel and 20 nos. of 75" Interactive Flat Panels. Tender forms are available on www.afsaste.edu.in.
For details contact 080-25272332/ 25276920.

GTTC
ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ
ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560 010.
ದೂ.ಸಂ.: 080-23384303, ಇ–ಮೇಲ್: gttcadmn2019@gmail.com
ಸಂಖ್ಯೆ: ಜಿಟಿಟಿಸಿ/ಆಡ್ಮಿನ್/ಗ/202201/2022-23 ದಿನಾಂಕ : 10.01.2023

ಪ್ರಕಟಣೆ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ... ದಿನಾಂಕ: 31.12.2022ರ ಸಮ ಸಂಖ್ಯೆಯ ಪ್ರಕಟಣೆಯಲ್ಲಿ ... ದಿನಾಂಕ: 10.01.2023 ನ್ನು ಕೊನೆಯ ದಿನಾಂಕವನ್ನಾಗಿ ನಿಗದಿಪಡಿಸಲಾಗಿತ್ತು. ... 18.01.2023ರವರೆಗೆ ವಿಸ್ತರಿಸಲಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ: 16–ಡಿ, ದೇವರಾಜ ಅರಸು ಭವನ, 4ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052
Ph: 080-22374832/22374834. Email: md.dbcdc@gmail.com, Web: www.dbcdc.karnataka.gov.in
ದೇಅಹಿ/ಸಿಬ್ಬಂದಿ/ಕೇ.ಕ/ಹಿ.ಸಿ.ಟಿ.ಕೆ/ಸಿಆರ್–21/2022–23 ದಿನಾಂಕ: 09.01.2023

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹೊರಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು ಒದಗಿಸಲು ಇ-ಟೆಂಡರ್ ಆಹ್ವಾನಿಸಿದೆ.
ವಿವರಗಳಿಗೆ https//:eproc.karnataka.gov.in ವೆಬ್‌ಸೈಟ್ ವೀಕ್ಷಿಸಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಲು ಹೆಲ್ಪ್ ಲೈನ್ ಸಂಖ್ಯೆ: 080–22374832 ಮತ್ತು 080–22374834

ಪ್ರೀ–ಬಿಡ್ ಸಭೆ ದಿನಾಂಕ	: 18.01.2023 11.00 ಘಂಟೆ
ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ	: 24.01.2023. 17.00 ಘಂಟೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	: 27.01.2023. 11.00 ಘಂಟೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	: 06.02.2023. 11.00 ಘಂಟೆ

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ)
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು.
DIPR/CP/RO3992/AAPL/2022-23

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಪಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
E-mail: commissionerahvs@gmail.com ದೂರವಾಣಿ ಸಂ: 080–23412767
ಸಂ: CAH:RKVY:Chaff Cutter:Short Term Tender:2022-23 ದಿನಾಂಕ: 09.01.2023

ಟೆಂಡರ್ ನೋಟಿಫಿಕೇಷನ್ ("ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2022–23 ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಆರ್.ಕೆ.ವಿ.ವೈ. ಯೋಜನೆಯಡಿಯಲ್ಲಿ Chaff Cutter ಗಳನ್ನು ಖರೀದಿಸುವುದಕ್ಕೆ ಸಂಬಂಧಿಸಿದಂತೆ ಅರ್ಹ ಟೆಂಡರುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ https://eproc.karnataka.gov.in ಮೂಲಕ ಎರಡು ಲಕೋಟೆ ವಿಧಾನದಲ್ಲಿ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ಇಟ್ಟ ಮೊತ್ತ ರೂ.964.00 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 09–01–2023 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು e-procurement Platform ನಲ್ಲಿ ದಿನಾಂಕ: 09–01–2023 ರಿಂದ 23–01–2023 ರವರೆಗೆ ಸಾಯಂಕಾಲ 5.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ eprocurement Portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಜಂಟಿ ನಿರ್ದೇಶಕರು, ವಿ.ಇ.ಕಿ. & ಆರ್.ಕೆ.ವಿ.ವೈ ಹಾಗೂ ಸದಸ್ಯ ಕಾರ್ಯದರ್ಶಿ, ಟೆಂಡರ್ ಆಹ್ವಾನ ಸಮಿತಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.

ಪಟ್ಟಣ ಪಂಚಾಯತ ಕಾರ್ಯಾಲಯ, ಯಕ್ಸಂಬಾ
ತಾ :ಚಿಕ್ಕೋಡಿ ಜಿ : ಬೆಳಗಾವಿ
ಕ್ರಸಂ:ಪ.ಪಂ.ಯ/ಟೆಂಡರ/ಎಸ್.ಎಫ್.ಸಿ-4/2022-23/ ದಿನಾಂಕ:06-01-2023

ಮರುಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಯಕ್ಸಂಬಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿನ 2019–20 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ... ಕಾಮಗಾರಿಗಳ ಅಂದಾಜು ಮೊತ್ತರೂ. ರೂ.100.0 ಲಕ್ಷಗಳವರೆಗೆ ಇರುತ್ತವೆ.

ಭರ್ತಿ ಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 16/01/2023 ಸಾಯಂಕಾಲ 4.0 ಘಂಟೆಯವರೆಗೆ. ತಾಂತ್ರಿಕ ಟೆಂಡರಗಳನ್ನು ತೆರೆಯುವ ದಿನಾಂಕ:18/01/2023 ರಂದು ಮಧ್ಯಾಹ್ನ 11.00 ನಂತರ ತೆರೆಯಲಾಗುವುದು. ಆರ್ಥಿಕ ಟೆಂಡರಗಳನ್ನು ತೆರೆಯುವ ದಿನಾಂಕ:20/01/2023 ರಂದು ಮಧ್ಯಾಹ್ನ 11.00 ನಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಕುರಿತು ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್ https:// www.eproc.karnataka.gov.in ಲಾಗಿನ್ ಆಗಿ, ಕಛೇರಿ ವೆಬ್‌ಸೈಟ್ www.exambatown.mrc.gov.in ನಲ್ಲಿ ಅಥವಾ ಪಟ್ಟಣ ಪಂಚಾಯತ ಕಾರ್ಯಾಲಯವನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಯಕ್ಸಂಬಾ
ಸಹಿ/– ತಹಸೀಲ್ದಾರ/ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ಯಕ್ಸಂಬಾ
DIPR/BGM/RO-NO-1519/MCA/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ, ಗದಗ
ಕಾ.ಇಂ/ಗ್ರಾ.ಕು.ನೀ.ಸ.ನೈ.ವಿ/ಗದಗ/ಕ.ಇಂ/ಟೆಂಡರ್/2022-23/1105ದಿನಾಂಕ:09.01.2023

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅಥವಾ ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ... Indent no RWSSD/2022-23/OW/WORK_INDENT 51634 ... ರೂ. 541.94 ಲಕ್ಷ ... ರೂ. 5.42 ಲಕ್ಷ ... https://eproc.karnataka.gov.in ... ದಿನಾಂಕ : 09.01.2023 ... ದಿನಾಂಕ : 11.01.2023 ... ದಿನಾಂಕ : 12.01.2023 ... 23.01.2023 ... 24.01.2023 ... 30.01.2023

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಗದಗ
ವಾಅಸಂ/ಗದಗ/ಎಂ.ಸಿ.ಎ/569/2022–23

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ. 5, 2ನೇ ಮಹಡಿ, ಬಿಎಂಐಸಿಪಿಎ ಕಟ್ಟಡ, ... ಬೆಂಗಳೂರು – 560009.
ದೂರವಾಣಿ: 080–22341230/35 ಇ–ಮೇಲ್: bmicapa@gmail.com
ಸಂಖ್ಯೆ:ಬಿಎಂಐಸಿಪಿಎ/ಭೂಬಳಕೆ–01/46/2022–23/1626 ದಿನಾಂಕ: 09–01–2023

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ)ರ ಪ್ರಕಾರ) ... ಸರ್ವೆ ನಂ: 131/6 ರ ... ಕಲಂ 14(ಎ) ರಡಿಯಲ್ಲಿ "ವಸತಿ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ...

1) ಈ ಜಮೀನಿನಲ್ಲಿ ಭೂ ಉಪಯೋಗ ಬದಲಾವಣೆ ನಂತರ ಮಾಡುವ ಬದಲಾವಣೆ ...
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳನ್ನು ...
3) ಭೂ ಉಪಯೋಗ ಬದಲಾವಣೆ ನಂತರ ವಿನ್ಯಾಸ ನಕ್ಷೆಯಂತೆ ...
4) ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ನಾಗರಿಕ ಸೌಲಭ್ಯಗಳ ...

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ... ಈ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 16 ದಿವಸಗಳೊಳಗಾಗಿ ... ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಪಿ.ಎ., ಬೆಂಗಳೂರು ...

ಸಹಿ/– ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಪಿ.ಎ., ಬೆಂಗಳೂರು.
ವಾಅಸಂ/ಬೆಂ.ಪ್ರ/3981/ಆಶ್ರೀಬೀ/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.
ಸಂ:ಕಾ.ಇಂ/ಕನೀನಿನಿ/ಬಿಡಿಐಎನ್–4/ಪಿ.ಬಿ 5/ಟೆಂಡರ್/22–23 ದಿ: 07.01.2023

ಪ್ರಕಟಣೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವ ಬ್ಯಾಂಕ್ ನೆರವಿನ DRIP-II ಯೋಜನೆಯಡಿ ... Installation, Testing & Commissioning of Security Management System based on CCTV Works & Providing Security Equipements to Bhadra Dam & Dam top I.B ಕುರಿತಂತೆ ...

1. ಕೊಟೇಷನ್ ಫಾರಂ ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಹಾಗೂ ಕೊನೆಯ ದಿನಾಂಕ: 07.01.2023 ರಿಂದ 16.01.2023 ರಂದು ಸಂಜೆ 4.00 ಗಂಟೆಯೊಳಗೆ ... 2. ಸ್ವೀಕೃತಿಗೊಂಡ ಕೊಟೇಷನ್‌ಗಳನ್ನು ದಿನಾಂಕ: 16.01.2023 ರಂದು ಸಂಜೆ 5.00 ಘಂಟೆಗೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಹಾಗೂ ಷರತ್ತುಗಳ ಕುರಿತು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಹಾಗೂ ಈ ಕಛೇರಿಯ ಪ್ರಕಟಣೆ ಫಲಕಕ್ಕೆ ಪ್ರಕಟಣೆಯನ್ನು ಹಾಕಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿ.ಆರ್.ಎಲ್.ಬಿ.ಸಿ, ವಿಭಾಗ, ಭದ್ರಾವತಿ
ವಾ.ಅ.ಸ/ಪ್ರ/ಶಿಮೊ/3/68/01/22-23/1642

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ. 3 ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.
ಫೋನ್/ಫ್ಯಾಕ್ಸ್:08192-200255 Email:eeknnlmbr@gmail.com
ಸಂ:ಕಾಇಂ/ಕನೀನಿನಿ/ಭನಾವಿ–3/ಮಬೆ/ಇ–1/ಟೆಂಡರ್ ಪ್ರಕಟಣೆ–4/2022–23/ 1354 ದಿನಾಂಕ: 05.01.2023

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
[ಇ–ಪ್ರೊಕ್ಯೂರ್‌ಮೆಂಟ್ ಮೂಲಕ]

ವ್ಯವಸ್ಥಾಪಕ ನಿರ್ದೇಶಕರು, ... ಕಾಮಗಾರಿಯ ಹೆಸರು ಮತ್ತು ಪಿ.ಡಬ್ಲ್ಯೂ ಶೀರ್ಷಿಕೆ: (1) ಲೆಕ್ಕಶೀರ್ಷಿಕೆ:–4701 ಭದ್ರಾ ರಡಿ Indent No. 35245, 35251 & 35252 ... ಅಂದಾಜು ಮೊತ್ತ ರೂ. 79.88 ಲಕ್ಷದಿಂದ 149.43 ಲಕ್ಷಗಳವರೆಗೆ ... KPWD Class-II & above ... www.eproc.karnataka.gov.in ... ದಿನಾಂಕ: 09.01.2023 ರಿಂದ 16.01.2023 ರ ಸಂಜೆ 4.00ವರೆಗೆ ... ದಿನಾಂಕ :12.01.2023 ... ದಿನಾಂಕ:16.01.2023ರ 4–00 ... ದಿನಾಂಕ: 17.01.2023ರ ಸಂಜೆ 4.01 ಗಂಟೆಗೆ ... ದೂರವಾಣಿ ಸಂಖ್ಯೆ 08192–200255 ...

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.3, ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.
ವಾಅಸಂ/ದಾ/791/ಎಂಸಿಎ/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ ಕಛೇರಿ (ರಾಜರಾಜೇಶ್ವರಿನಗರ ವಲಯ), 340/ಎ, 5ನೇ ಮೈನ್, ... ಬೆಂಗಳೂರು–91
ಸಂ: ಬಿಬಿಎಂಪಿ/ಹಿಸನಿತೋ/ರಾರಾನ/ಟೆಂಡರ್/ಪಿಆರ್/216/2022–23 ದಿನಾಂಕ: 09.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ಜೆಪಿ ಪಾರ್ಕ್, ವಾರ್ಡ್ ನಂ. 17ರಲ್ಲಿ ಜೆಪಿ ಪಾರ್ಕ್ ಲೇಕ್ ಸುತ್ತ ಭೂ ವಿನ್ಯಾಸ ಅಭಿವೃದ್ಧಿ	75.00	1,12,500/–

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ... 10.01.2023 ... (2) ಟೆಂಡರ್ ... 18.01.2023ರ ಸಂಜೆ 4:00 ಗಂಟೆಗೆ ... (3) ... https://eproc.karnataka.gov.in ... 20.01.2023ರ ಸಂಜೆ 4:30 ಗಂಟೆಗೆ ... (4) ... 26.01.2023ರಂದು ... https://eproc.karnataka.gov.in ...

ಸಹಿ/– ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ರಾಜರಾಜೇಶ್ವರಿನಗರ ವಲಯ), ಬಿಬಿಎಂಪಿ

ಸಂಕ್ಷಿಪ್ತ ಸುದ್ದಿ

ಮರಾಠಿ ಭಾಷೆ ಉಳಿಸಲು ನೆರವು

ಬೆಳಗಾವಿ: ಮಹಾರಾಷ್ಟ್ರದ ಶಿಕ್ಷಣ ಸಚಿವ ದೀಪಕ್ ಕೇಸರಕರ್ ಮಹಾರಾಷ್ಟ್ರ ಏಕೀಕರಣ ಸಮಿತಿ-(ಎಂಇಎಸ್) ಮುಖಂಡರೊಂದಿಗೆ ಸೋಮವಾರ ಸಭೆ ನಡೆಸಿ, 'ಗಡಿಭಾಗದಲ್ಲಿ ಮರಾಠಿ ಭಾಷೆ, ಸಂಸ್ಕೃತಿ ಉಳಿಸಲು ಮಹಾರಾಷ್ಟ್ರ ಸರ್ಕಾರದಿಂದ ಅಗತ್ಯ ನೆರವು ಕೊಡುತ್ತೇವೆ' ಎಂದು ಭರವಸೆ ನೀಡಿದ್ದಾರೆ.

ನಗರದಲ್ಲಿ ನಡೆದ ಖಾಸಗಿ ಕಾರ್ಯಕ್ರಮವೊಂದರಲ್ಲಿ ಅವರು ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಎಂಇಎಸ್ ನಾಯಕರೊಂದಿಗೆ ಚರ್ಚಿಸಿದರು.

'ಮರಾಠಿ ಭಾಷೆ, ಸಂಸ್ಕೃತಿ ಉಳಿಸಲು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮರಾಠಿ ನಾಟಕಗಳನ್ನು ಪ್ರದರ್ಶಿಸಲಾಗುವುದು. ಕರ್ನಾಟಕದಲ್ಲಿರುವ ಮರಾಠಿ ಶಿಕ್ಷಣ ಸಂಸ್ಥೆಗಳು, ಗ್ರಂಥಾಲಯಗಳು ಹಾಗೂ ಇತರ ಸಂಘ–ಸಂಸ್ಥೆಗಳಿಗೆ ಮಹಾರಾಷ್ಟ್ರ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ' ಎಂದು ಹೇಳಿದರು. ಎಂಇಎಸ್ ಕಾರ್ಯಾಧ್ಯಕ್ಷ ಮನೋಹರ ಕಿಣೇಕರ್, ಪ್ರಧಾನ ಕಾರ್ಯದರ್ಶಿ ಮಾಲೋಜಿ ಅಷ್ಟೇಕರ್, ಸುನೀಲ ಅಷ್ಟೇಕರ್, ವಿಕಾಸ ಕಲಘಟಗಿ, ಎಂ.ಜಿ.ಪಾಟೀಲ ಇದ್ದರು.

ಕುಕ್ಕೆ: ಮಾ.12ಕ್ಕೆ 'ಸಪ್ತಪದಿ'

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಾರ್ಚ್ 12ರಂದು 'ಸಪ್ತಪದಿ' ಸರಳ ಸಾಮೂಹಿಕ ವಿವಾಹ ಆಯೋಜಿಸಲಾಗಿದ್ದು, ಅಂದು ವಿವಾಹವಾಗಲು ಬಯಸುವವರು ದೇವಳದ ಕಚೇರಿಯಿಂದ ಅರ್ಜಿ ಪ್ರತಿ ಪಡೆದು, ಫೆ.15ರೊಳಗೆ ಭರ್ತಿ ಮಾಡಿ ಸಲ್ಲಿಸುವಂತೆ ದೇವಳದ ಪ್ರಕಟಣೆ ತಿಳಿಸಿದೆ.

ವಧು-ವರರು ತಮ್ಮ ಪೂರ್ಣ ವಿಳಾಸದೊಂದಿಗೆ ಜನನ ದಿನಾಂಕ ದೃಢೀಕರಿಸುವ ದಾಖಲೆ, ಪಾಸ್‌ಪೋರ್ಟ್ ಅಳತೆಯ 2 ಫೋಟೊ, ಆಧಾರ್ ಕಾರ್ಡ್ ಪ್ರತಿ, ರೇಷನ್ ಕಾರ್ಡ್ ಪ್ರತಿ, ವಧು-ವರರ ಬ್ಯಾಂಕ್ ಖಾತೆಯ ವಿವರ ಮತ್ತು ಅವಿವಾಹಿತರು ಎಂಬುದಾಗಿ ಗ್ರಾಮ ಪಂಚಾಯಿತಿಯಿಂದ ಅಥವಾ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಯಿಂದ ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

ಫೆ.20ರಂದು ನೋಂದಾಯಿತ ವಧು-ವರರ ವಿವರಗಳನ್ನು ದೇವಳದಲ್ಲಿ ಪ್ರಕಟಿಸಲಾಗುವುದು. ಫೆ.28 ಆಕ್ಷೇಪಣೆ ಸಲ್ಲಿಸಲು ಕೊನೆ ದಿನಾಂಕವಾದರೆ, ಮಾರ್ಚ್ 3ರಂದು ವಧು–ವರರ ಅಂತಿಮ ಪಟ್ಟಿ ಪ್ರಕಟಿಸಲಾಗುವುದು. ಮಾರ್ಚ್ 12ರಂದು ಬೆಳಿಗ್ಗೆ 11.30ರಿಂದ 12.00ರ ವೃಷಭ ಲಗ್ನ ಮುಹೂರ್ತದಲ್ಲಿ ವಿವಾಹ ನೆರವೇರಲಿವೆ.

ಮಾಹಿತಿಗೆ 08257-281224, 236200, 281700, 281265 ಸಂಪರ್ಕಿಸಬಹುದು.

ಮಕ್ಕಳಿಗೆ ಸಾತ್ವಿಕ ಆಹಾರ

ಒಂದನೇ ಪುಟದಿಂದ

'ಶಿಕ್ಷಕರ ಮತ್ತು ತಂದೆ-ತಾಯಿ, ಸಮಾಜದ ಉತ್ತಮ ನಡವಳಿಕೆಗಳಿಂದ ಮಕ್ಕಳಲ್ಲಿ ಬದಲಾವಣೆ ಸಾಧ್ಯವಾಗುತ್ತದೆ. ಪಂಚತಂತ್ರದ ಕಥೆಗಳ ಮೂಲಕ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿತ್ತು. ಮತ್ತೆ ಅದು ಆರಂಭವಾಗಬೇಕು. ನಾಟಕಗಳ ಮೂಲಕ ನಡೆ–ನುಡಿಗಳನ್ನು ಕಲಿಸಬೇಕು. ಟಿವಿಯಲ್ಲಿ ಹಿಂಸೆಯ ವೈಭವ ಕಡಿಮೆ ಮಾಡಬೇಕು' ಎಂದು ಸಲಹೆ ನೀಡಿದರು.

ಅದಮ್ಯ ಚೇತನ ಪ್ರತಿಷ್ಠಾನದ ತೇಜಸ್ವಿನಿ ಅನಂತ ಕುಮಾರ್ ಮಾತನಾಡಿ, 'ಮಕ್ಕಳಿಗೆ ಸಾತ್ವಿಕ ಆಹಾರ ನೀಡುವುದು ಮುಖ್ಯ. ಮೊಟ್ಟೆ ಸೇವಿಸುವ ಬಗ್ಗೆ ನಾನು ವೈಯಕ್ತಿಕವಾಗಿ ವಿರೋಧಿಸಿದ್ದೆ. ಈಗ ಹಲವು ಮಠಾಧೀಶರು ಸಹ ಸಾತ್ವಿಕ ಆಹಾರವನ್ನು ಪ್ರತಿಪಾದಿಸಿದ್ದಾರೆ. ಮಕ್ಕಳಲ್ಲಿ ಪೌಷ್ಟಿಕಾಂಶಗಳ ಪ್ರಮಾಣ ಕಡಿಮೆ ಇರುವುದು ನಿಜ. ಆದರೆ, ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಶಾಲೆಗಳನ್ನೇ ಆಯ್ಕೆ ಮಾಡಿಕೊಳ್ಳುವುದು ಸೂಕ್ತವಲ್ಲ' ಎಂದು ಪ್ರತಿಪಾದಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಮಠಾಧೀಶರು, ಪಾದ್ರಿಗಳು, ಮುಸ್ಲಿಂ ಮುಖಂಡರು ಮತ್ತು ಶಿಕ್ಷಣ ತಜ್ಞರು, ಶಿಕ್ಷಕರ ವ್ಯಕ್ತಿತ್ವದ ಬಗ್ಗೆ ಪರಾಮರ್ಶಿಸಿದರು. 'ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ನೈತಿಕ ಮೌಲ್ಯಗಳನ್ನು ಬೋಧಿಸುವ ತುರ್ತು ಅಗತ್ಯವಿದೆ ಎಂದು ಒಕ್ಕೊರಲಿನಿಂದ ಪ್ರತಿಪಾದಿಸಿದ ಅವರು, ಮೊದಲು ಶಿಕ್ಷಕರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ' ಎಂದರು.

'ಪ್ರಸ್ತುತ ಜೀವನದ ಮೌಲ್ಯಗಳು ಕುಸಿಯುತ್ತಿರುವುದು ಕಳವಳಕಾರಿ ಸಂಗತಿ. ಶಿಕ್ಷಣದ ಮೂಲಕವೇ ಬದುಕಿನ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಕಲಿಸಬೇಕು ಹಾಗೂ ಮಕ್ಕಳಲ್ಲಿ ಭಾರತೀಯ ಸಂಸ್ಕೃತಿ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು' ಎಂದು ಸಲಹೆ ನೀಡಿದರು.

ಶಿಕ್ಷಣ ಕ್ಷೇತ್ರದಿಂದಲೇ ನೈತಿಕ ಮೌಲ್ಯ ಅಳವಡಿಸುವ ಕಾರ್ಯ ಆರಂಭ ಆಗಬೇಕು. ಸಮಾಜದಲ್ಲಿ ಪರಿವರ್ತನೆ ತರುವಲ್ಲಿ ಮಾಧ್ಯಮಗಳಿಗೂ ದೊಡ್ಡ ಜವಾಬ್ದಾರಿ ಇದೆ ಎನ್ನುವುದನ್ನು ಅರಿತುಕೊಳ್ಳಬೇಕು
ವಿಶ್ವೇಶ್ವರ ಹೆಗಡೆ ಕಾಗೇರಿ
ವಿಧಾನಸಭಾ ಅಧ್ಯಕ್ಷ

'ಮೌಲ್ಯಯುತ ಶಿಕ್ಷಣ ಅನುಷ್ಠಾನಕ್ಕೆ ಸಮಿತಿ'

'ಪಠ್ಯದಲ್ಲಿ ಮೌಲ್ಯಯುತ ಶಿಕ್ಷಣ ಅನುಷ್ಠಾನಕ್ಕೆ ಸಮಿತಿ ರಚಿಸಲಾಗುವುದು. ಮುಂದಿನ ಶೈಕ್ಷಣಿಕ ವರ್ಷದಿಂದಲೇ ನೈತಿಕ ಮೌಲ್ಯಗಳ ಶಿಕ್ಷಣವನ್ನು ಜಾರಿಗೊಳಿಸಲಾಗುವುದು' ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಸಾತ್ವಿಕ ಆಹಾರದ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, 'ಆಹಾರ ಸೇವಿಸುವ ಬಗ್ಗೆ ಹಲವರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಾತ್ವಿಕ ಆಹಾರ ಮಾತ್ರ ನೀಡುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವ ಇಲ್ಲ. ಆದರೆ, ಮಗುವಿನ ಬೆಳವಣಿಗೆ ಮತ್ತು ನಡವಳಿಕೆಗಳ ಮೇಲೆ ಪರಿಣಾಮ ಬೀರುವ ಆಹಾರದ ಬಗ್ಗೆಯೂ ಯೋಚಿಸುತ್ತೇವೆ' ಎಂದರು.

'ಕೆಲವು ದೇಶಗಳು ಹಾಲು ಸೇವಿಸುವುದನ್ನು ಸಹ ಕಡಿಮೆ ಮಾಡಬೇಕು ಎಂದು ಸಲಹೆ ನೀಡುತ್ತಿವೆ' ಎಂದರು.

ನೈತಿಕ ಶಿಕ್ಷಣ ಬೋಧಿಸುವಲ್ಲಿ ಶಿಕ್ಷಕರ ಪಾತ್ರ ಬಹು ಮುಖ್ಯ. ಆದರೆ, ಮೊದಲು ಶಿಕ್ಷಕರು ಸಹ ಸರಿಯಾಗಬೇಕು ಎನ್ನುವ ಅಭಿಪ್ರಾಯಗಳು ದುಂಡು ಮೇಜಿನ ಸಭೆಯಲ್ಲಿ ವ್ಯಕ್ತವಾದವು.

'ನೀತಿ ಬೋಧಿಸುವವರು ಮೊದಲು ಆಚರಿಸಲಿ'



'ನೀತಿ ಬೋಧಿಸುವವರು ಮೊದಲು ಆಚರಿಸಬೇಕು. ಶಿಕ್ಷಕರು ಮತ್ತು ಪೋಷಕರಿಗೆ ನೈತಿಕತೆ ಬಗ್ಗೆ ಕಲಿಸಬೇಕಾದ ಪರಿಸ್ಥಿತಿ ಇಂದು ಸೃಷ್ಟಿಯಾಗಿದೆ. ನೈತಿಕತೆಯ ಕಥೆಗಳನ್ನು ಹೇಳುವ ಮೂಲಕ ಮಕ್ಕಳಲ್ಲಿ ಬದಲಾವಣೆ ತರಬಹುದು. ಮುಖ್ಯವಾಗಿ ಮಕ್ಕಳನ್ನು ಮೊಬೈಲ್ ಜಗತ್ತಿನಿಂದ ಹೊರತರಬೇಕಾಗಿದೆ

ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠ

'ಹೀರೊಯಿಸಂ ಹಿಂಸೆಯ ಪ್ರತಿರೂಪವಾಗಬಾರದು'



'ಅಮೆರಿಕದಲ್ಲಿ ಒಂದು ವರ್ಷದಲ್ಲಿ 600 ಗುಂಡಿನ ದಾಳಿಯ ಪ್ರಕರಣಗಳು ನಡೆದಿವೆ. ಹೀಗಾಗಿ, ಜಗತ್ತಿನಾದ್ಯಂತ ನೈತಿಕ ಶಿಕ್ಷಣ ಅಗತ್ಯವಿದೆ. ಮಕ್ಕಳನ್ನು ಮಾಹಿತಿಯ ಬೂತ್‌ಗಳನ್ನಾಗಿ ಮಾಡಬಾರದು. ಹಿರೋಯಿಸಂ ಎನ್ನುವುದು ಹಿಂಸೆಯ ಪ್ರತಿರೂಪವಾಗಬಾರದು.

ರವಿಶಂಕರ್ ಗುರೂಜಿ, ಆರ್ಟ್ ಆಫ್ ಲಿವಿಂಗ್

'ಶಿಕ್ಷಕರನ್ನು ಸರಿಪಡಿಸಿದರೆ ಎಲ್ಲವೂ ಸರಿಯಾಗುತ್ತದೆ'

ಶಿಕ್ಷಣದಲ್ಲಿ ಪರಿವರ್ತನೆಯಾಗದೆ ಜಗತ್ತಿಗೆ ಸುಖವಿಲ್ಲ. ವಿದ್ಯಾರ್ಥಿಗಳಿಗೆ ಇಂದು ವ್ಯವಹಾರಿಕ ಮತ್ತು ಔದ್ಯೋಗಿಕ ಶಿಕ್ಷಣ ಮಾತ್ರ ನೀಡಲಾಗುತ್ತಿದೆ. ಆದರೆ, ಅಧ್ಯಾತ್ಮಿಕ ಶಿಕ್ಷಣ ಶೂನ್ಯ. ನೈತಿಕ ಶಿಕ್ಷಣ ನೀಡುವ ಶಿಕ್ಷಕರಿಗೆ ಮೊದಲು ಮೌಲ್ಯಗಳನ್ನು ಬೋಧಿಸಬೇಕಾಗಿದೆ. ಶಿಕ್ಷಕರನ್ನು ಸರಿಪಡಿಸಿದರೆ ಎಲ್ಲವೂ ಸರಿಯಾಗುತ್ತದೆ.



ಶಿಕ್ಷಕರ ಜತೆಗೆ ರಾಜಕೀಯ ಧುರೀಣರಿಗೂ ನೈತಿಕ ಶಿಕ್ಷಣ ಬೋಧಿಸಬೇಕಾಗಿದೆ. ರಾಜಕಾರಣಿಗಳು ವೈಯಕ್ತಿಕ ನಿಂದನೆಯಲ್ಲಿ ತೊಡಗುವುದನ್ನು ತಡೆಯಲು ಹೊಸ ಕಾಯ್ದೆ ರೂಪಿಸಿ ಮೂಗುದಾರ ಹಾಕಬೇಕು.

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ತರಳಬಾಳು ಮಠ, ಸಿರಿಗೆರೆ

'ನೈತಿಕ ಶಿಕ್ಷಣ ಮುಖ್ಯ'

'ನೈತಿಕ ಶಿಕ್ಷಣವನ್ನು ಚಟುವಟಿಕೆ ಆಧಾರಿತ ಕಲಿಕೆಯಾಗಬೇಕು. ಆದರೆ, ಮೌಲ್ಯಗಳು ಸಾರ್ವತ್ರಿಕವಾಗಿರಬೇಕೇ ಹೊರತು ಬಣ್ಣ ಹಚ್ಚುವ ಪ್ರಯತ್ನ ಮಾಡಬಾರದು. ಪ್ರೀತಿ, ಸೌಹಾರ್ದ ಮೂಡಿಸುವ ಶಿಕ್ಷಣ ಇಂದಿನ ತುರ್ತು ಅಗತ್ಯವಿದೆ. ನೈತಿಕ ಶಿಕ್ಷಣ ಎನ್ನುವುದು ಅಕಾಡೆಮಿಕ್ ಸಹ ಆಗಿರಬೇಕು'

ಅಬ್ದುಲ್ ರಹೀಂ

'ಸರ್ಕಾರಿ ಶಾಲೆಗಳು ಅಭಿವೃದ್ಧಿಯಾಗಲಿ'



ಶೇ 70ರಷ್ಟು ವಿದ್ಯಾರ್ಥಿಗಳು ಖಾಸಗಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಇದರಿಂದ, ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ಹಿಂಜರಿಕೆ ಮನೋಭಾವ ಬೆಳೆಯುತ್ತಿದೆ. ಇದನ್ನು ದೂರ ಮಾಡುವ ಪ್ರಯತ್ನಗಳು ನಡೆಯಬೇಕು. ನೀತಿ ಬೋಧಿಸುವವರು ಮೊದಲು ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. 10 ವರ್ಷಗಳಿಗೊಮ್ಮೆ ಶಿಕ್ಷಣ ಪದ್ಧತಿ ಬದಲಾಗಬೇಕು.

ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠ

'ಶಿಕ್ಷಕರು ಪರೀಕ್ಷೆಗೆ ಒಳಗಾಗಲಿ'



'ಜೀವನೋಪಾಯಕ್ಕೆ ಶಿಕ್ಷಣ ಸೀಮಿತವಾಗಬಾರದು. ಈಗ ಪಿಯುಸಿ ನಂತರವೇ ಕಲಿಯಬೇಕಾದ ಆಯುರ್ವೇದದಂತಹ ಶಿಕ್ಷಣವನ್ನು ಪ್ರಾಥಮಿಕ ಹಂತದಿಂದಲೇ ಬೋಧಿಸಬೇಕು. ಆಗ ಮಕ್ಕಳಲ್ಲಿಯೂ ಆರೋಗ್ಯದ ಬಗ್ಗೆ ಕಾಳಜಿ ಮೂಡುತ್ತದೆ. ಶಿಕ್ಷಕರು ಆದರ್ಶರಾಗಿದ್ದರೆ ಅವರನ್ನು ಮಕ್ಕಳು ಅನುಸರಿಸುತ್ತಾರೆ. ಹೀಗಾಗಿ, ಶಿಕ್ಷಕರಿಗೂ ನಿಯಮಿತವಾಗಿ ಪರೀಕ್ಷೆಗಳನ್ನು ಮಾಡಬೇಕು.

ರಾಘವೇಶ್ವರ ಭಾರತೀ ಸ್ವಾಮೀಜಿ, ರಾಮಚಂದ್ರಾಪುರ ಮಠ

'ಶಿಕ್ಷಕರು ಮೊದಲು ಬದಲಾಗಲಿ'

'ಮಕ್ಕಳ ಮನಸ್ಸು ಬದಲಾಯಿಸಬೇಕಾದರೆ ಶಿಕ್ಷಕರು ಮೊದಲು ಬದಲಾಗಬೇಕು. ಸೇನೆಯ ಕ್ಯಾಪ್ಟನ್‌ಗಳಿಗೆ ನೀಡುವ ತರಬೇತಿ ರೀತಿಯಲ್ಲಿ ಶಿಕ್ಷಕರಿಗೂ ಸಹ ಮೌಲ್ಯಾಧಾರಿತ ಅಂಶಗಳ ಬಗ್ಗೆ ತರಬೇತಿ ನೀಡಬೇಕು'

–ಮುಕ್ತಿದಾನಂದಜೀ ಮಹಾರಾಜ್, ರಾಮಕೃಷ್ಣಾಶ್ರಮ

'ಏಕರೂಪದ ಶಿಕ್ಷಣ ಜಾರಿಯಾಗಲಿ'



'ಪ್ರಸ್ತುತ ಪರಿಸ್ಥಿತಿಯಲ್ಲಿ ನನಗೆ ಎಂಎಲ್‌ಎ ಎಂದು ಹೇಳಿಕೊಳ್ಳಲು ನಾಚಿಕೆಯಾಗುತ್ತಿದೆ. ಈಗ ಶಿಕ್ಷಣ ಮತ್ತು ನಾಗರಿಕತೆ ಅಭಿವೃದ್ಧಿಯಾಗಿದ್ದರೂ ಮೌಲ್ಯಗಳು ಕುಸಿದಿವೆ. ನೈತಿಕತೆಯನ್ನು ಮಕ್ಕಳಿಂದಲೇ ನಿರೀಕ್ಷಿಸುವುದು ತಪ್ಪು. ಅದು ಮೊದಲು ದೊಡ್ಡವರಿಂದಲೇ ಆರಂಭವಾಗಬೇಕು. ಜತೆಗೆ, ಏಕರೂಪದ ಶಿಕ್ಷಣ ವ್ಯವಸ್ಥೆ ಜಾರಿಯಾಗಬೇಕು

ಎ.ಟಿ. ರಾಮಸ್ವಾಮಿ, ಶಾಸಕ, ಜೆಡಿಎಸ್

ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿ ಗೌರವ, ವಾರ್ಷಿಕ ಪ್ರಶಸ್ತಿ ಪ್ರದಾನ

'ಆಧುನಿಕತೆಯಿಂದ ದೇಶೀಯ ಸೊಗಡು ನಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಕೀಯವಾದ ಆಧುನಿಕತೆ ಭರಾಟೆಗೆ ಸಿಲುಕಿ, ದೇಶೀಯ ಸೊಗಡು ನಿಧಾನವಾಗಿ ಕಣ್ಮರೆಯಾಗುತ್ತಿದೆ' ಎಂದು ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಸೋಮವಾರ ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿ ಆಯೋಜಿಸಿದ್ದ 2022ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಗ್ರಾಮೀಣ ಬುಡಕಟ್ಟು ಸಂಸ್ಕೃತಿಯ ಬದುಕಿಗೆ ದೇಶಿ ಎನ್ನುತ್ತೇವೆ. ಆಧುನಿಕತೆ ಪರಕೀಯವಾದದ್ದು. ದೇಶೀಯತೆ ಹೃದಯ ಇದ್ದಂತೆ. ಇದು ಪರಿಶುದ್ಧವಾದದ್ದು, ಆದರೆ, ನಾವಿಂದು ಪರಕೀಯತೆಗೆ ಸಿಲುಕಿ ನಲುಗುತ್ತಿದ್ದೇವೆ' ಎಂದರು. 'ಲಂಬಾಣಿ ಸಮುದಾಯಕ್ಕೆ ವಿಶಿಷ್ಟ ಪರಂಪರೆ ಇದೆ. ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲೂ ಈ ಜನಾಂಗವು ಮುಂದಿದೆ. ಸರಳ ಜೀವನ ನಡೆಸುತ್ತಿದ್ದಾರೆ. ನಗರ ವಾಸಿಗಳಂತೆ ವಿಲಾಸಿ ಜೀವನದ ಆಸೆ ಈ ಸಮುದಾಯಕ್ಕೆ ಇಲ್ಲ. ಇರೋ ಸೌಲಭ್ಯದಲ್ಲಿಯೇ ಲಂಬಾಣಿಗರು ತೃಪ್ತಿ ಕಾಣುತ್ತಿದ್ದಾರೆ. ಆದರೆ, ಶಿಕ್ಷಣ, ಉದ್ಯೋಗದಿಂದ ಈ ಸಮುದಾಯವು ವಂಚಿತವಾಗುತ್ತಿದೆ' ಎಂದು ಹೇಳಿದರು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರಿಗೆ 2022ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು – ಪ್ರಜಾವಾಣಿ ಚಿತ್ರ

'ದೇಶದ ಭೌತಿಕ ಬೆಳವಣಿಗೆಯ ಹಿಂದೆ ಲಂಬಾಣಿ ಸಮುದಾಯದ ಬೆವರಿದೆ. ಅದನ್ನು ಮರೆಯುವಂತಿಲ್ಲ. ಬುಡಕಟ್ಟು ಸಮುದಾಯಕ್ಕೆ ಕೇಂದ್ರ, ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ಯೋಜನೆಗಳು ಲಂಬಾಣಿಗರಿಗೂ ಲಭಿಸಬೇಕು' ಎಂದರು.

ಅಕಾಡೆಮಿ ಅಧ್ಯಕ್ಷ ಡಾ.ಹರಿಲಾಲ ಪವಾರ, 'ತುಳು, ಬ್ಯಾರಿ, ಕೊಂಕಣಿ ಅಕಾಡೆಮಿ ಜತೆಗೇ ಲಂಬಾಣಿ ಅಕಾಡೆಮಿಯೂ ಸ್ಥಾಪನೆ ಆಗಬೇಕಿತ್ತು. ವಿಳಂಬದಿಂದ ಸಮುದಾಯದ ಅಭಿವೃದ್ಧಿಗೆ ಹಿನ್ನಡೆ ಉಂಟಾಗಿದೆ. ಕಳೆದ ವರ್ಷ ಜುಲೈ 15ರಂದು ಅಕಾಡೆಮಿ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂತು. ಈ ಬಾರಿ ಪ್ರಶಸ್ತಿಗೆ ಪ್ರಭಾನ್ವಿತ ಸಾಧಕರನ್ನು ಗುರುತಿಸಲಾಗಿದೆ' ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಕಾರ್ಯದರ್ಶಿ ಬಲವಂತರಾವ್ ಪಾಟೀಲ, ಅಕಾಡೆಮಿ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಹಾಜರಿದ್ದರು.

ಗೈರಿಗೆ ಖಂಡನೆ

ಆಹ್ವಾನ ಪತ್ರಿಕೆಯಲ್ಲಿ ಹೆಸರಿದ್ದರೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್‌ಕುಮಾರ್ ಹಾಗೂ ಶಾಸಕರಾದ ಉದಯ ಬಿ. ಗರುಡಾಚಾರ್, ಪಿ.ರಾಜೀವ ಅವರು ಗೈರಾಗಿದ್ದರು. ಇವರ ನಡೆಯನ್ನು ವೇದಿಕೆಯ ಮೇಲೆಯೇ ಗೊರುಚ ಖಂಡಿಸಿದರು.

'ಜನಪ್ರತಿನಿಧಿಗಳು ಈ ಕಾರ್ಯಕ್ರಮಕ್ಕೆ ಬಂದು ವಿಶಿಷ್ಟ ಪರಂಪರೆಯುಳ್ಳ ಲಂಬಾಣಿ ಸಮುದಾಯದ ಕಲಾವಿದರು ಹಾಗೂ ಸಾಧಕರಿಗೆ ಉತ್ಸಾಹ ತುಂಬಬೇಕಿತ್ತು. ಅವರ ಗೈರು ಬೇಸರ ತರಿಸಿದೆ' ಎಂದರು.

ಸಾಧಕರಿಗೆ ಗೌರವ

ಪ್ರೊ.ಎಂ.ಶಕುಂತಲಾ ಹನುಮಂತಪ್ಪ, ಪ್ರೊ.ಪಿ.ಕೆ. ಖಂಡೋಬಾ, ಬಿ. ಹೀರಾನಾಯಕ್, ಪ್ರೊ.ಡಿ.ಬಿ.ನಾಯಕ್, ಗಂಗಪ್ಪ ಖೇಮಪ್ಪ ಲಮಾಣಿ ಅವರಿಗೆ 2022ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗುಲಾಬ್‌ಸಿಂಗ್ ಮೇಗು ಪತ್ತಾರ (ಕಲೆ), ಕೊಟ್ರೇಶ್ ನಾಯಕ್ (ಹಲಗೆ ವಾದನ), ಸಾರಂಗಿ ಉಮ್ಮಾ ನಾಯಕ್, ಗುಂಡಾಚಂದ್ರಾ ನಾಯಕ್ (ಕಥನ ಗೀತೆ), ಶಾಂತಿಬಾಯಿ ಕಾಶ್ಯಾ ನಾಯಜ್ (ಕಸೂತಿ ಕಲೆ), ಸಾವಿತ್ರಿ ಮಾಂತೇಶ ಲಮಾಣಿ (ಜಾನಪದ ಹಾಡು), ಸೋಪನರಾವ್ ರೂಪ್ಲಾ (ಹೋಲಿ ಹಾಡು), ದೇವಲಪ್ಪ ಟೀಕಪ್ಪ ಲಮಾಣಿ (ಡೋಡೊ ನಂಗಾರಾ ಗೀತೆ), ಮಂಜುನಾಥ ಜಯಚಂದ್ರಗಿರಿ (ಧಾರ್ಮಿಕ ವೃತ್ತಿ ಕಲೆ) ಅವರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕುಸಿದ ತಾಪಮಾನ: ವಿಪರೀತ ಚಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ದಿಢೀರ್ ಆಗಿ ತಾಪಮಾನ ಕುಸಿದಿದ್ದು, ಕೆಲವು ಜಿಲ್ಲೆಗಳಲ್ಲಿ ಮೈಕೊರೆಯುವ ಚಳಿ ಅನುಭವ ಉಂಟಾಗುತ್ತಿದೆ.

'ಮುಂದಿನ 48 ಗಂಟೆಯಲ್ಲಿ ಉತ್ತರ ಒಳನಾಡಿನ ಕೆಲವು ಸ್ಥಳಗಳಲ್ಲಿ ಶೀತಗಾಳಿ ಬೀಸುವ ಸಾಧ್ಯತೆಯಿದೆ. ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವು ಸ್ಥಳಗಳಲ್ಲಿ ಉಷ್ಣಾಂಶ ಸಾಮಾನ್ಯಕ್ಕಿಂತ 5ರಿಂದ 6 ಡಿಗ್ರಿ ಸೆಲ್ಸಿಯಸ್ ಕಡಿಮೆ ಆಗಲಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸೋಮವಾರ ರಾಜಧಾನಿ ಬೆಂಗಳೂರಿನಲ್ಲೂ ತಾಪಮಾನ ಕುಸಿದಿತ್ತು. ಹೊರವಲಯದ ಜನರಿಗೆ ಚಳಿಯ ತೀವ್ರತೆ ಹೆಚ್ಚೇ ಇತ್ತು. ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು, ಕೊಡಗಿನಲ್ಲೂ ತಾಪಮಾನ ಇಳಿಕೆಯಾಗಿದೆ.

ಮಂಗಳವಾರ ಬೆಳಗಾವಿ ಹಾಗೂ ಕಲಬುರಗಿಯಲ್ಲಿ 10, ಚಿತ್ರದುರ್ಗದಲ್ಲಿ 12, ಗದಗ ಜಿಲ್ಲೆಯಲ್ಲಿ ಕನಿಷ್ಠ 11 ಡಿಗ್ರಿ ಸೆ. ಉಷ್ಣಾಂಶ ದಾಖಲಾಗುವ ಸಾಧ್ಯತೆ ಯಿದೆ. ಈ ಜಿಲ್ಲೆಗಳಲ್ಲಿ ಮುಂಜಾನೆ ಹಾಗೂ ರಾತ್ರಿ ಚಳಿ ತೀವ್ರವಾಗಿರಲಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಬೆಂಗಳೂರಿನಲ್ಲಿ ಮಂಗಳವಾರ ಕನಿಷ್ಠ ಉಷ್ಣಾಂಶ 14 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ.

ಬೀದರ್: ಕನಿಷ್ಠ ಉಷ್ಣಾಂಶ

ಬೀದರ್: ಜಿಲ್ಲೆಯಲ್ಲಿ ಹತ್ತು ದಿನಗಳಿಂದ 12 ಡಿಗ್ರಿ ಸೆಲ್ಸಿಯಸ್ ಇದ್ದ ಕನಿಷ್ಠ ಉಷ್ಣಾಂಶ ಭಾನುವಾರ 5.5 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದು, 2015ರ ನಂತರದ ದಾಖಲೆ ಮುರಿಯಿತು.

2022ರಲ್ಲಿ 5.7 ಡಿಗ್ರಿ ಸೆಲ್ಸಿಯಸ್, 2021ರಲ್ಲಿ 8.6 ಡಿಗ್ರಿ ಸೆಲ್ಸಿಯಸ್ ಕನಿಷ್ಠ ಉಷ್ಣಾಂಶ ದಾಖಲಾಗಿತ್ತು. 2015ರ ಜ. 10 ರಂದು ಬೀದರ್‌ನ ಹಳ್ಳದ ಕೇರಿಯಲ್ಲಿ 5.8 ಡಿಗ್ರಿ ಸೆಲ್ಸಿಯಸ್ ಮತ್ತು 2017ರಲ್ಲಿ ಹಲಬರ್ಗಾದಲ್ಲಿ ಕನಿಷ್ಠ ಉಷ್ಣಾಂಶ 7.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

'ಜ. 25ರವರೆಗೂ ಜಿಲ್ಲೆಯಲ್ಲಿ ಕನಿಷ್ಠ ಉಷ್ಣಾಂಶ 12 ರಿಂದ 14 ಡಿಗ್ರಿ ಸೆಲ್ಸಿಯಸ್ ಇರ ಲಿದೆ. ಫೆ. 10ರ ವರೆಗೆ ಚಳಿ ಮುಂದುವರಿಯಲಿದೆ' ಎಂದು ಕೃಷಿ ವಿಜ್ಞಾನ ಕೇಂದ್ರದ ಹವಾಮಾನ ವಿಭಾಗದ ತಾಂತ್ರಿಕ ಅಧಿಕಾರಿ ಬಸವರಾಜ ಬಿರಾದಾರ ತಿಳಿಸಿದ್ದಾರೆ.

ಬಿಡುಗಡೆಯಾಗದ 'ಸಿದ್ದು ನಿಜ ಕನಸುಗಳು' ಕೃತಿ

ಬೆಂಗಳೂರು: ನಗರದ ಪುರಭವನದಲ್ಲಿ ಸೋಮವಾರ ನಡೆಯಬೇಕಿದ್ದ 'ಸಿದ್ದು ನಿಜ ಕನಸುಗಳು' ಕೃತಿ ಬಿಡುಗಡೆಗೆ ಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ಕೊನೆಕ್ಷಣದಲ್ಲಿ ಆಯೋಜಕರು ಕಾರ್ಯಕ್ರಮ ಮುಂದೂಡಿದರು.

ಇದಕ್ಕೂ ಮುನ್ನ ಪುರಭವನದ ಎದುರು ಕಾಂಗ್ರೆಸ್ ಕಾರ್ಯಕರ್ತರು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಮಾನಿಗಳು ಹಾಗೂ ರಾಜ್ಯ ಕುರುಬ ಸಂಘದ ಪದಾಧಿಕಾರಿಗಳು ಕಾರ್ಯಕ್ರಮ ಆಯೋಜಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಧಿಕ್ಕಾರ ಕೂಗಿದರು. ಆಯೋಜಕರ ಪರವಾದ ಗುಂಪು ಕೂಡ ಪ್ರತಿ ಧಿಕ್ಕಾರ ಕೂಗಿತು.

ಬ್ಯಾರಿಕೇಡ್ ದಾಟಿ ಒಳಬರಲು ಪ್ರಯತ್ನಿಸಿದವರನ್ನು ವಶಕ್ಕೆ ಪಡೆದ ಪೊಲೀಸರು ನಂತರ ಬಿಡುಗಡೆ ಮಾಡಿದರು. ಸ್ಥಳಕ್ಕೆ ಬಂದ ಮತ್ತೊಂದು ಗುಂಪು, ನ್ಯಾಯಾಲಯದ ತಡೆಯಾಜ್ಞೆಯ ಪ್ರತಿ ಪ್ರದರ್ಶಿಸಿ, ಬಿಜೆಪಿ ಹಾಗೂ ಆರ್‌ಆರ್‌ಎಸ್ ವಿರುದ್ಧ ಘೋಷಣೆ ಕೂಗಿದರು.

ಕಾಮಾಲೆ ರೋಗದವರಿಗೆ ಎಲ್ಲವೂ ಹಳದಿಯಾಗಿ ಕಾಣಿಸುತ್ತದೆ. ನನ್ನ ತೇಜೋವಧೆ ಮಾಡಲು ಬಿಜೆಪಿ ಇಂಥ ಪುಸ್ತಕಗಳನ್ನು ಹೊರ ತರುತ್ತಿದೆ
ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ

'ಇದು ಚುನಾವಣೆ ವರ್ಷವಾಗಿರುವ ಕಾರಣಕ್ಕೆ ಸಿದ್ದರಾಮಯ್ಯ ಅವರನ್ನು ತೇಜೋವಧೆ ಮಾಡಲು ಈ ತಂತ್ರ ರೂಪಿಸಲಾಗಿತ್ತು. ಅವರ ವ್ಯಕ್ತಿತ್ವಕ್ಕೆ ಚ್ಯುತಿ ತರುವ ಉದ್ದೇಶ ಕೃತಿ ಬಿಡುಗಡೆಯ ಹಿಂದಿತ್ತು. ಸಿದ್ದರಾಮಯ್ಯ ಪುತ್ರ ಯತೀಂದ್ರ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯವು ಫೆ.9ರ ವರೆಗೆ ತಡೆಯಾಜ್ಞೆ ನೀಡಿದೆ' ಎಂದು ಕೆಪಿಸಿಸಿ ಕಾನೂನು ಘಟಕದ ಪ್ರಧಾನ ಕಾರ್ಯದರ್ಶಿ ಸೂರ್ಯ ಮುಕುಂದರಾಜ್ ತಿಳಿಸಿದ್ದಾರೆ.

'ತಡೆಯಾಜ್ಞೆ ತೆರವಿಗೆ ಹೋರಾಟ ನಡೆಯಲಿದೆ' ಎಂದು ರೋಹಿತ್ ಚಕ್ರತೀರ್ಥ ಮಾಧ್ಯಮಗಳಿಗೆ ತಿಳಿಸಿದರು.

ಕೋಲಾರದಿಂದ ಸ್ಪರ್ಧೆ: ಸಿದ್ದರಾಮಯ್ಯ

ಒಂದನೇ ಪುಟದಿಂದ

'ಇಲ್ಲಿನ ಹಾಲಿ ಶಾಸಕ ಕೆ.ಶ್ರೀನಿವಾಸಗೌಡ, ಪಕ್ಷದ ಹಿರಿಯ ಮುಖಂಡ ಕೆ.ಎಚ್.ಮುನಿಯಪ್ಪ, ನನ್ನ ಗೆಳೆಯ ಕೆ.ಆರ್.ರಮೇಶ್ ಕುಮಾರ್, ನಜೀರ್ ಅಹ್ಮದ್, ಕೃಷ್ಣ ಬೈರೇಗೌಡ, ಎಂ.ಎಲ್. ಅನಿಲ್ ಕುಮಾರ್, ವಿ.ಆರ್.ಸುದರ್ಶನ್ ಹಾಗೂ ಇತರ ಮುಖಂಡರು ಕೋಲಾರದಲ್ಲೇ ಸ್ಪರ್ಧಿಸಬೇಕೆಂದು ಆಹ್ವಾನ ನೀಡಿದ್ದಾರೆ' ಎಂದು ಹೇಳಿದರು.

'ವರುಣಾದಿಂದಲೂ ಸ್ಪರ್ಧಿಸುತ್ತೀರಾ ಎಂದು ಪತ್ರಿಕಾಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ಸಿದ್ದರಾಮಯ್ಯ ಗರಂ ಆದರು. 'ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲ್ಲ. ವರುಣಾದ ಜನರೂ ಆಹ್ವಾನಿಸುತ್ತಿದ್ದಾರೆ. ಆದರೆ, ಆ ಕ್ಷೇತ್ರದ ಹಾಲಿ ಶಾಸಕ ಡಾ.ಯತೀಂದ್ರ ಇದ್ದಾರಲ್ಲವೇ' ಎಂದು ಮರು ಪ್ರಶ್ನಿಸಿದರು.

2018ರ ವಿಧಾನಸಭೆ ಚುನಾವಣೆಯಲ್ಲಿ ಸಿದ್ದರಾಮಯ್ಯ ಚಾಮುಂಡೇಶ್ವರಿ ಹಾಗೂ ಬಾದಾಮಿ ಕ್ಷೇತ್ರದಿಂದ ಸ್ಪರ್ಧಿಸಿದ್ದರು.

ಆದರೆ, ಚಾಮುಂಡೇಶ್ವರಿಯಲ್ಲಿ ಸೋಲು ಹಾಗೂ ಬಾದಾಮಿಯಲ್ಲಿ ಗೆಲುವು ಕಂಡಿದ್ದರು.

'ಸ್ಪರ್ಧೆಗೆ ಸ್ವಾಗತ; ನಿಯಮ ಪಾಲಿಸಲಿ'

'ಸಿದ್ದರಾಮಯ್ಯ ಕೋಲಾರದಿಂದ ಸ್ಪರ್ಧಿಸುವುದನ್ನು ಸ್ವಾಗತಿಸುತ್ತೇನೆ. ಅವರ ಪರ ಕೆಲಸವೂ ಮಾಡುತ್ತೇವೆ. ಆದರೆ, ಅಭ್ಯರ್ಥಿ ಆಯ್ಕೆಗೆ ಕಾಂಗ್ರೆಸ್ ಪಕ್ಷದಲ್ಲಿ ನಿಯಮ ಇದೆ. ಕೆಪಿಸಿಸಿ ಅಧ್ಯಕ್ಷರಿರಲಿ, ಶಾಸಕಾಂಗ ಪಕ್ಷದ ನಾಯಕರಿರಲಿ, ಪಕ್ಷದ ನಿಯಮದ ಪ್ರಕಾರವೇ ಅಭ್ಯರ್ಥಿ ಆಯ್ಕೆ ನಡೆಯಬೇಕು' ಎಂದು ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಬಲಿಜ ಸಮುದಾಯ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಲಿಜ ಸಮುದಾಯಕ್ಕೆ ಪ್ರವರ್ಗ 2ಎ ಮೀಸಲಾತಿ ನೀಡಬೇಕು' ಎಂದು ಆಗ್ರಹಿಸಿ ಬಲಿಜ ಸಮುದಾಯದ ಜನರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಮುದಾಯದ ಜನ, ಬಹಿರಂಗ ಸಭೆ ನಡೆಸಿ ಸರ್ಕಾರಕ್ಕೆ ಎಚ್ಚರಿಕೆ ರವಾನಿಸಿದರು. ಕರ್ನಾಟಕ ರಾಜ್ಯ ಬಲಿಜ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಬಲಿಜ ಸಮುದಾಯಕ್ಕೆ ಸೇರಿರುವ 40 ಲಕ್ಷಕ್ಕೂ ಹೆಚ್ಚು ಜನ ರಾಜ್ಯದಲ್ಲಿದ್ದಾರೆ. ಕೃಷಿ, ಕೂಲಿ, ಹೈನುಗಾರಿಕೆ, ಬಳೆ, ಹೂವು ಹಾಗೂ ದ್ರವ್ಯಗಳ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಆರ್ಥಿಕ, ಸಾಮಾಜಿಕವಾಗಿ ಸಾಕಷ್ಟು ಹಿಂದುಳಿದಿದ್ದಾರೆ. ಉದ್ಯೋಗ, ರಾಜಕೀಯ ಸೇರಿ ಎಲ್ಲ ಕ್ಷೇತ್ರಗಳಲ್ಲಿ 2ಎ ಮೀಸಲಾತಿ ನೀಡಬೇಕು' ಎಂದು ಒತ್ತಾಯಿಸಿದರು. 'ಬೇಡಿಕೆ ಈಡೇರಿಸದಿದ್ದರೆ ಜ.16ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದು' ಎಂದರು.

ಬೆಂಗಳೂರಿನಲ್ಲಿ ಬಲಿಜ ಸಮುದಾಯದವರು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಗವಿಸಿದ್ಧೇಶ್ವರ ರಥೋತ್ಸವ ಮುಗಿದ ಬಳಿಕವೂ ಲಕ್ಷಾಂತರ ಮಂದಿ ಮಠಕ್ಕೆ

ದಾಸೋಹಕ್ಕೆ 4 ಲಕ್ಷ ಮಿರ್ಚಿ ಬಜ್ಜಿ!

ಪ್ರಜಾವಾಣಿ ವಾರ್ತೆ

ಕೊಪ್ಪಳ: ಗವಿಸಿದ್ಧೇಶ್ವರ ಮಹಾ ರಥೋತ್ಸವ ಮುಗಿದ ಬಳಿಕವೂ ಸೋಮವಾರ ಮಠಕ್ಕೆ ಭೇಟಿ ನೀಡಿದ ಲಕ್ಷಕ್ಕೂ ಹೆಚ್ಚು ಭಕ್ತರಿಗೆ ದಾಸೋಹದಲ್ಲಿ ನಾಲ್ಕು ಲಕ್ಷ ಮಿರ್ಚಿ ಬಜ್ಜಿ ತಯಾರಿಸಿ ಉಣಬಡಿಸಲಾಯಿತು.

ಮಿರ್ಚಿ ಸೇವಾ ಸಮಿತಿಯು ಪ್ರತಿ ವರ್ಷ ಮಿರ್ಚಿ ಬಜ್ಜಿ ತಯಾರಿಸುತ್ತದೆ. 25 ಕ್ವಿಂಟಲ್ ಕಡಲೆಹಿಟ್ಟು, 190 ಲೀಟರ್ ಸಾಮರ್ಥ್ಯದ 10 ಅಡುಗೆ ಎಣ್ಣೆ ಬ್ಯಾರೆಲ್, 20 ಕ್ವಿಂಟಲ್ ಹಸಿ ಮೆಣಸಿನಕಾಯಿ, 100 ಕೆಜಿ ಉಪ್ಪು ಮತ್ತು 50 ಕೆಜಿ ಅಜವಾನ ಬಳಸಿ ಮಿರ್ಚಿ ಬಜ್ಜಿ ತಯಾರಿಸಲಾಗಿದೆ.

'ಬೆಳಗಿನ ಜಾವ 4 ರಿಂದ ಮಿರ್ಚಿ ಬಜ್ಜಿ ತಯಾರಿಸುವ ಕಾಯಕ ಆರಂಭವಾಯಿತು. ಇದನ್ನು ತಯಾರಿಸುವ ಪ್ರತಿ ತಂಡದಲ್ಲಿ 60 ಬಾಣಸಿಗರು ಇದ್ದು, ಒಟ್ಟಿಗೆ ನಾಲ್ಕು ತಂಡಗಳು ಸೇವೆ ಸಲ್ಲಿಸುತ್ತವೆ. ಒಂದು ಸಲಕ್ಕೆ ಅಂದಾಜು 3 ಸಾವಿರ ಮಿರ್ಚಿ ತಯಾರಾಗುತ್ತವೆ' ಎಂದು ಮಿರ್ಚಿ ಸೇವಾ ಸಮಿತಿ ಸದಸ್ಯ ಸಂತೋಷ ದೇಶಪಾಂಡೆ ಅವರು ತಿಳಿಸಿದರು.



ಕೊಪ್ಪಳದ ಗವಿಸಿದ್ಧೇಶ್ವರ ಮಠದಲ್ಲಿ ತಯಾರಾದ ಮಿರ್ಚಿ ಬಜ್ಜಿ –ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

105 ಕ್ವಿಂಟಲ್ ಅನ್ನ: 'ಮಹಾ ರಥೋತ್ಸವದ ದಿನ ಭಾನುವಾರ ಮಧ್ಯರಾತ್ರಿಯವರೆಗೆ ದಾಸೋಹ ವಿತರಣಾ ಕಾರ್ಯ ನಡೆಯಿತು. 105 ಕ್ವಿಂಟಲ್ ಅನ್ನ, 10 ಕೊಪ್ಪರಿಕೆ ಸಾಂಬಾರು, 8 ಕೊಪ್ಪರಿಕೆ ದಾಲ್, 3 ಲಕ್ಷ ಜೋಳದ ರೊಟ್ಟಿ, ಒಂದೂವರೆ ಲಕ್ಷ ಶೇಂಗಾ ಹೋಳಿಗೆ ಖರ್ಚಾಗಿವೆ' ಎಂದು ದಾಸೋಹ ವಿಭಾಗದ ಉಸ್ತುವಾರಿ ರಾಮನಗೌಡರ ತಿಳಿಸಿದರು.

ಇದೇ 16ಕ್ಕೆ 'ನಾ ನಾಯಕಿ': ಪ್ರಿಯಾಂಕಾ ಭೇಟಿ

ಬೆಂಗಳೂರು: 'ರಾಜ್ಯದ ಮಹಿಳೆಯರ ಸಬಲೀಕರಣ ಉದ್ದೇಶದಿಂದ ಕಾಂಗ್ರೆಸ್ ಪಕ್ಷದ ವತಿಯಿಂದ ಅರಮನೆ ಮೈದಾನದಲ್ಲಿ ಇದೇ 16ರಂದು 'ನಾ ನಾಯಕಿ' ಸಮಾವೇಶ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ಭಾಗವಹಿಸಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಗ್ರಾಮ ಪಂಚಾಯಿತಿ, ಸಹಕಾರ ಸಂಘಗಳಲ್ಲಿ ಸ್ಪರ್ಧಿಸಿದ ಮಹಿಳಾ ನಾಯಕಿಯರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ರಾಜ್ಯದ ಮೂಲೆ ಮೂಲೆಗಳಿಂದ ಪ್ರತಿ ಬೂತ್, ಪಂಚಾಯಿತಿಗಳಿಂದ ಕನಿಷ್ಠ 3ರಿಂದ 10 ಯುವತಿ/ಮಹಿಳೆಯರು ಭಾಗವಹಿಸಬೇಕು' ಎಂದು ಅವರು ಆಹ್ವಾನ ನೀಡಿದರು.

ವಿಧಾನಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ರಾಜ್ಯ ಕಾಂಗ್ರೆಸ್ ನಾಯಕರು ಇದೇ 11ರಿಂದ ಬಸ್ ಯಾತ್ರೆ ಆರಂಭಿಸಲಿದ್ದು, ಅದಕ್ಕೆ ಸಂಬಂಧಿಸಿ ಕಾಂಗ್ರೆಸ್ ಪ್ರವಾಸ ಸಮಿತಿಯ ಸಭೆ ಸೋಮವಾರ ನಡೆಯಿತು.

ಲೇಖಕ ದೇವನೂರ ಮಹಾದೇವ ಕಿಡಿ

'ಹಣ ಪ್ರತಿನಿಧಿ ಸರ್ಕಾರ'

ಪ್ರಜಾವಾಣಿ ವಾರ್ತೆ

ಮೈಸೂರು: 'ಈಗಿರುವುದು ಜನ ಪ್ರತಿನಿಧಿ ಸರ್ಕಾರವಲ್ಲ, ಹಣ ಪ್ರತಿನಿಧಿ ಸರ್ಕಾರ. ಹೀಗಾಗಿ ಜನರ ಮಾತುಗಳನ್ನು ಕೇಳಿಸಿಕೊಳ್ಳುತ್ತಿಲ್ಲ' ಎಂದು ಲೇಖಕ ದೇವನೂರ ಮಹಾದೇವ ಕಿಡಿಕಾರಿದರು.

ಜನಾಂದೋಲನಗಳ ಮಹಾ ಮೈತ್ರಿ ನೇತೃತ್ವದಲ್ಲಿ ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆ ಸಹಕಾರದೊಂದಿಗೆ ಶೋಷಿತರ ಅರಿವಿನ ಗುರು ಕುದ್ಮುಲ್ ರಂಗರಾವ್ ಸ್ಮರಣೆಯಲ್ಲಿ ಮಂಗಳೂರಿನಿಂದ ಬೆಂಗಳೂರಿಗೆ ಹಮ್ಮಿಕೊಂಡಿರುವ 'ಭಾವೈಕ್ಯತಾ ಜಾಥಾ' ನಗರಕ್ಕೆ ಆಗಮಿಸಿದ ವೇಳೆ, ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಬಹಿರಂಗ ಸಭೆಯಲ್ಲಿ ಮಾತನಾಡಿದರು.

'ಸರ್ಕಾರ ನಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಿದೆಯೇ, ಕೇಳಿಸಿಕೊಳ್ಳಲು ಸಾಧ್ಯವಾ? ರೈತರಿಗೆ ಮಾರಕವಾದ ಮೂರು ಕಾಯ್ದೆಗಳ ವಿರುದ್ಧ ದಲಿತ, ರೈತ, ಕಾರ್ಮಿಕ ಸಂಘಟನೆಗಳೆಲ್ಲವೂ ದೊಡ್ಡ ಮಟ್ಟದಲ್ಲಿ ಹೋರಾಟ ನಡೆದರೂ ಸ್ಪಂದಿಸಿಲ್ಲ. ಎಲ್ಲ ಜಿಲ್ಲೆಗಳಲ್ಲೂ ಹೋರಾಟಗಳಾಗಿವೆ. ಇಷ್ಟೆಲ್ಲಾ ನಡೆದರೂ, ಸರ್ಕಾರ ಸ್ಪಂದಿಸಿತೇ ಎನ್ನುವುದನ್ನು ಗಂಭೀರವಾಗಿ ಯೋಚಿಸಬೇಕು' ಎಂದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ನಡೆದ 'ಭಾವೈಕ್ಯತಾ ಜಾಥಾ' ಸಭೆಯಲ್ಲಿ ಸಾಹಿತಿ ದೇವನೂರ ಮಹಾದೇವ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಪಾಲ್ಗೊಂಡಿದ್ದರು. – ಪ್ರಜಾವಾಣಿ ಚಿತ್ರ

'ಗೋಹತ್ಯೆ ನಿಷೇಧಿಸಿದ್ದರೂ ಗೋಮಾಂಸ ರಫ್ತಿನಲ್ಲಿ ಭಾರತ 2ನೇ ಸ್ಥಾನದಲ್ಲಿದೆ. ಸಾಕಲಾಗದ ದನಗಳನ್ನು ಏನು ಮಾಡಬೇಕು? ಕಾಯ್ದೆಗಳು ನೋಡಲು ಚೆಂದ. ಒಳಗೆ ವಿಷವಿದೆ' ಎಂದು ದೂರಿದರು.

'ಮಾರಕವಾದ ಕಾಯ್ದೆಗಳನ್ನು ವಾಪಸ್ ಪಡೆಯದಿದ್ದರೆ ಮತ ಕೊಡುವುದಿಲ್ಲ ಎಂದು ಹಳ್ಳಿ ಹಳ್ಳಿಯಲ್ಲೂ ಪ್ರತಿಜ್ಞೆ ಮಾಡಿ, ಸರ್ಕಾರಕ್ಕೆ 3 ದಿನಗಳ ಗಡುವು ಕೊಡಬೇಕು' ಎಂದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಮುಖಂಡರಾದ ಹೊಸಕೋಟೆ ಬಸವರಾಜು, ಕೆ.ವಿ. ಭಟ್, ರವಿಕಿರಣ್ ಪುಣಚ, ಉಗ್ರನರಸಿಂಹೇಗೌಡ, ಪ್ರಕಾಶಕ ಅಭಿರುಚಿ ಗಣೇಶ್ ಪಾಲ್ಗೊಂಡಿದ್ದರು.

ಟಿ.ವಿ ವಾಹಿನಿಗಳಿಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಸಲಹೆ

‘ಕೆಟ್ಟ ಅಭಿರುಚಿ ಸುದ್ದಿ ಪ್ರಸಾರ ಬೇಡ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕ್ರಿಕೆಟಿಗ ರಿಷಭ್ ಪಂತ್ ಅವರ ಕಾರು ಅಪಘಾತ ಹಾಗೂ ಬೆಂಗಳೂರಿನಲ್ಲಿ ವೃದ್ಧರೊಬ್ಬರು ಮಗನಿಗೆ ಬೆಂಕಿ ಹಚ್ಚಿದ್ದಾರೆ ಎನ್ನಲಾದ ಪ್ರಕರಣದ ಕುರಿತು ಸುದ್ದಿ ವಾಹಿನಿಗಳು ಪ್ರಸಾರ ಮಾಡಿದ ವರದಿಗಳು ‘ಅಸಹ್ಯಕರ’, ‘ಪ್ರಚೋದನಕಾರಿ’ ಮತ್ತು ‘ಕೆಟ್ಟ ಅಭಿರುಚಿ’ಯಿಂದ ಕೂಡಿತ್ತು’ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಸೋಮವಾರ ಅಭಿಪ್ರಾಯಪಟ್ಟಿದೆ.

ಸಂವೇದನರಹಿತ ವಿಡಿಯೊಗಳನ್ನು ಹಾಗೂ ಆತಂಕ ಸೃಷ್ಟಿಸುವ ಚಿತ್ರಗಳನ್ನು ಬಿತ್ತರಿಸದಂತೆ ಇದೇ ವೇಳೆ ಕೇಂದ್ರ ಸರ್ಕಾರವು ಸುದ್ದಿ ವಾಹಿನಿಗಳಿಗೆ ಸಲಹೆ ನೀಡಿದೆ. ಜೊತೆಗೆ, ಕೇಬಲ್ ಟಿ.ವಿ ಜಾಲ ನಿಯಂತ್ರಣ ಕಾಯ್ದೆ 1995 ಅನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದೂ ಸುದ್ದಿ ವಾಹಿನಿಗಳಿಗೆ ನೀಡಿದ ಸಲಹೆಯಲ್ಲಿ ಹೇಳಲಾಗಿದೆ.

12 ಕಾರ್ಯಕ್ರಮಗಳ ಪಟ್ಟಿ

ವೀಕ್ಷಣೆಗೆ ಯೋಗ್ಯವಾಗಿರುವ ರೀತಿಯಲ್ಲಿ ದೃಶ್ಯಗಳನ್ನು ಎಡಿಟ್ ಮಾಡದೆ, ಸಾಮಾಜಿಕ ಜಾಲತಾಣಗಳಲ್ಲಿ ದೊರೆತಿರುವ ವಿಡಿಯೊಗಳನ್ನು ಅವು ಇರುವ ರೀತಿಯಲ್ಲಿಯೇ ಸುದ್ದಿ ವಾಹಿನಿಗಳು ಪ್ರಸಾರ ಮಾಡಿದ 12 ಘಟನೆಗಳ ವರದಿಗಾರಿಕೆಯನ್ನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಪಟ್ಟಿ ಮಾಡಿದೆ.

ಈ ಪಟ್ಟಿಯಲ್ಲಿ, 2022ರಲ್ಲಿ ಬೇರೆ ಬೇರೆ ತಿಂಗಳಿನಲ್ಲಿ ನಡೆದ ಘಟನೆಗಳನ್ನು ಕೇಂದ್ರ ನಮೂದಿಸಿದೆ. ಅವುಗಳೆಂದರೆ, ಮೇನಲ್ಲಿ ಕರ್ನಾಟಕದ ಬಾಗಲಕೋಟೆಯಲ್ಲಿ ವಕೀಲೆಯೊಬ್ಬರನ್ನು ಥಳಿಸಿದ ದೃಶ್ಯ, ಆಗಸ್ಟ್‌ನಲ್ಲಿ ವ್ಯಕ್ತಿಯೊಬ್ಬ, ಮತ್ತೊಮ್ಮ ವ್ಯಕ್ತಿಯ ದೇಹವನ್ನು ಎಳೆದುಕೊಂಡು ಹೋಗುತ್ತಿರುವ ಹಾಗೂ ರಕ್ತ ಸ್ರವಿಸುತ್ತಿದ್ದ ಆತನ ಮುಖವನ್ನು ತೋರಿಸಿದ ದೃಶ್ಯ, ಪಂಜಾಬ್ ಗಾಯಕ ಸಿಧು ಮೂಸೆವಾಲಾ ಅವರ ಗುಂಡು ಹೊಕ್ಕಿದ್ದ ಮೃತದೇಹದ ದೃಶ್ಯಗಳು ಈ ಪಟ್ಟಿಯಲ್ಲಿ ಸೇರಿವೆ.

‘ಕಳೆದ ಕೆಲವು ತಿಂಗಳಲ್ಲಿ ಅಪಘಾತ, ಸಾವು, ಮಹಿಳೆ, ಮಕ್ಕಳು ಹಾಗೂ ವೃದ್ಧರ ಮೇಲೆ ನಡೆದ ಹಿಂಸೆಗಳ ಕುರಿತು ಸುದ್ದಿ ವಾಹಿನಿಗಳು ಪ್ರಸಾರ ಮಾಡಿದ ವರದಿಗಳನ್ನು ಗಮನಿಸಲಾಗಿದೆ. ಇವು ಸಭ್ಯತೆಯನ್ನು ಮೀರಿದ ಹಾಗೂ ಕೆಟ್ಟ ಅಭಿರುಚಿಯಿಂದ ಕೂಡಿದ ವರದಿಗಳಾಗಿದ್ದವು. ಸಾಮಾನ್ಯ ವೀಕ್ಷಕನ ಕಣ್ಣು, ಕಿವಿಗಳಿಗೆ ಇಂಥ ವರದಿಗಳು ಹಿತಕರವಾಗಿ ಇರಲಿಲ್ಲ. ಜೊತೆಗೆ ಮಕ್ಕಳ ಮಾನಸಿಕ ಸ್ಥಿತಿಯ ಮೇಲೆ ಕೆಟ್ಟ ಪರಿಣಾಮ ಬೀರುವಂತಿದ್ದವು’ ಎಂದು ಕೇಂದ್ರ ಅಭಿಪ್ರಾಯಪಟ್ಟಿದೆ.

‘ಉತ್ತಮ ಅಭಿರುಚಿ ಮತ್ತು ಸಭ್ಯತೆ ಮೀರುವಂಥ ವರದಿಗಳನ್ನು ಸುದ್ದಿ ವಾಹಿನಿಗಳು ಪ್ರಸಾರ ಮಾಡಬಾರದು. ಅಶ್ಲೀಲ, ಮಾನಹಾನಿಕರ, ಸುಳ್ಳು ಮತ್ತು ಅರ್ಧ ಸತ್ಯದ ವಿಚಾರಗಳನ್ನು ಪ್ರಸಾರ ಮಾಡಬಾರದು. ವ್ಯಕ್ತಿ, ಸಮಾಜದ ಒಂದು ವರ್ಗವನ್ನು ನಿಂದಿಸುವ ಸುದ್ದಿಯನ್ನು ಪ್ರಸಾರ ಮಾಡಬಾರದು. ಸಾರ್ವಜನಿಕರು ಹಾಗೂ ದೇಶದ ನೈತಿಕತೆಗೆ ಧಕ್ಕೆ ತರುವಂಥ ದೃಶ್ಯಗಳನ್ನು ತೋರಿಸಬಾರದು. ಸಮಾಜದ ಎಲ್ಲ ವರ್ಗ, ಮಹಿಳೆಯರು, ಮಕ್ಕಳು, ವೃದ್ಧರು ಸೇರಿ ಎಲ್ಲರೂ ಕೂತು ನೋಡುವಂಥ ವರದಿಗಳನ್ನಷ್ಟೇ ಪ್ರಸಾರ ಮಾಡಬೇಕು’ ಎಂದು ವಾಹಿನಿಗಳಿಗೆ ಸೂಚಿಸಿದೆ.

ಜಬಾಬ್ದಾರಿ ತೋರಿ: ಟಿ.ವಿಯನ್ನು ವೃದ್ಧರು, ಮಕ್ಕಳು ಹಾಗೂ ಮಹಿಳೆಯರು ನೋಡುತ್ತಾರೆ. ಬೇರೆ ಬೇರೆ ಸಾಮಾಜಿಕ–ಆರ್ಥಿಕ ಹಿನ್ನೆಲೆಯ ಜನರು ನೋಡುತ್ತಾರೆ. ಆದ್ದರಿಂದ ಅಲ್ಪವಾದರೂ ಸಂವೇದನಶೀಲ ಹಾಗೂ ಜವಾಬ್ದಾರಿಯುತವಾಗಿ ಸುದ್ದಿಗಳನ್ನು ಪ್ರಸಾರ ಮಾಡಿ’ ಎಂದು ಹೇಳಿದೆ.

600ಕ್ಕೂ ಹೆಚ್ಚು ಮನೆಗಳಲ್ಲಿ ಬಿರುಕು

ಜೋಶಿಮಠ: ಉಪಗ್ರಹ ಸಮೀಕ್ಷೆಯಲ್ಲಿ ಪತ್ತೆ ● ಜನರ ಸ್ಥಳಾಂತರಕ್ಕೆ ಸೂಚನೆ

ನವದೆಹಲಿ/ಡೆಹ್ರಾಡೂನ್ (ಪಿಟಿಐ): ಭೂಕುಸಿತದಿಂದ ಮುಳುಗುತ್ತಿರುವ ಉತ್ತರಾಖಂಡದ ಜೋಶಿಮಠದಲ್ಲಿ 600 ಮನೆಗಳು ವ್ಯಾಪಕ ಬಿರುಕು ಬಿಟ್ಟಿರುವುದು ಉಪಗ್ರಹ ಸರ್ವೇಕ್ಷಣೆಯಲ್ಲಿ ಕಂಡುಬಂದಿದೆ. ಸುಮಾರು 4 ಸಾವಿರ ಸಂತ್ರಸ್ತರನ್ನು ಸುರಕ್ಷಿತ ನೆಲೆಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಗೃಹ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸೇನೆ ಮತ್ತು ಐಟಿಬಿಪಿ ಕಚೇರಿಗಳ ತಗ್ಗಿನ ಭಾಗಗಳಲ್ಲಿಯೂ ಕೆಲವು ಕಡೆ ಬಿರುಕುಗಳು ಕಾಣಿಸಿವೆ. ಸುರಕ್ಷತೆ ಮತ್ತು ಮುಂಜಾಗ್ರತಾ ಕ್ರಮ ಅನುಸರಿಸಲಾಗುತ್ತಿದೆ ಎಂದು ಅಧಿಕಾರಿ ತಿಳಿಸಿರುವುದಾಗಿ ‘ಎನ್‌ಡಿಟಿವಿ’ ಸೋಮವಾರ ವರದಿ ಮಾಡಿದೆ.

ಗಡಿ ನಿರ್ವಹಣೆಯ ಕಾರ್ಯದರ್ಶಿ ಡಾ.ಧರ್ಮೇಂದ್ರ ಸಿಂಗ್ ಗಂಗ್ವಾರ್ ಅವರ ನೇತೃತ್ವದ ಕೇಂದ್ರದ ಉನ್ನತ ತಂಡವು ಡೆಹ್ರಾಡೂನ್ ತಲುಪಿದ್ದು, ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರನ್ನು ಭೇಟಿ ಮಾಡಿತು.

ಜೋಶಿಮಠದಲ್ಲಿ ಶೇ 30ರಷ್ಟು ಹಾನಿಯಾಗಿದೆ. ತಜ್ಞರ ಸಮಿತಿಯು ವರದಿ ಸಿದ್ಧಪಡಿಸುತ್ತಿದ್ದು, ಆ ವರದಿಯನ್ನು ಪ್ರಧಾನಿ ಕಚೇರಿಗೆ (ಪಿಎಂಒ) ಸಲ್ಲಿಸಲಾಗುವುದು ಎಂದು ಗೃಹ ಸಚಿವಾಲಯದ ಅಧಿಕಾರಿ ಹೇಳಿದರು.

ಜಿಲ್ಲಾಡಳಿತವು ಪಟ್ಟಣದಲ್ಲಿ 200ಕ್ಕೂ ಹೆಚ್ಚು ಮನೆಗಳು ವಾಸಕ್ಕೆ ಅಸುರಕ್ಷಿತವೆಂದು ಕೆಂಪು ಗೆರೆಗಳಿಂದ ಗುರುತಿಸಿದೆ. ಪರಿಹಾರ ನೆಲೆ ಅಥವಾ ಬಾಡಿಗೆ ಮನೆಗಳಿಗೆ ತೆರಳಲು ಸಂತ್ರಸ್ತರಿಗೆ ಸೂಚಿಸಿರುವ ಜಿಲ್ಲಾಡಳಿತ, ಪ್ರತಿ ಕುಟುಂಬಕ್ಕೆ ತಿಂಗಳಿಗೆ ₹ 4,000 ನೆರವನ್ನು ಆರು ತಿಂಗಳವರೆಗೆ ನೀಡುವುದಾಗಿ ಭರವಸೆ ನೀಡಿದೆ.

ಉತ್ತರಾಖಂಡದ ಚಮೋಲಿ ಜಿಲ್ಲೆಯ ಜೋಶಿಮಠದಲ್ಲಿ ಮನೆಯೊಂದರ ಗೋಡೆ ಬಿರುಕು ಬಿಟ್ಟಿದೆ – ಪಿಟಿಐ ಚಿತ್ರ

ಮನೆ ಬಿಡಲು ಹಿಂಜರಿಕೆ: ಜೋಶಿಮಠದ ನಿವಾಸಿಗಳು ತಮ್ಮ ಮನೆಗಳನ್ನು ತೊರೆಯಲು ಹಿಂಜರಿಯುತ್ತಿದ್ದು, ಪ್ರತಿ ನಿಮಿಷವೂ ಮುಖ್ಯವಾಗಿದೆ. ಬಾಧಿತ ವಲಯದಿಂದ ಜನರನ್ನು ತಕ್ಷಣ ಸ್ಥಳಾಂತರಿಸಬೇಕು ಎಂದು ಉತ್ತರಾಖಂಡ ಮುಖ್ಯ ಕಾರ್ಯದರ್ಶಿ ಎಸ್.ಎಸ್. ಸಂಧು ಅವರು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದ್ದಾರೆ.

ಸೋಮವಾರ ಇನ್ನೂ 68 ಮನೆಗಳಲ್ಲಿ ಬಿರುಕುಗಳು ಕಾಣಿಸಿವೆ. ಸುರಕ್ಷಿತವಲ್ಲದ ಮನೆಗಳ ಸಂಖ್ಯೆ 678ಕ್ಕೆ ಏರಿದೆ. ಮತ್ತೆ 27 ಕುಟುಂಬಗಳನ್ನು ಸ್ಥಳಾಂತರಿಸಿದ್ದು, ಈವರೆಗೆ 82 ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಚಮೋಲಿಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

2021ರಲ್ಲೇ ಭವಿಷ್ಯ ನುಡಿದಿದ್ದ ಸಂಶೋಧಕರು (ಚಂಡೀಗಢ ವರದಿ): ಜೋಶಿಮಠದಲ್ಲಿ ಎರಡು ವರ್ಷದ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಭೂಮಿಯ ಮೇಲ್ಪದರ ಪಲ್ಲಟವಾಗಲಿದೆ ಎಂದು ತನ್ನ ಸಂಶೋಧಕರು 2021ರಲ್ಲೇ ಭವಿಷ್ಯ ನುಡಿದಿದ್ದರು ಎಂದು ಐಐಟಿ ರೋಪರ್ ಸೋಮವಾರ ಹೇಳಿದೆ.

ತುರ್ತು ವಿಚಾರಣೆ ಪಟ್ಟಿ: ‘ಸುಪ್ರೀಂ’ ಸೂಚನೆ

ನವದೆಹಲಿ (ಪಿಟಿಐ): ಜೋಶಿಮಠದಲ್ಲಿ ಉದ್ಭವಿಸಿರುವ ಗಂಡಾಂತರವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ನ್ಯಾಯಾಲಯದ ಮಧ್ಯಪ್ರವೇಶ ಕೋರಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಮಂಗಳವಾರವೇ ತುರ್ತು ವಿಚಾರಣೆಗೆ ಪಟ್ಟಿ ಮಾಡುವಂತೆ ನಮೂದಿಸಲು ಅರ್ಜಿದಾರರಿಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು, ಅರ್ಜಿದಾರ ಸ್ವಾಮಿ ಮುಕ್ತೇಶ್ವರಾನಂದ ಸರಸ್ವತಿ ಅವರ ಪರ ವಕೀಲರಿಗೆ ಈ ಸೂಚನೆ ನೀಡಿದೆ.

‘ಭೂಕುಸಿತ: ಸರ್ಕಾರದ ನಿರ್ಲಕ್ಷ್ಯವೇ ಕಾರಣ’

ಗೋಪೇಶ್ವರ, ಉತ್ತರಾಖಂಡ (ಪಿಟಿಐ): ‘ಉತ್ತರಾಖಂಡ ಹಾಗೂ ಹಿಮಾಚಲ ಪ್ರದೇಶದಲ್ಲಿನ ಹಿಮಾಲಯ ಪರ್ವತಶ್ರೇಣಿಯ ಸಮಗ್ರ ನಕ್ಷೆ ತಯಾರಿಸಿ ಅದನ್ನು ಎರಡು ದಶಕಗಳ ಹಿಂದೆಯೇ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಜೋಶಿಮಠದಲ್ಲಿ ಉಂಟಾಗಬಹುದಾದ ಅಪಾಯದ ಕುರಿತೂ ಆಗ ಎಚ್ಚರಿಸಲಾಗಿತ್ತು. ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಏಜೆನ್ಸಿ (ಎನ್‌ಆರ್‌ಎಸ್‌ಎ) ಸೇರಿದಂತೆ ದೇಶದ 12 ಅಗ್ರಗಣ್ಯ ವೈಜ್ಞಾನಿಕ ಸಂಸ್ಥೆಗಳು ಅಧ್ಯಯನ ಕಾರ್ಯದಲ್ಲಿ ಭಾಗಿಯಾಗಿದ್ದವು. ಇಸ್ರೊ ಮುಖ್ಯಸ್ಥರಾಗಿದ್ದ ಕೆ.ಕಸ್ತೂರಿ ರಂಗನ್ ಅವರೇ ಈ ಸಂಸ್ಥೆಗಳನ್ನು ನಿಯೋಜಿಸಿದ್ದರು’ ಎಂದು ಪರಿಸರ ತಜ್ಞ ಚಾಂಡಿ ಪ್ರಸಾದ್ ಭಟ್ ಸೋಮವಾರ ತಿಳಿಸಿದ್ದಾರೆ.

‘ವಲಯವಾರು ನಕ್ಷೆ ತಯಾರಿಕೆ ವೇಳೆ ಜೋಶಿಮಠಕ್ಕೆ ಸೇರಿದ 124.54 ಚದರ ಕಿ.ಮೀ ಪ್ರದೇಶವನ್ನು ಭೂಕುಸಿತಕ್ಕೆ ಒಳಗಾಗುವ ಸಾಧ್ಯತೆ ಆಧರಿಸಿ ಆರು ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಈ ಪೈಕಿ ಶೇ 99ಕ್ಕೂ ಹೆಚ್ಚು ಪ್ರದೇಶವನ್ನು ಭೂಕುಸಿತಕ್ಕೆ ತುತ್ತಾಗಬಲ್ಲ ಪ್ರದೇಶವೆಂದು ಗುರುತಿಸಲಾಗಿತ್ತು. ಈ ಪೈಕಿ ಶೇ 39ರಷ್ಟು ಪ್ರದೇಶವನ್ನು ಹೆಚ್ಚಿನ ಅಪಾಯದ ವಲಯವೆಂದು, ಶೇ 28ರಷ್ಟು ಪ್ರದೇಶವನ್ನು ಮಧ್ಯಮ ಅಪಾಯದ ವಲಯ ಹಾಗೂ ಶೇ 29ರಷ್ಟು ಪ್ರದೇಶವನ್ನು ಅತಿ ಕಡಿಮೆ ಅಪಾಯದ ವಲಯವೆಂದು ವಿಭಾಗಿಸಲಾಗಿತ್ತು’ ಎಂದಿದ್ದಾರೆ.

‘ಈ ಅಧ್ಯಯನ ವರದಿ ಕುರಿತು ಒಮ್ಮೆ ಸುದೀರ್ಘ ಚರ್ಚೆ ನಡೆಸಲಾಗಿತ್ತು. ಡೆಹ್ರಾಡೂನ್‌ನಲ್ಲಿ ನಡೆದಿದ್ದ ಸಭೆಯಲ್ಲಿ ಉನ್ನತ ಅಧಿಕಾರಿಗಳು, ತಜ್ಞರು, ಜನಪ್ರತಿನಿಧಿಗಳು, ಸಾಮಾಜಿಕ ಕಾರ್ಯಕರ್ತರು ಭಾಗಿಯಾಗಿದ್ದರು. ಆಗ ಜಿಲ್ಲಾಧಿಕಾರಿಗಳು ಸುರಕ್ಷತಾ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರು. ಆದರೆ ಅದು ಭರವಸೆಯಾಗಿಯೇ ಉಳಿಯಿತು’ ಎಂದು ಮ್ಯಾಗ್ಸಸೆ ಪ್ರಶಸ್ತಿ ಪುರಸ್ಕೃತರೂ ಆಗಿರುವ ಭಟ್ ಹೇಳಿದ್ದಾರೆ.

ಕಳಸಾ ತಿರುವು ಯೋಜನೆ: ಪರಿಶೀಲನೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಯೋಜನೆಯ ಭಾಗವಾದ ಕಳಸಾ ನಾಲಾ ತಿರುವು ಯೋಜನೆಗೆ 33.05 ಹೆಕ್ಟೇರ್ ಮೀಸಲು ಅರಣ್ಯ ಬಳಕೆಗೆ ಪರಿಸರ ಅನುಮೋದನೆ ನೀಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ಸಹಾಯಕ ಮಹಾನಿರ್ದೇಶಕರು (ಎಐಜಿ) ಯೋಜನಾ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ.

ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ ಅರಣ್ಯ ಬಳಸಲು (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್‌ಗೆ) ಒಪ್ಪಿಗೆ ನೀಡುವಂತೆ ಎಸಿಎಸ್ ಅವರು ಸಚಿವಾಲಯಕ್ಕೆ 2022ರ ಡಿಸೆಂಬರ್ 30ರಂದು ಪ್ರಸ್ತಾವನೆ ಸಲ್ಲಿಸಿದ್ದರು.

ಈ ವಿಷಯದ ಬಗ್ಗೆ ಇನ್ನಷ್ಟು ವಿವರಣೆ ನೀಡುವಂತೆ ಕರ್ನಾಟಕ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ಜಾವೆದ್ ಅಖ್ತರ್ ಅವರಿಗೆ ಪರಿಸರ ಸಚಿವಾಲಯದ ಸಮಗ್ರ ಪ್ರಾದೇಶಿಕ ಕೇಂದ್ರದ ಉಪ ಮಹಾ ನಿರ್ದೇಶಕ ಎಂ.ಕೆ.ಶಂಭು ಅವರು ಜನವರಿ 5ರಂದು ಪತ್ರ ಬರೆದು ಸೂಚಿಸಿದ್ದಾರೆ. ಈ ಯೋಜನಾ ಪ್ರದೇಶವು ವನ್ಯಜೀವಿ ಧಾಮ ಹಾಗೂ ಪರಿಸರ ಸೂಕ್ಷ್ಮ ಪ್ರದೇಶದ ಸಮೀಪದಲ್ಲಿದೆ. ಹೀಗಾಗಿ, ಮುಖ್ಯ ವನ್ಯಜೀವಿ ವಾರ್ಡನ್ (ಪಿಸಿಸಿಎಫ್) ಅವರು ಸೂಕ್ತ ಶಿಫಾರಸು ಹಾಗೂ ಪರಿಹಾರ ಕ್ರಮಗಳ ವಿವರಗಳನ್ನು ಒದಗಿಸಬೇಕು ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ಗೃಹ ಮಂಡಳಿ

Karnataka Housing Board Building Communities

ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ.ಪಾ.ಅ/ಹಂಚಿಕೆ-9/ಸಾ.ಪ್ರ/ವಿ.ದೇ.ಹಿ/2022-23 ದಿನಾಂಕ: 06-01-2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ವಿಜಯಪುರ ಜಿಲ್ಲೆ, ದೇವರ ಹಿಪ್ಪರಗಿ ತಾಲ್ಲೂಕು, ದೇವರ ಹಿಪ್ಪರಗಿ ಗ್ರಾಮದ ಸರ್ವೆ ನಂ.51, 54 ಮತ್ತು 55ರ ಒಟ್ಟು 55 ಎಕರೆ 20 ಗುಂಟೆ ಜಮೀನಿನಲ್ಲಿ 60:40ರ (ಮಂಡಳಿ:ಭೂಮಾಲೀಕರ) ಅನುಪಾತದ ಪಾಲುದಾರಿಕೆ ಆಧಾರದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಸದರಿ ವಸತಿ ಯೋಜನೆಯಲ್ಲಿ ವಿವಿಧ ವರ್ಗದ ನಿವೇಶನ ಹೊಂದಲು ಬಯಸುವ ಸಾರ್ವಜನಿಕರಿಂದ ದಿನಾಂಕ: 29-06-2009 ರಲ್ಲಿ ಬೇಡಿಕೆ ಸಮೀಕ್ಷೆ ಪ್ರಕಟಣೆಯನ್ನು ನೀಡಿ, ನೋಂದಣಿ ಶುಲ್ಕದೊಂದಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸದರಿ ಬೇಡಿಕೆ ಸಮೀಕ್ಷೆ ಪ್ರಕಟಣೆಯನುಸಾರ ನೋಂದಣಿ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಿರುವ ಅರ್ಜಿದಾರರು ಆರಂಭಿಕ ಠೇವಣಿ ಹಣವನ್ನು ಹಾಗೂ ಹೊಸದಾಗಿ ಅರ್ಜಿ ಸಲ್ಲಿಸುವ ಅರ್ಜಿದಾರರು ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು ಈ ಕೆಳಗಿನಂತೆ e-payment ಮೂಲಕ ಪಾವತಿಸಬಹುದಾಗಿದೆ.

ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಮೊತ್ತವನ್ನು ಆನ್‌ಲೈನ್ ಮೂಲಕ ಪಾವತಿಸಲು ಕೊನೆಯ ದಿನಾಂಕ: 09-02-2023 ಆಗಿರುತ್ತದೆ.

ಕ್ರ ಸಂ	ಉದ್ದೇಶಿತ ಬಡಾವಣೆಯ ಸ್ಥಳ	ವರ್ಗ	ನಿವೇಶನದ ಅಳತೆ (ಚ.ಮೀ)	ಲಭ್ಯವಾಗುವ ಅಂದಾಜು ಸ್ವತ್ತುಗಳು	ನಿವೇಶನಗಳ ತಾತ್ಕಾಲಿಕ ಬೆಲೆ ಪ್ರತಿ ಚದರಡಿಗೆ ರೂ.ಗಳಲ್ಲಿ	ಈಗಾಗಲೇ ಪಾವತಿಸಿರುವ ಮತ್ತು ಹೊಸ ಅರ್ಜಿದಾರರು ಪಾವತಿಸಬೇಕಾದ ನೋಂದಾಣಿ ಶುಲ್ಕ	ಪಾವತಿಸಬೇಕಾದ ಆರಂಭಿಕ ಠೇವಣಿ ಮೊತ್ತ ರೂ.ಗಳಲ್ಲಿ
1.	ವಿಜಯಪುರ ಜಿಲ್ಲೆ, ದೇವರ ಹಿಪ್ಪರಗಿ ತಾಲ್ಲೂಕು, ದೇವರ ಹಿಪ್ಪರಗಿ ಗ್ರಾಮದ ಸರ್ವೆ ನಂ.51, 54 ಮತ್ತು 55	EWS	6X9	66	275/-	300/-	10,000/-
		LIG	9X12	135	550/-	500/-	20,000/-
		MIG	9X15	157	550/-	1000/-	30,000/-
		HIG-1	12X18	75	550/-	1500/-	40,000/-
	ಒಟ್ಟು			433			

ಅರ್ಜಿ ಮತ್ತು ಆರಂಭಿಕ ಠೇವಣಿ ಹಣ e-payment ಮೂಲಕ ಪಾವತಿಸಲು ಹಾಗೂ ಷರತ್ತು ಮತ್ತು ನಿಬಂಧನೆಗಳ ವಿವರಗಳಿಗಾಗಿ ಕರ್ನಾಟಕ ಗೃಹ ಮಂಡಳಿ ವೆಬ್‌ಸೈಟ್ https://www.khb.karnataka.gov.in ಅನ್ನು ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ವಿಜಯಪುರ, ಮೊಬೈಲ್ ನಂ. 82178 73662 / 80501 47939 ಅಥವಾ ಕಾರ್ಯಪಾಲಕ ಅಭಿಯಂತರರು(ಹಂಚಿಕೆ) / ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ, ಇವರನ್ನು ಖುದ್ದಾಗಿ ಅಥವಾ ಕಛೇರಿ ದೂರವಾಣಿ ಸಂಖ್ಯೆ: 080–2227 3511 ext. 306 / 307 / 308 / 309 ಗೆ ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/RO3963/AAPL/2022-23

IN THE COURT OF THE 39th ADDITIONAL CITY CIVIL AND SESSIONS JUDGE AT BENGALURU (CCH 40)

O.S.No.7956/2019

BETWEEN:
The Director, Department of Printing Stationery and Publications, Bengaluru. **...Plaintiff**

AND
H. Gangaiah **...Defendant**

Notice to Respondent No. 1 U/O S Rule 20 of CPC
1. H. Gangaiah
No.58, 3rd Right Cross,
4th Main, Jayanagar West,
Tumkur-572102.

Whereas the Plaintiff has filed O.S.No.7956/2019 under section 26 R/w under order VII rule 1 of CPC against the Defendant for recovery of money of Rs.1,87,83,583/- with interest at the rate of 24% per annum from the date of suit till the date of realization.

You are hereby summoned to appear before the City Civil and Sessions Judge at Bengaluru, XXXIX Addl (CCH-40) on 06-02-2023 at 11.00 a.m. in person or through an advocate/pleader duly instructed and able to answer the questions to the same. Failing which the suit will be heard and determined as ex-parte.

Given under my hand and seal of the court this day on 13-12-2022.

By Order of the Court
Sd/-
Assistant Registrar
City Civil Court, Bengaluru.

Sd/-
Advocate for Plaintiff

Sd/-
Shantha B Mullur
1st Addl.District Government Pleader

DIPR/CP/3983/MAA/2022-23

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ:ಗುವಿಸಕಂ/ಮುಅ(ಕಾ)/ಕಾ.ನಿ.ಅ(ಆರ್‌ಎ)/ಸ.ಕಾ.ನಿ.ಅ(ಜ)/ಸ.ಲೆ.ಅ(ಆರ್‌ಎ)2022–23/49714–18 ದಿನಾಂಕ: 07–01–2023

ಪ್ರಕಟಣೆ

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, # 16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560 052 ರವರ ಸಮ್ಮುಖದಲ್ಲಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್‌ದರ) ನಿಯಮಾವಳಿ–2000 ರ ಜೊತೆಗೆ ಓದಿಕೊಳ್ಳಲಾಗುವ ಕರ್ನಾಟಕ ವಿದ್ಯುಚ್ಛಕ್ತಿ ಕಾಯಿದೆ 2003ರ ಪರಿಚ್ಛೇದ 61 ಮತ್ತು 62ರ ಅಡಿಯಲ್ಲಿ ಆರ್ಥಿಕ ವರ್ಷ–22ರ ಟ್ರೂಯಿಂಗ್‌ಅಪ್, 6ನೇ (ಕಂಟ್ರೋಲ್) ನಿಯಂತ್ರಿತ ಅವಧಿ ಆರ್ಥಿಕ ವರ್ಷ–24ರ ನಿರೀಕ್ಷಿತ ರೆವಿನ್ಯೂ (ಇ.ಆರ್.ಸಿ), ಆರ್ಥಿಕ ವರ್ಷ–24ಕ್ಕೆ ರೀಟೈಲ್ ವಿದ್ಯುತ್ ಸರಬರಾಜು ವಿದ್ಯುತ್ ದರಗಳ ಅನುಮೋದನೆಯನ್ನು ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಗುವಿಸಕಂನಿ) ಕಲಬುರಗಿಯಿಂದ ಅರ್ಜಿ ಸಲ್ಲಿಸಿದೆ. ಗೌರವಾನ್ವಿತ ಆಯೋಗವು ಈ ಮನವಿಯನ್ನು ತಾಳೆ ನೋಡುವುದಕ್ಕೆ ಮತ್ತು ಸಿಂಧುಗೊಳಿಸುವುದಕ್ಕೆ ಒಳಪಟ್ಟು ದರ ನಿಯಮಗಳ ಪ್ರಕಾರ ಇದನ್ನು ಪೆಟಿಷನ್ (ಮನವಿ) ಎಂದು ಪರಿಗಣಿಸಿದೆ.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಕಲಬುರಗಿ– 585102.

---- ಅರ್ಜಿದಾರರು

ಅರ್ಜಿಯ ಸಾರಾಂಶ (ಸೂಚನೆ)

1. ಪರಿಷ್ಕರಣೆಯ ಅಗತ್ಯತೆ: ಪ್ರಸಕ್ತ ವಿದ್ಯುತ್ ದರಗಳಿಂದ ಗುವಿಸಕಂನಿ ಗಳಿಸುತ್ತಿರುವ ರೆವಿನ್ಯೂ ಸ್ವೀಕೃತಿ ಹಾಗೂ ವಾರ್ಷಿಕ ರೆವಿನ್ಯೂ ಅಗತ್ಯತೆಯ ನಡುವೆ ಸ್ವಾಮ್ಯತೆ ಇಲ್ಲದ ಪ್ರಯುಕ್ತ ಕೆಳಕಂಡಂತೆ ರೆವಿನ್ಯೂ ಕೊರತೆ ಉಂಟಾಗಿದೆ. (ಕರ್ನಾಟಕ ಸರ್ಕಾರ ಸಬ್ಸಿಡಿ ಮತ್ತು ರೆಗ್ಯೂಲೇಟರಿ ಅಸೆಟ್ಸ್ ಒಳಗೊಂಡಂತೆ).

ಆರ್ಥಿಕ ವರ್ಷ	ರೆವಿನ್ಯೂ ಸ್ವೀಕೃತಿ ರೂ. ಕೋಟಿಗಳಲ್ಲಿ	ರೆವಿನ್ಯೂ ಅಗತ್ಯತೆ ರೂ. ಕೋಟಿಗಳಲ್ಲಿ	ಹೆಚ್ಚಳ/ (ಕೊರತೆ) ರೂ. ಕೋಟಿಗಳಲ್ಲಿ	ಮಾರಾಟ ದಶಲಕ್ಷ ಯುನಿಟಗಳಲ್ಲಿ	ವಿದ್ಯುತ್ ಸರಬರಾಜು ಸರಾಸರಿ ವೆಚ್ಚ (ಪ್ರತಿ ಯೂನಿಟ್‌ಗೆ) ರೂ.ಗಳಲ್ಲಿ
1	2	3	4	5	6=(3/5)
2021-22	6027.72	5910.76	10.11	7827.30	7.55
2023-24	6974.62	8135.28	(1160.66)	8470.08	9.60
ಜಕಾತಿ ಅರ್ಜಿಯಲ್ಲಿ ವಸುಲಿಗಾಗಿ ಸಲ್ಲಿಸಿದ ಒಟ್ಟು ಪ್ರಸ್ತಾವಿತ ಕೊರತೆ			1160.66		

1. ರೆವಿನ್ಯೂ ಸ್ವೀಕೃತಿಗಳನ್ನು (ಆದಾಯ) ಪ್ರಸ್ತುತ ಜಕಾತಿಯ ಪ್ರಕಾರ ಅಂದಾಜಿಸಲಾಗಿದೆ ಮತ್ತು ಪ್ರಸ್ತುತ ಜಕಾತಿಯಿಂದ ಆಗುವ ಕೊರತೆಯನ್ನು ತುಂಬಿಕೊಳ್ಳಲು ಸಾಧ್ಯವಿಲ್ಲವಾದುದರಿಂದ ನಿಗದಿತ ಶುಲ್ಕವನ್ನು ಹೆಚ್ಚಿಸಿ ವಿದ್ಯುತ್ ದರವನ್ನು ಕಡಿಮೆ/ಹೆಚ್ಚಳದ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆರ್ಥಿಕ ವರ್ಷ–24ರ ವಾರ್ಷಿಕ ಕಾರ್ಯಕ್ಷಮತೆ ವರದಿಯಲ್ಲಿನ ಕೊರತೆ **ರೂ. 1160.66 ಕೋಟಿ** ಗಳನ್ನು ಎಲ್ಲಾ ಪ್ರವರ್ಗಗಳ ಬಳಕೆದಾರಿಂದ ತುಂಬಿಕೊಳ್ಳಲು ಗು.ವಿ.ಸ.ಕಂ.ನಿ ಯು ಈ ದರ ಹೆಚ್ಚಳ ಪ್ರಸ್ತಾವನೆಯನ್ನು ಸಲ್ಲಿಸಿದೆ.

2. ವಿದ್ಯುತ್‌ದರ ಹೆಚ್ಚಳದ ಪ್ರಸ್ತಾವನೆ: ವಿವಿಧ ಪ್ರವರ್ಗದ ಗ್ರಾಹಕರಿಗೆ ವಿಧಿಸಲು ಉದ್ದೇಶಿಸಿರುವ ಪ್ರಸ್ತಾಪಿತ ನಿಗದಿತ ಶುಲ್ಕ ಮತ್ತು ವಿದ್ಯುತ್ ಬಳಕೆ ಶುಲ್ಕ ಹೆಚ್ಚಳದ ವಿವರವನ್ನು ಈ ಕೆಳಗಿನ ಅನುಬಂಧದಲ್ಲಿ ರಲ್ಲಿ ತೋರಿಸಲಾಗಿದೆ:

3. ಕವಿನಿ ಆಯೋಗ (ವಿದ್ಯುತ್‌ದರ) ನಿಬಂಧನೆಗಳು 2000ದ ನಿಯಮಾವಳಿ–5ರ ಅನುಸರಣೆಯಾಗಿ, ಮೇಲಿನ ಅರ್ಜಿದಾರರ ಮನವಿಯ ವಿರುದ್ಧ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಯನ್ನು 6 (ಆರು) ಪ್ರತಿಗಳಲ್ಲಿ, ಅಫಿಡವಿಟ್‌ನೊಂದಿಗೆ ಈ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಮೊದಲ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳೊಳಗೆ ಸ್ವೀಕರಣಾಧಿಕಾರಿ, ಕಾರ್ಯದರ್ಶಿಯವರ ಕಚೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ಇವರಿಗೆ ಸಲ್ಲಿಸತಕ್ಕದ್ದು. ತಮ್ಮ ಆಕ್ಷೇಪಣೆ ಇದ್ದಲ್ಲಿ, ಸಾರ್ವಜನಿಕ ವಿಚಾರಣೆಯಲ್ಲಿ (Public Hearing) ವೈಯಕ್ತಿಕವಾಗಿ ಭಾಗವಹಿಸುವರೇ ಎಂಬುದನ್ನೂ ತಿಳಿಸತಕ್ಕದ್ದು. ಆಕ್ಷೇಪಣೆಗೆ ಉತ್ತರವನ್ನು ಒದಗಿಸುವುದಕ್ಕಾಗಿ ಆಕ್ಷೇಪಣೆಯ ಪ್ರತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ್ (ವಿ) (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ – 585102 ರವರಿಗೆ ಸಲ್ಲಿಸಬಹುದಾಗಿದೆ.

4. ಆಸಕ್ತ ವ್ಯಕ್ತಿಗಳಿಗೆ ಪರಾಮರ್ಷೆಗಾಗಿ ಅರ್ಜಿದಾರರ ಮನವಿಯ ಪ್ರತಿಗಳು (Tariff Petition Booklet) ಕಾರ್ಯನಿರ್ವಾಹಕ ಇಂಜಿನೀಯರ್ (ವಿ) (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ – 585102 ರಲ್ಲಿ ಮತ್ತು ಎಲ್ಲಾ ವೃತ್ತ ಕಛೇರಿಗಳಲ್ಲಿ ಅಧೀಕ್ಷಕ ಇಂಜಿನಿಯರು(ವಿ) (ಕಾ ಮತ್ತು ಪಾ), ಕಲಬುರಗಿ, ಬೀದರ್, ರಾಯಚೂರ, ಬಳ್ಳಾರಿ, ಕೊಪ್ಪಳದಲ್ಲಿ ದೊರಕುತ್ತವೆ. ಅರ್ಜಿದಾರರ ಮನವಿ ಹಾಗೂ ಸಂಬಂಧಿತ ದಾಖಲೆಗಳ ಪೂರ್ಣ ಪ್ರತಿಯನ್ನು ರೂ. 550/– ಮತ್ತು ಆಯೋಗದ ಅವಲೋಕನಕ್ಕೆ ಗು.ವಿ.ಸ.ಕಂ.ನಿಯು ಒದಗಿಸಿದ ಉತ್ತರ ಇವುಗಳನ್ನು ರೂ. 1200/– ಒಟ್ಟು ರೂ. 1750/–ಪಾವತಿಸಿ ಪ್ರತಿಯನ್ನು ಖರೀದಿಸಬಹುದಾಗಿದೆ.

5. ಇ.ಆರ್.ಸಿ., ವಿದ್ಯುತ್ ದರ ಪರಿಷ್ಕರಣೆ ಅರ್ಜಿ, ಈ ಸಂಬಂಧವಾಗಿ ಆಯೋಗದ ಪೂರ್ವಭಾವಿ ಅವಲೋಕನ, ಮತ್ತು ಆಯೋಗದ ಅವಲೋಕನಕ್ಕೆ ಗುವಿಸಕಂನಿಯು ಒದಗಿಸಿದ ಉತ್ತರ ಇವುಗಳನ್ನು ನಮ್ಮ ವೆಬ್‌ಸೈಟ್ (https://gescom.karnataka.gov.in/) ದಿಂದಲೂ ಪಡೆಯಬಹುದಾಗಿದೆ. ಅಥಾವ ಕಾರ್ಯನಿರ್ವಾಹಕ ಇಂಜಿನಿಯರ (ವಿ), (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ ರವರ ಕಛೇರಿಯಲ್ಲಿ ಸೂಕ್ತ ಶುಲ್ಕ ನೀಡಿ ಅವುಗಳ ಝೆರಾಕ್ಸ್ ಪ್ರತಿಗಳನ್ನು ಪಡೆದುಕೊಳ್ಳಬಹುದಾಗಿದೆ.

ಅನುಬಂಧ

ಅನುಬಂಧ: FY-23 ಪ್ರಸಕ್ತ ದರ ಮತ್ತು FY-24ರ ಪ್ರಸ್ತಾಪಿತ ದರಗಳ ವಿವರಗಳನ್ನು ತೋರಿಸುವ ಪಟ್ಟಿ

ಗ್ರಾಹಕರ ವರ್ಗೀಕರಣ		ನಿಗದಿತ/ವಿದ್ಯುಚ್ಛಕ್ತಿ ದರ (ರೂ./ಯೂನಿಟ್) ಪ್ರಸ್ತುತ	ಪ್ರಸ್ತಾಪಿತ
ಎಲ್.ಟಿ.–1: ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ :			
ವಿದ್ಯುತ್ ಬಳಕೆ ಶುಲ್ಕ	0–40 ಯುನೀಟ್‌ಗಳಿಗೆ	8.11	9.60
	ಮಾಸಿಕ ಕನಿಷ್ಠ ಶುಲ್ಕ	70	
ಎಲ್.ಟಿ.–2(ಎ)(i): ಗೃಹಬಳಕೆ–ನಗರ/ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ			
ನಿಗದಿತ ಶುಲ್ಕ	ಮೊದಲ ಕಿ.ವ್ಯಾ.ಗೆ	100	150
	ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ 50 ಕಿ. ವ್ಯಾಟ ವರೆಗೆ	110	250
	ಪ್ರತಿ ಹೆಚ್ಚುವರಿ 50 ಕಿ. ವ್ಯಾಟ ಗಿಂತ ಹೆಚ್ಚಿನ ಹೊರೆಗೆ	175	300
ವಿದ್ಯುತ್ ಬಳಕೆ ಶುಲ್ಕ	ಮೊದಲ 50 ಯೂನಿಟ್ಟುಗಳು	4.10	3.90
	51 ರಿಂದ 100 ಯೂನಿಟ್ಟುಗಳು	5.60	5.45
	101 ರಿಂದ 200 ಯೂನಿಟ್ಟುಗಳು	7.15	7.65
	200 ಯೂನಿಟ್ಟುಗಳಿಗೆ ಮೇಲ್ಪಟ್ಟು	8.20	8.50
ಎಲ್.ಟಿ.–2(ಎ)(ii): ಗೃಹಬಳಕೆ– ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ			
ನಿಗದಿತ ಶುಲ್ಕ	ಮೊದಲ ಕಿ.ವ್ಯಾ.ಗೆ	85	140
	ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ 50 ಕಿ. ವ್ಯಾಟ ವರೆಗೆ	100	200
	ಪ್ರತಿ ಹೆಚ್ಚುವರಿ 50 ಕಿ. ವ್ಯಾಟ ಗಿಂತ ಹೆಚ್ಚಿನ ಹೊರೆಗೆ	160	280
ವಿದ್ಯುತ್ ಬಳಕೆ ಶುಲ್ಕ	ಮೊದಲ 50 ಯೂನಿಟ್ಟುಗಳು	4.00	3.85
	51 ರಿಂದ 100 ಯೂನಿಟ್ಟುಗಳು	5.30	5.20
	101 ರಿಂದ 200 ಯೂನಿಟ್ಟುಗಳು	6.85	7.15
	200 ಯೂನಿಟ್ಟುಗಳಿಗೆ ಮೇಲ್ಪಟ್ಟು	7.70	8.00
ಎಲ್.ಟಿ.–2(ಬಿ)(i): ನಗರ/ಪಟ್ಟಣದಲ್ಲಿರುವ ಖಾಸಗಿ ವೃತ್ತಿಪರ/ವಿದ್ಯಾಸಂಸ್ಥೆಗಳು			
ನಿಗದಿತ ಶುಲ್ಕ	ಮಾಸಿಕ ಕನಿಷ್ಠ	150	250
	50 ಕಿ.ವ್ಯಾ. ಒಳಪಟ್ಟ ಹೊರೆಗೆ	120	200
	ಪ್ರತಿ ಹೆಚ್ಚುವರಿ 50 ಕಿ. ವ್ಯಾಟ ಗಿಂತ ಹೆಚ್ಚಿನ ಹೊರೆಗೆ	175	300
ವಿದ್ಯುತ್ ಬಳಕೆ ಶುಲ್ಕ	ಮೊದಲ 200 ಯೂನಿಟ್ಟುಗಳು	7.30	7.80
	200 ಯೂನಿಟ್ಟುಗಳಿಗೆ ಮೇಲ್ಪಟ್ಟು	8.55	9.05
ಎಲ್.ಟಿ.–2(ಬಿ)(ii): ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಖಾಸಗಿ ವೃತ್ತಿಪರ/ವಿದ್ಯಾಸಂಸ್ಥೆಗಳು			
ನಿಗದಿತ ಶುಲ್ಕ	ಮಾಸಿಕ ಕನಿಷ್ಠ	135	160
	50 ಕಿ.ವ್ಯಾ. ಒಳಪಟ್ಟ ಹೊರೆಗೆ	110	130
	ಪ್ರತಿ ಹೆಚ್ಚುವರಿ 50 ಕಿ. ವ್ಯಾಟ ಗಿಂತ ಹೆಚ್ಚಿನ ಹೊರೆಗೆ	165	195
ವಿದ್ಯುತ್ ಬಳಕೆ ಶುಲ್ಕ	ಮೊದಲ 200 ಯೂನಿಟ್ಟುಗಳು	6.75	7.00
	200 ಯೂನಿಟ್ಟುಗಳಿಗೆ ಮೇಲ್ಪಟ್ಟು	8.00	8.25
ಎಲ್.ಟಿ.–3(i): ವಾಣಿಜ್ಯ ಬಳಕೆ–ನಗರ/ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ			
ನಿಗದಿತ ಶುಲ್ಕ	ಪ್ರತಿ ಕಿ.ವ್ಯಾ. ಗೆ 50 ಕಿ.ವ್ಯಾವರೆಗೆ	125	250
	50 ಕಿ.ವ್ಯಾ. ಗಿಂತ ಮೇಲ್ಪಟ್ಟ ಪ್ರತಿ ಕಿ.ವ್ಯಾ.ಗೆ	230	350
ವಿದ್ಯುತ್ ಬಳಕೆ ಶುಲ್ಕ	0–50 ಯೂನಿಟ್ಟುಗಳು	8.40	8.20
	50 ಯೂನಿಟ್ಟು ಮೇಲ್ಪಟ್ಟು	9.40	9.20
ಎಲ್.ಟಿ.–3(ii): ವಾಣಿಜ್ಯ ಬಳಕೆ–ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ			
ನಿಗದಿತ ಶುಲ್ಕ	ಪ್ರತಿ ಕಿ.ವ್ಯಾ. ಗೆ 50 ಕಿ.ವ್ಯಾ. ವರೆಗೆ	115	140
	50 ಕಿ.ವ್ಯಾ. ಗಿಂತ ಮೇಲ್ಪಟ್ಟ ಪ್ರತಿ ಕಿ.ವ್ಯಾ. ಗೆ	220	250
ವಿದ್ಯುತ್ ಬಳಕೆ ಶುಲ್ಕ	0–50 ಯೂನಿಟ್ಟುಗಳು	7.90	7.70
	50 ಯೂನಿಟ್ಟು ಮೇಲ್ಪಟ್ಟು	8.90	8.70
ಎಲ್.ಟಿ.–4ಎ: ಐ.ಪಿ. ಸೆಟ್ಟುಗಳು–10 ಎಚ್.ಪಿ. ಮತ್ತು ಕಡಿಮೆ ಲೋಡ್			
ನಿಗದಿತ ಶುಲ್ಕ	ಪ್ರತಿ ಎಚ್.ಪಿ. ಗೆ	CDT	200
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್ಟಿಗೆ	6.63	6.70
ಎಲ್.ಟಿ.–4ಬಿ: ಐ.ಪಿ. ಸೆಟ್ಟುಗಳು–10 ಎಚ್.ಪಿ.ಗಿಂತ ಅಧಿಕ ಲೋಡ್			
ನಿಗದಿತ ಶುಲ್ಕ	ಪ್ರತಿ ಎಚ್.ಪಿ. ಗೆ	110	140
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್ಟಿಗೆ	3.90	4.00
ಎಲ್.ಟಿ.–4ಸಿ: ಖಾಸಗಿ ತೋಟಗಾರಿಕೆ/ನರ್ಸರಿಗಳು–10 ಎಚ್.ಪಿ & ಕಡಿಮೆ ಲೋಡ್			
ನಿಗದಿತ ಶುಲ್ಕ	ಪ್ರತಿ ಎಚ್.ಪಿ. ಗೆ	100	150
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್ಟಿಗೆ	3.90	4.50
ಎಲ್.ಟಿ.–5ಎ: ನಗರ/ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕೈಗಾರಿಕೆಗಳಿಗೆ			
ನಿಗದಿತ ಶುಲ್ಕ	5 ಎಚ್.ಪಿ. ವರೆಗೆ	90	150
	>5 ರಿಂದ <40 ಎಚ್.ಪಿ.	100	160
	40 ರಿಂದ <67 ಎಚ್.ಪಿ.	125	185
	67 ರಿಂದ <100 ಎಚ್.ಪಿ.	190	290
	100 ಎಚ್.ಪಿ. ಮತ್ತು ಮೇಲ್ಪಟ್ಟು	225	500
ವಿದ್ಯುತ್ ಬಳಕೆ ಶುಲ್ಕ	0–500 ಯೂನಿಟ್ಟುಗಳಿಗೆ	5.85	5.75
	501–1000 ಯೂನಿಟ್ಟುಗಳು	6.85	6.75
	1000ಗೂ ಮೇಲ್ಪಟ್ಟು ಯೂನಿಟ್ಟಿಗೆ	7.15	7.05
ಎಲ್.ಟಿ.–5ಬಿ: ಗ್ರಾಮ ಪಂಚಾಯತಿ ವ್ಯಾಪ್ತಿಯ ಕೈಗಾರಿಕೆಗಳಿಗೆ (ಎಲ್.ಟಿ.–5ಎ ದಲ್ಲಿ ಸೇರುವ ಸ್ಥಾವರಗಳನ್ನು ಹೊರತುಪಡಿಸಿ)			
ನಿಗದಿತ ಶುಲ್ಕ	5 ಎಚ್.ಪಿ. ವರೆಗೆ	80	140
	>5 ರಿಂದ <40 ಎಚ್.ಪಿ.	95	150
	40 ರಿಂದ <67 ಎಚ್.ಪಿ.	120	175
	67 ರಿಂದ <100 ಎಚ್.ಪಿ.	175	275
	100 ಎಚ್.ಪಿ. ಮತ್ತು ಮೇಲ್ಪಟ್ಟು	210	485
ವಿದ್ಯುತ್ ಬಳಕೆ ಶುಲ್ಕ	0–500 ಯೂನಿಟ್ಟುಗಳಿಗೆ	5.75	5.60
	501–1000 ಯೂನಿಟ್ಟುಗಳು	6.70	6.55
	1000ಗೂ ಮೇಲ್ಪಟ್ಟು ಯೂನಿಟ್ಟಿಗೆ	7.00	6.85

ಗ್ರಾಹಕರ ವರ್ಗೀಕರಣ		ನಿಗದಿತ/ವಿದ್ಯುಚ್ಛಕ್ತಿ ದರ (ರೂ./ಯೂನಿಟ್) ಪ್ರಸ್ತುತ	ಪ್ರಸ್ತಾಪಿತ
ಎಲ್.ಟಿ.–6ಎ: ನೀರು ಸರಬರಾಜು ಸ್ಥಾವರಗಳಿಗೆ			
ನಿಗದಿತ ಶುಲ್ಕ	ಪ್ರತಿ ಎಚ್.ಪಿ. ಗೆ 67 ಎಚ್.ಪಿ. ಒಳಗೊಂಡಂತೆ	110	160
	ಪ್ರತಿ ಎಚ್.ಪಿ. ಗೆ 60 ಎಚ್.ಪಿ. ಗಿಂತ ಮೇಲ್ಪಟ್ಟ	215	250
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್ಟಿಗೆ	5.00	6.60
ಎಲ್.ಟಿ.–6ಬಿ: ಸಾರ್ವಜನಿಕರ ಬೀದಿ ದೀಪ ಸ್ಥಾವರಗಳಿಗೆ			
ನಿಗದಿತ ಶುಲ್ಕ	ಪ್ರತಿ ಕಿ.ವ್ಯಾ.ಗೆ	125	175
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್ಟಿಗೆ	6.65	7.50
	ಎಲ್‌ಇಡಿ ಬೀದಿ ದೀಪ/ಯುನಿಟ್	5.60	7.00
ಎಲ್.ಟಿ.–6ಸಿ: ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳು			
ನಿಗದಿತ ಶುಲ್ಕ: LT	50 ಕಿ.ವ್ಯಾ. ವರೆಗೆ ಪ್ರತಿ ಕಿ.ವ್ಯಾ.ಗೆ	70	70
ನಿಗದಿತ ಶುಲ್ಕ: LT	50ಕಿ.ವ್ಯಾ. ಮೇಲ್ಪಟ್ಟು ಪ್ರತಿ ಕಿ.ವ್ಯಾ.ಗೆ	170	170
ನಿಗದಿತ ಶುಲ್ಕ: HT	ಪ್ರತಿ ಕೆ.ವಿ.ಎ. ಗೆ	200	200
ಬಳಕೆ ಶುಲ್ಕ LT/HT	ಪ್ರತಿ ಯೂನಿಟ್ಟಿಗೆ	5.00	5.00
ಎಲ್.ಟಿ.–7(ಎ): ಎಲ್ಲಾ ಉದ್ದೇಶಗಳಿಗೆ ತಾತ್ಕಾಲಿಕ ವಿದ್ಯುತ್ ಸರಬರಾಜು			
ವಿದ್ಯುತ್ ಬಳಕೆ ಶುಲ್ಕ	<67 ಎಚ್.ಪಿ. ಪ್ರತಿ ಯೂನಿಟಿಗೆ	11.20	12.00
ಪ್ರತಿ ವಾರಕ್ಕೆ ಕನಿಷ್ಠ ಮಿತಿಗೊಳಪಟ್ಟು ಪ್ರತಿ ಕಿ.ವ್ಯಾ.ಗೆ		275	300
ಎಲ್.ಟಿ.–7(ಬಿ): ಹೋರ್ಡಿಂಗ್ ಮತ್ತು ಜಾಹೀರಾತು ಫಲಕಗಳು (ಶಾಶ್ವತ ಸ್ಥಾವರಗಳು)			
ವಿದ್ಯುತ್ ಬಳಕೆ ಶುಲ್ಕ	<67 ಎಚ್.ಪಿ. ಪ್ರತಿ ಯೂನಿಟಿಗೆ	11.20	12.00
ಪ್ರತಿ ವಾರಕ್ಕೆ ಕನಿಷ್ಠ ಮಿತಿಗೊಳಪಟ್ಟು ಪ್ರತಿ ಕಿ.ವ್ಯಾ.ಗೆ		150	175
ಎಚ್.ಟಿ. ಪ್ರವರ್ಗ			
ಎಚ್.ಟಿ.–1: ನೀರು ಸರಬರಾಜು, ಚರಂಡಿ ನೀರು ಶುದ್ಧಿಕರಣ/ಪಂಪಿಂಗ್ ಸ್ಥಾವರಗಳು			
ನಿಗದಿತ ಶುಲ್ಕ	ಪ್ರತಿ ಕೆ.ವಿ.ಎ.ಗೆ.	250	350
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್ಟಿಗೆ	5.60	8.10
ಎಚ್.ಟಿ.–2ಎ: ಹೆಚ್.ಟಿ. ಕೈಗಾರಿಕೆ ಸ್ಥಾವರಗಳಿಗೆ			
ನಿಗದಿತ ಶುಲ್ಕ	ಮಾಸಿಕ ಪ್ರತಿ ಕೆ.ವಿ.ಎ.ಗೆ	265	550
ವಿದ್ಯುತ್ ಬಳಕೆ ಶುಲ್ಕ	ಮೊದಲ 1,00,000 ಯೂನಿಟ್‌ಗೆ	7.35	5.85
	ಉಳಿದ ಯೂನಿಟ್ಟುಗಳಿಗೆ	7.60	6.10
ರೈಲ್ವೆ ಟ್ರ್ಯಾಕ್ಷನ್ ಸ್ಥಾವರಗಳಿಗೆ			
ನಿಗದಿತ ಶುಲ್ಕ	ಮಾಸಿಕ ಪ್ರತಿ ಕೆ.ವಿ.ಎ.ಗೆ	275	550
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್‌ಗೆ	6.60	5.85
ಮಲೀನ ನೀರು ಶುದ್ಧೀಕರಣ ಸ್ಥಾವರಗಳಿಗೆ			
ನಿಗದಿತ ಶುಲ್ಕ	ಮಾಸಿಕ ಪ್ರತಿ ಕೆ.ವಿ.ಎ.ಗೆ	275	550
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್‌ಗೆ	7.00	5.85
ಎಚ್.ಟಿ.–2ಬಿ: ಹೆಚ್.ಟಿ. ವಾಣಿಜ್ಯ ಸ್ಥಾವರಗಳಿಗೆ			
ನಿಗದಿತ ಶುಲ್ಕ	ಮಾಸಿಕ ಪ್ರತಿ ಕೆ.ವಿ.ಎ.ಗೆ	290	425
ವಿದ್ಯುತ್ ಬಳಕೆ ಶುಲ್ಕ	ಮೊದಲ 2,00,000 ಯೂನಿಟ್‌ಗೆ	9.05	8.90
	ಉಳಿದ ಯೂನಿಟ್ಟುಗಳಿಗೆ	9.15	9.00
ಎಚ್.ಟಿ.2ಸಿ(i): ಸರ್ಕಾರಿ/ಅನುದಾನಿತ/ದತ್ತಿ ವಿದ್ಯಾ ಸಂಸ್ಥೆಗಳು/ಆಸ್ಪತ್ರೆಗಳು			
ನಿಗದಿತ ಶುಲ್ಕ	ಮಾಸಿಕ ಪ್ರತಿ ಕೆ.ವಿ.ಎ.ಗೆ	260	450
ವಿದ್ಯುತ್ ಬಳಕೆ ಶುಲ್ಕ	ಮೊದಲ 1,00,000 ಯೂನಿಟ್‌ಗೆ	7.20	7.00
	ಉಳಿದ ಯೂನಿಟ್ಟುಗಳಿಗೆ	7.60	7.40
ಎಚ್.ಟಿ.2ಸಿ(ii): ಎಚ್.ಟಿ.2ಸಿ(i)ಗೆ ಒಳಪಡದ ವಿದ್ಯಾ ಸಂಸ್ಥೆಗಳು/ಆಸ್ಪತ್ರೆಗಳು			
ನಿಗದಿತ ಶುಲ್ಕ	ಮಾಸಿಕ ಪ್ರತಿ ಕೆ.ವಿ.ಎ.ಗೆ	265	450
ವಿದ್ಯುತ್ ಬಳಕೆ ಶುಲ್ಕ	ಮೊದಲ 1,00,000 ಯೂನಿಟ್‌ಗೆ	8.20	8.00
	ಉಳಿದ ಯೂನಿಟ್ಟುಗಳಿಗೆ	8.60	8.40
ಎಚ್.ಟಿ.–3ಎ(i): ಸರ್ಕಾರಿ/ಸರ್ಕಾರಿ ಇಲಾಖೆಗಳ ಏತ ನೀರಾವರಿ ಯೋಜನೆಗಳು			
ವಿದ್ಯುತ್ ಬಳಕೆ ಶುಲ್ಕ ಪ್ರತಿ ಯೂನಿಟ್ಟಿಗೆ		3.15	6.00
ವರ್ಷಕ್ಕೆ ಕನಿಷ್ಠ ಮಿತಿಗೊಳಪಟ್ಟು ಪ್ರತಿ ಎಚ್.ಪಿ.ಗೆ.		1900	3000
ಎಚ್.ಟಿ.3ಎ(ii) : ನಗರ/ಎಕ್ಸಪ್ರೆಸ್ ಫೀಡರ್‌ಗಳಿಗೆ ಸಂಪರ್ಕಿತ ಖಾಸಗಿ ಏತ ನೀರಾವರಿ/ಸಂಘ			
ನಿಗದಿತ ಶುಲ್ಕ	ಮಾಸಿಕ ಪ್ರತಿ ಎಚ್.ಪಿ.ಗೆ.	110	300
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್‌ಗೆ	3.15	5.50
ಎಚ್.ಟಿ.3ಎ(iii) : ಎಚ್.ಟಿ.3ಎ(ii) ಗೆ ಒಳಪಡದ ಖಾಸಗಿ ಏತ ನೀರಾವರಿ/ಸಂಘಗಳು			
ನಿಗದಿತ ಶುಲ್ಕ	ಮಾಸಿಕ ಪ್ರತಿ ಎಚ್.ಪಿ.ಗೆ.	90	150
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್‌ಗೆ	3.15	5.50
ಎಚ್.ಟಿ.–3ಬಿ: ನೀರಾವರಿ/ಕೃಷಿ/ತೋಟಗಾರಿಕೆ/ನರ್ಸರಿ ಫಾರಂಗಳು/ಪ್ಲಾಂಟೇಶನಗಳು			
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್ಟಿಗೆ	5.15	5.50
ವರ್ಷಕ್ಕೆ ಕನಿಷ್ಠ ಮಿತಿಗೊಳಪಟ್ಟು ಪ್ರತಿ ಎಚ್.ಪಿ.ಗೆ.		1960	3000
ಎಚ್.ಟಿ.4: ವಸತಿ ಸಮುಚ್ಛಯಗಳು/ಕಾಲೋನಿಗಳು			
ನಿಗದಿತ ಶುಲ್ಕ	ಪ್ರತಿ ಕೆ.ವಿ.ಎ.ಗೆ ರೂ.	175	400
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್‌ಗೆ	7.05	5.50
ಎಚ್.ಟಿ.5: ಎಚ್.ಟಿ. ತಾತ್ಕಾಲಿಕ ವಿದ್ಯುತ್ ಸರಬರಾಜು 67 ಎಚ್.ಪಿ. & ಅಧಿಕ ಲೊಡ್			
ನಿಗದಿತ ಶುಲ್ಕ	ಮಂಜೂರಾದ ಒಟ್ಟು ಲೋಡ್‌ನ ಪ್ರತಿ ಎಚ್.ಪಿಗೆ	325	400
ವಿದ್ಯುತ್ ಬಳಕೆ ಶುಲ್ಕ	ಪ್ರತಿ ಯೂನಿಟ್‌ಗೆ	11.20	11.40

ಗ್ರಾಹಕರು (ಎಲ್.ಟಿ–5, ಎಲ್.ಟಿ.–6(ಸಿ) HT, ಹೆಚ್.ಟಿ.–1, ಹೆಚ್.ಟಿ.–2 (ರೈಲ್ವೆ ಟ್ರೈಕ್ಷನ್ ಹೊರತುಪಡಿಸಿ) ಕೋರಿಕೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ (ಟಿ.ಒ.ಡಿ) ಸೌಲಭ್ಯ ಪಡೆಯಬಹುದು.

ಗ್ರಾಹಕರು (ಎಲ್.ಟಿ.–3 ಮತ್ತು ಎಲ್.ಟಿ.–5) ಬೇಡಿಕೆ ಆಧಾರಿತ ವಿದ್ಯುಚ್ಛಕ್ತಿ ದರ ಐಚ್ಛಿಕದ (ಡಿಬಿಟಿ) ಸೌಲಭ್ಯ ಪಡೆಯಬಹುದು.

ಸೂಚನೆ: ಮೇಲಿನ ಶುಲ್ಕಗಳೊಂದಿಗೆ ಸರ್ಕಾರ ವಿಧಿಸಿದ/ಸಮಯ ಸಮಯಕ್ಕೆ ವಿಧಿಸಬಹುದಾದ ವಿದ್ಯುತ್ ತೆರಿಗೆಯನ್ನು ಬಿಲ್ ಜೊತೆಗೆ ಪಾವತಿಸಬೇಕಾಗುತ್ತದೆ.

ಹೆಚ್ಚಿನ ಪ್ರಸ್ತಾಪಿತ ವಿದ್ಯುತ್ ದರದ ಬಗ್ಗೆ ಜೆಸ್ಕಾಂ ವೆಬ್‌ಸೈಟ್ **https://gescom.karnataka.gov.in/**) ರಲ್ಲಿ ಮಾಹಿತಿಯನ್ನು ಪಡೆಯಬಹುದು.

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಪರವಾಗಿ
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ (ವಿದ್ಯುತ್)
ನಿಯಂತ್ರಣ ವ್ಯವಹಾರ, ನಿಗಮ ಕಛೇರಿ, ಗು.ವಿ.ಸ.ಕಂ.ನಿ. ಕಲಬುರಗಿ–585102.

ವಾ.ಸಾ.ಸಂ.ಇ/ಕಲಬುರಗಿ/1084/ಎಂ.ಸಿ.&ಎ/2022–23



❦ ಸುಭಾಷಿತ ❦

ಪುಸ್ತಕಗಳಲ್ಲಿ ಹಳೆಯವೆಂಬುವೇ ಇಲ್ಲ. ಓದಿರದ ಪುಸ್ತಕಗಳೆಲ್ಲ ಹೊಸವು; ಮತ್ತೆ ಮತ್ತೆ ಓದಬೇಕೆನ್ನುವ ಪುಸ್ತಕಗಳೆಲ್ಲ ಹೊಸವು. —ಹಾ.ಮಾ.ನಾಯಕ

ಜೋಶಿಮಠದಲ್ಲಿ ಬಿರುಕು ಎಚ್ಚರಿಕೆ ನಿರ್ಲಕ್ಷಿಸಿದ್ದರ ಪರಿಣಾಮ

ಉತ್ತರಾಖಂಡದ ಪ್ರಸಿದ್ಧ ಜೋಶಿಮಠ ಪಟ್ಟಣವು ಭೂಕುಸಿತದ ಭೀತಿ ಎದುರಿಸುತ್ತಿರುವುದು, ಅಲ್ಲಿನ ಮನೆಗಳು, ರಸ್ತೆಗಳು ಹಾಗೂ ಇತರೆಡೆಗಳಲ್ಲಿ ಭೂಮಿ ಬಿರುಕು ಬಿಟ್ಟಿರುವುದು ಆ ಪಟ್ಟಣವನ್ನು ವಾಸಕ್ಕೆ ಅಸುರಕ್ಷಿತವಾಗಿಸಿದೆ. ಅಲ್ಲಿನ ನಿವಾಸಿಗಳಲ್ಲಿ ಭಯ ಮನೆ ಮಾಡಿದೆ. ಅಲ್ಲಿನ ಹಲವು ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯಲಾಗಿದೆ, ಇನ್ನೂ ಹಲವರನ್ನು ಸ್ಥಳಾಂತರ ಮಾಡಬೇಕಿದೆ. ಜೋಶಿಮಠವು ಹಲವು ಧಾರ್ಮಿಕ ಕೇಂದ್ರಗಳಿಗೆ ಪ್ರವೇಶದ್ವಾರ ಇದ್ದಂತೆ. ಇಲ್ಲಿಂದ ಚಾರಣ ಹೊರಡುವುದೂ ಇದೆ. ಚೀನಾ ಗಡಿಗೆ ಹತ್ತಿರದಲ್ಲಿರುವ ಈ ಪಟ್ಟಣವು ಆಯಕಟ್ಟಿನ ಸ್ಥಳವೂ ಹೌದು. ಪಟ್ಟಣದಲ್ಲಿ ಈಗ ಮೂಡಿರುವ ಭೀತಿಯು ಇದ್ದಕ್ಕಿದ್ದಂತೆ ಬಂದೆರಗಿಲ್ಲ. ಪರಿಸ್ಥಿತಿ ಹೀಗಾಗಬಹುದು ಎಂಬುದನ್ನು ದಶಕಗಳ ಹಿಂದೆಯೇ ಹೇಳಲಾಗಿತ್ತು. ಈ ಪ್ರದೇಶದಲ್ಲಿ ಭಾರಿ ನಿರ್ಮಾಣ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಅಪಾಯ ಎದುರಾಗುತ್ತದೆ ಎಂಬುದನ್ನು ವಿಜ್ಞಾನಿಗಳು ಮತ್ತು ಭೂಗರ್ಭ ಶಾಸ್ತ್ರಜ್ಞರು ಹಿಂದಿನಿಂದಲೂ ಹೇಳುತ್ತ ಬಂದಿದ್ದಾರೆ. 1976ರಲ್ಲಿ ರಚನೆಯಾಗಿದ್ದ ಮಿಶ್ರಾ ಆಯೋಗವು ಇಂತಹ ನಿರ್ಮಾಣ ಚಟುವಟಿಕೆಗಳಿಗೆ ನಿಷೇಧ ಹೇರುವಂತೆ ಶಿಫಾರಸು ಮಾಡಿತ್ತು. ಆದರೆ ಎಚ್ಚರಿಕೆಗಳು ಮತ್ತು ಶಿಫಾರಸುಗಳನ್ನು ಆಳುವವರು ಕಿವಿಗೆ ಹಾಕಿಕೊಳ್ಳಲಿಲ್ಲ. ನಿರ್ಮಾಣ ಚಟುವಟಿಕೆಗಳು ಎಗ್ಗಿಲ್ಲದೆ ಮುಂದುವರಿದವು. ಅವು ವೇಗ ಪಡೆದುಕೊಂಡವು ಸಹ. ರಾಷ್ಟ್ರೀಯ ಹೆದ್ದಾರಿಯ ಅಗಲವನ್ನು ಹೆಚ್ಚಿಸಲಾಯಿತು. ವಿದ್ಯುತ್ ಉತ್ಪಾದನಾ ಯೋಜನೆಗಳು ಅನುಷ್ಠಾನಕ್ಕೆ ಬಂದವು. 520 ಮೆಗಾವಾಟ್ ಸಾಮರ್ಥ್ಯದ ತಪೋವನ ವಿದ್ಯುತ್ ಉತ್ಪಾದನಾ ಯೋಜನೆಗಾಗಿ ಎರಡೂವರೆ ಕಿಲೋಮೀಟರ್ ಉದ್ದದ ಸುರಂಗವನ್ನು ಕೊರೆಯಲಾಯಿತು.

ಜೋಶಿಮಠದಲ್ಲಿ ನಡೆಯುತ್ತಿರುವುದನ್ನು ಒಂದು ಎಚ್ಚರಿಕೆಯ ಗಂಟೆ ಎಂದು ತಿಳಿದು ದೇಶದ ಇತರ ಪ್ರದೇಶಗಳ ಜನರೂ ಪಾಠ ಕಲಿಯಬೇಕಿದೆ

ಜೋಶಿಮಠ ಹಾಗೂ ಅದರ ಸುತ್ತಲಿನ ಪ್ರದೇಶವು ಹಿಮಾಲಯ ಪರ್ವತ ಶ್ರೇಣಿಯ ಪದತಲದಲ್ಲಿ ಇದೆ. ಹಿಮಾಲಯ ಪರ್ವತ ಶ್ರೇಣಿಯು ಕಾಲಾನುಕ್ರಮಣಿಕೆಯಲ್ಲಿ ವಿಶ್ವದ ಇತರ ಪರ್ವತಶ್ರೇಣಿಗಳಿಗಿಂತ ತೀರಾ ಈಚಿನದು. ಅಲ್ಲದೆ, ಅತ್ಯಂತ ಸೂಕ್ಷ್ಮವಾಗಿರುವುದೂ ಹೌದು. ಪಟ್ಟಣ ಹಾಗೂ ಅದರ ಸುತ್ತಲಿನ ಪ್ರದೇಶವು ಅಪಾಯಕಾರಿ ಮೇಲ್ಮೈ ಮೇಲೆ ನಿರ್ಮಾಣವಾಗಿದೆ. ಈ ಪ್ರದೇಶದಲ್ಲಿ ನಿರ್ಮಾಣ ಚಟುವಟಿಕೆಗಳ ಮೇಲೆ ನಿಯಂತ್ರಣ ಹೇರಲಿಲ್ಲ. ಈಗ ಜೋಶಿಮಠವು ಕುಸಿತದ ಭೀತಿ ಎದುರಿಸುತ್ತಿರುವುದಕ್ಕೆ ಸಂಪೂರ್ಣ ಕಾರಣ ಸಣ್ಣ-ಪುಟ್ಟ ನಿರ್ಮಾಣ ಕಾಮಗಾರಿಗಳಲ್ಲ. ಬದಲಿಗೆ, ಸೂಕ್ಷ್ಮ ಪರ್ವತ ಪ್ರದೇಶದಲ್ಲಿ, ಇಳಿಜಾರುಗಳಲ್ಲಿ ನೀರಿನ ಸಹಜ ಹರಿವಿಗೆ ಅಡ್ಡಿಯಾಗುವ ರೀತಿಯಲ್ಲಿ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲಾಯಿತು. ಬೃಹತ್ ಪ್ರಮಾಣದ ಜಲವಿದ್ಯುತ್ ಉತ್ಪಾದನಾ ಯೋಜನೆಗಳು ಹಾಗೂ ಚಾರ್ ಧಾಮ್ ಹೆದ್ದಾರಿ ಯೋಜನೆಯು ಅಲ್ಲಿನ ಪ್ರದೇಶದ ಧಾರಣಾ ಸಾಮರ್ಥ್ಯಕ್ಕಿಂತ ಹೆಚ್ಚಿನ ಒತ್ತಡವನ್ನು ಸೃಷ್ಟಿಸಿರಬಹುದು. ನಿಸರ್ಗದ ಮೇಲಿನ ಇಂತಹ ಆಕ್ರಮಣಗಳ ಬಗ್ಗೆ ಪರಿಸರವಾದಿಗಳು ವ್ಯಕ್ತಪಡಿಸಿದ ಕಳವಳವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಪಟ್ಟಣವು ಭೂಕುಸಿತ ಆಗಬಹುದಾದ ಮೇಲ್ಮೈನಲ್ಲಿ ಇದೆ ಎಂದು ರಾಜ್ಯ ಸರ್ಕಾರ ನಡೆಸಿದ ಭೂತಾಂತ್ರಿಕ ಸಮೀಕ್ಷೆಯೊಂದು ಹೇಳಿತ್ತು. ಈ ಪ್ರದೇಶದಲ್ಲಿ ಪ್ರವಾಹ ಆಗಿದೆ, ಭಾರಿ ಮಳೆ ಸುರಿದಿದೆ, ಈಚಿನ ವರ್ಷಗಳಲ್ಲಿ ಹಲವು ಬಾರಿ ಅಲ್ಲಲ್ಲಿ ಭೂಕುಸಿತ ನಡೆದಿದೆ. ಚಮೋಲಿಯಿಂದ ಜೋಶಿಮಠದವರೆಗಿನ ಪ್ರದೇಶವು ದುರಂತಗಳಿಗೆ ಸಾಕ್ಷಿಯಾಗಿದೆ.

ಈಗ ಪಟ್ಟಣವನ್ನು ಹಾಗೂ ಅಲ್ಲಿನ ಜನರ ಜೀವವನ್ನು ಉಳಿಸಲು ಪ್ರಯತ್ನಗಳು ನಡೆದಿವೆ. ಪ್ರಧಾನಿ ಕಚೇರಿಯು ಈ ವಿಚಾರವಾಗಿ ಮುಂದಡಿ ಇರಿಸಿದೆ. ಅಪಾಯ ಸಂಭವಿಸಬಹುದಾದ ಪ್ರದೇಶಗಳಲ್ಲಿ ಇರುವ ಜನರನ್ನು ತಕ್ಷಣ ಬೇರೆಡೆ ಸ್ಥಳಾಂತರಿಸಬೇಕಿದೆ. ಈ ಪಟ್ಟಣವನ್ನು ಉಳಿಸುವುದು ಬಹಳ ದೊಡ್ಡ ಸವಾಲಾಗಬಹುದು. ಜೋಶಿಮಠವು ಮುಂದೆ ಮನುಷ್ಯವಾಸಕ್ಕೆ ಯೋಗ್ಯವಾಗಲಿದೆಯೇ ಎಂಬುದು ಸ್ಪಷ್ಟವಿಲ್ಲ. ಪಟ್ಟಣದ ಒಳಚರಂಡಿ ವ್ಯವಸ್ಥೆಯನ್ನು ಪುನರ್‌ ರೂಪಿಸಬೇಕು, ಮಳೆ ನೀರು ಹರಿದುಹೋಗುವ ಜಾಗಗಳನ್ನು ಮತ್ತೆ ಗುರುತಿಸುವ ಕೆಲಸ ಆಗಬೇಕು, ವಿದ್ಯುತ್ ಉತ್ಪಾದನಾ ಯೋಜನೆಯನ್ನು ಕೈಬಿಡಬೇಕು ಎಂಬ ಬೇಡಿಕೆಗಳು ಇವೆ. ಜೋಶಿಮಠದಲ್ಲಿ ಆಗುತ್ತಿರುವುದು ಒಂದು ಎಚ್ಚರಿಕೆಯ ಕರೆಗಂಟೆ. ಇಲ್ಲಿ ನಡೆಯುತ್ತಿರುವುದನ್ನು ಕಂಡು ದೇಶದ ಇತರ ಪ್ರದೇಶಗಳ ಜನರೂ ಪಾಠ ಕಲಿಯಬೇಕಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಚಾರ್ ಧಾಮ್ ಹೆದ್ದಾರಿ ಯೋಜನೆಯ ಅನುಷ್ಠಾನವನ್ನು ಮುಂದುವರಿಸಿದ್ದು ನಿಸರ್ಗದ ಮೇಲೆ ಭಾರಿ ಹೊರೆಯಾಗಿ ಪರಿಣಮಿಸಿರುವ ಸಾಧ್ಯತೆಯೂ ಇದೆ. ಈ ಯೋಜನೆಯನ್ನು ವಿರೋಧಿಸಿದ್ದವರನ್ನು ರಾಷ್ಟ್ರ ವಿರೋಧಿಗಳು ಎಂದು ಕರೆಯಲಾಗಿತ್ತು. ಸರ್ಕಾರಗಳು ತುಸು ಸಾವಧಾನವಾಗಿ ಆಲೋಚಿಸಬೇಕು, ಅಭಿವೃದ್ಧಿಯ ಪರಿಕಲ್ಪನೆಗಳ ಬಗ್ಗೆ ಮರು ಚಿಂತನೆ ನಡೆಸಬೇಕು.

ದಿನದ ಟ್ವೀಟ್

ಕಾಲದ ಮಹಿಮೆ!



ಸಾಹಿತ್ಯ ಸಮ್ಮೇಳನದಲ್ಲಿ ಜನವೋ ಜನ. ಅಡಿಗಡಿಗೆ ತಡೆದು ನಿಲ್ಲಿಸಿ ಫೋಟೊ ತೆಗೆಸಿಕೊಳ್ಳುವ ಅಭಿಮಾನಿಗಳು. ಪರವಾಗಿಲ್ಲ, ಕವಿಗಳಿಗೂ ಇಷ್ಟೊಂದು ಜನಪ್ರಿಯತೆ ಇದೆ ಅಂತ ಖುಷಿಪಡುತ್ತಿರುವಾಗ ಸೆಲ್ಫಿ ತೆಗೆದುಕೊಂಡ ಬಳಿಕ ಒಬ್ಬ ಹುಡುಗ 'ನಿಮ್ಮ ಹೆಸರೇನು?' ಅಂತ ಕೇಳಿದ!

ಡುಂಡಿರಾಜ್ ಎಚ್., ಕವಿ

ಕಿಡಿನುಡಿ



ನನ್ನ ಸ್ನೇಹಿತೆಯೊಬ್ಬಳು ತನ್ನ ಸಂಗಾತಿ (ಗೆಳೆಯ) ತನ್ನನ್ನು ಹೇಗೆ ಹೀನಾಯವಾಗಿ ನಡೆಸಿಕೊಳ್ಳುತ್ತಾನೆ, ಅಗೌರವ ತೋರುತ್ತಾನೆ ಮತ್ತು ಕಡೆಗಣಿಸುತ್ತಾನೆ ಎಂದೆಲ್ಲಾ ಹೇಳಿಕೊಂಡು ಗೋಳಾಡುತ್ತಾಳೆ. ಮರುದಿನ 'ಈ ವ್ಯಕ್ತಿ ನನಗೆ ಮನೆಯ ಸದಸ್ಯನಂತೆ ಭಾಸವಾಗುತ್ತಾನೆ' ಎಂಬಂತಹ ಹೇಳಿಕೆಗಳನ್ನು ಪೋಸ್ಟ್ ಮಾಡತೊಡಗುತ್ತಾಳೆ! ನಿಮ್ಮ ಘನತೆಯನ್ನು ಕಾಪಾಡಿಕೊಳ್ಳಲು ನಿಮಗೇ ಸಾಧ್ಯವಾಗದಿದ್ದರೆ ಬೇರೆ ಯಾರೂ ಆ ಕೆಲಸವನ್ನು ನಿಮಗಾಗಿ ಮಾಡಿಕೊಡುವುದಿಲ್ಲ. ಹಾಗಿದ್ದಮೇಲೆ ಅಳುವುದನ್ನು ನಿಲ್ಲಿಸಿ.

ಅನಂತಿಕಾ ಶರ್ಮಾ, ಎಂಬಿಬಿಎಸ್ ವಿದ್ಯಾರ್ಥಿನಿ

25 ವರ್ಷಗಳ ಹಿಂದೆ

ಶನಿವಾರ, 10-1-1998

● **ಬಿಜೆಪಿ ಜೊತೆ ಲೋಕಶಕ್ತಿ ಚುನಾವಣಾ ಹೊಂದಾಣಿಕೆ**

ನವದೆಹಲಿ, ಜ. 9– ಬರುವ ಲೋಕಸಭೆ ಚುನಾವಣೆಯಲ್ಲಿ ಹೊಂದಾಣಿಕೆಗಾಗಿ ಹುಡುಕಾಟ ನಡೆಸಿ ಗೊಂದಲದಲ್ಲಿ ಸಿಕ್ಕಿದ್ದ ಲೋಕಶಕ್ತಿಯ ನಾಯಕ ರಾಮಕೃಷ್ಣ ಹೆಗಡೆ ಅವರು ಕೊನೆಗೂ ಭಾರತೀಯ ಜನತಾ ಪಕ್ಷದ ಜತೆ ರಾಷ್ಟ್ರೀಯ ಮಟ್ಟದಲ್ಲಿ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳುವ ನಿರ್ಧಾರವನ್ನು ಇಂದು ಅಧಿಕೃತವಾಗಿ ಪ್ರಕಟಿಸಿದರು.

ಬಿಜೆಪಿಯ ಅಧ್ಯಕ್ಷ ಲಾಲ್ ಕೃಷ್ಣ ಅಡ್ವಾಣಿ ಮತ್ತು ಅಟಲ್ ಬಿಹಾರಿ ವಾಜಪೇಯಿ ಅವರ ಜತೆ ಅಧಿಕೃತವಾಗಿ ಮೊದಲ ಬಾರಿಗೆ ಚರ್ಚಿಸಿದ ಮೇಲೆ ಈ ತೀರ್ಮಾನ ಕೈಗೊಳ್ಳಲಾಯಿತು ಎಂದು ಅವರು ಹೇಳಿದರು.

● **ದೆಹಲಿ: ಬಾಂಬ್ ಸ್ಫೋಟ 48 ಮಂದಿಗೆ ಗಾಯ**

ನವದೆಹಲಿ, ಜ. 9 (ಪಿಟಿಐ, ಯುಎನ್ಐ)– ಇಲ್ಲಿನ ಪೊಲೀಸ್ ಮುಖ್ಯ ಕಚೇರಿಯ ಮುಂದೆ ಇಂದು ಮಧ್ಯಾಹ್ನ ಊಟದ ಸಮಯದಲ್ಲಿ ಸಂಭವಿಸಿದ ಶಕ್ತಿಶಾಲಿ ಬಾಂಬ್ ಸ್ಫೋಟದಲ್ಲಿ ಒಟ್ಟು 48 ಮಂದಿ ಗಾಯಗೊಂಡಿದ್ದಾರೆ. ಅವರಲ್ಲಿ ಹಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಿರುರಸ್ತೆಯೊಂದರ ಮಾರುಕಟ್ಟೆ ಪ್ರದೇಶದಲ್ಲಿ ಬಾಂಬ್ ಸ್ಫೋಟಗೊಂಡಿತು. ಮಣ್ಣಿನ ಮಡಕೆಯೊಂದರಲ್ಲಿ ಬಾಂಬ್ ಅನ್ನು ಇಡಲಾಗಿತ್ತು ಎಂದು ದೆಹಲಿಯ ಉಪ ಪೊಲೀಸ್ ಕಮಿಷನರ್ ಬಿ.ಎಸ್. ಬೋಲಾ ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 10-1-1973

● **ಕೃಷ್ಣಾ ಯೋಜನೆ ಕುರಿತು ಕೇಂದ್ರದ ಪತ್ರ ಬಂದಿಲ್ಲ**

ಬೆಂಗಳೂರು, ಜ. 9– ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ತೆಗೆದುಕೊಳ್ಳಬೇಕೆಂಬ ರಾಜ್ಯ ಸರ್ಕಾರದ ಕೋರಿಕೆ ಇನ್ನೂ ಕೇಂದ್ರದ ಪರಿಶೀಲನೆ ಹಂತದಲ್ಲಿದ್ದು, ಈವರೆಗೆ ಉತ್ತರ ಬಂದಿಲ್ಲವೆಂದು ಭಾರಿ ನೀರಾವರಿ ರಾಜ್ಯ ಸಚಿವ ಶ್ರೀ ಎಚ್.ಎನ್. ನಂಜೇಗೌಡ ಅವರು ಇಂದು ವರದಿಗಾರರಿಗೆ ತಿಳಿಸಿದರು.

ಪ್ರತೀ ರಾಜ್ಯದಲ್ಲಿ ಒಂದು ಭಾರಿ ನೀರಾವರಿ ಅಥವಾ ಕೈಗಾರಿಕಾ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಕಾರ್ಯಗತ ಮಾಡುವ ಮನೋಭಾವ ಕೇಂದ್ರ ಸರ್ಕಾರಕ್ಕೆ ಇದ್ದಂತೆ ಕಾಣುವುದೆಂದು ಅವರು ವಿವರಿಸಿದರು.

● **'ಭಾರತದಲ್ಲಿ ಬೆಂಕಿ ಹೊತ್ತಿ ಉರಿಯುತ್ತಿದೆ'**

ಬೆಂಗಳೂರು, ಜ. 9– 'ಭಾರತದಲ್ಲಿ ಬೆಂಕಿ ಹೊತ್ತಿ ಉರಿಯುತ್ತಿದೆ'– ವಿಶ್ವದ ಅಗ್ರಗಣ್ಯ ದಾರ್ಶನಿಕರಲ್ಲಿ ಒಬ್ಬರಾದ ಶ್ರೀ ಜೆ. ಕೃಷ್ಣಮೂರ್ತಿ ಅವರು ಕಂಡಿರುವ 1973ರ ಭಾರತದ ಚಿತ್ರವಿದು.

'ಬೆಂಕಿ ಹತ್ತಿ ಉರಿಯುತ್ತಿದೆ. ರಾಜಕೀಯವಾಗಿ, ನೈತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಭಾರತದಲ್ಲಿ ಉರಿಯುತ್ತಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಅಧೋಗತಿಗೆ ಇಳಿಯುತ್ತಿರುವ ಸಂಕಷ್ಟ ಕಾಲದಲ್ಲಿ ಭಾರತ ಸಾಗುತ್ತಿದೆ' ಎಂದು ಅವರು ಭಯ ವ್ಯಕ್ತಪಡಿಸಿದರು.

ಸಮಾಜದ ಸಂಕಟಗಳಿಗೆ ಸ್ಪಂದಿಸುವಲ್ಲಿ ಸನ್ಯಾಸದ ಸಾರ್ಥಕತೆ ಎನ್ನುವ ಜೀವಪರ ತತ್ವ

ವಿಲಕ್ಷಣ ಕಾಲಕ್ಕೊಂದು 'ವಿರಾಗಿ' ಪಥ್ಯ

ಪಡಸಾಲೆ

ರಘುನಾಥ ಚ.ಹ.

ಧಾರ್ಮಿಕ ಸಂಸ್ಥೆಗಳು ಹಾಗೂ ಸನ್ಯಾಸಿಗಳು ಹೇಗಿರಬಾರದು ಎನ್ನುವುದಕ್ಕೆ ನಿದರ್ಶನಗಳನ್ನು ಒದಗಿಸಲು ಈ ಹೊತ್ತಿನ ಮಠಗಳು ಹಾಗೂ ಮಠಾಧೀಶರು ಪೈಪೋಟಿ ನಡೆಸುತ್ತಿರುವ ಸಂದರ್ಭದಲ್ಲಿ, ಮಠ-ಮಠಾಧೀಶರು ಹೇಗಿರಬೇಕು ಎನ್ನುವುದರ ಮಾದರಿಯೊಂದನ್ನು ಬಿ.ಎಸ್. ಲಿಂಗದೇವರು ನಿರ್ದೇಶನದ 'ವಿರಾಟಪುರ ವಿರಾಗಿ' ಸಿನಿಮಾ ನೆನಪಿಸುತ್ತಿದೆ. ಹಾನಗಲ್‌ನ ವಿರಕ್ತ ಮಠದ ಕುಮಾರಸ್ವಾಮಿಗಳ ಜೀವನವೃತ್ತಾಂತದ ನಿರೂಪಣೆಯಾದ ಈ ಸಿನಿಮಾ ಕಥನ, ಭಾರತದ ಅನನ್ಯತೆಯಾದ ಬಹುತ್ವದ ದರ್ಶನವನ್ನೂ, ಬಸವ, ಗಾಂಧಿ ಮಾರ್ಗಗಳಲ್ಲಿನ ನಡಿಗೆಯನ್ನೂ ಪ್ರತಿಪಾದಿಸುತ್ತದೆ. ವರ್ತಮಾನದ ಬಹುತೇಕ ಸ್ವಾಮೀಜಿಗಳು ಧರ್ಮ-ರಕ್ಷಣೆಯ ಯೋಧರಂತೆ ವೀರಾವೇಶದ ಪೋಷಾಕು ತೊಟ್ಟುಕೊಂಡಿರುವಾಗ, ಜನಸಾಮಾನ್ಯರ ಕಷ್ಟಗಳಿಗೆ ಮರುಗುವ ಹಾನಗಲ್ ಸ್ವಾಮೀಜಿಯ ಕಥನ ಆಪ್ತವೂ ಹೌದು, ಈ ಹೊತ್ತಿಗೆ ಅಗತ್ಯವಾದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪಥ್ಯವೂ ಹೌದು.

ಕುಮಾರಸ್ವಾಮಿ ಅವರ ಬದುಕಿನ ಕಥನ ಗಾಂಧೀಜಿ ಅವರನ್ನು ನೆನಪಿಸುತ್ತದೆ. ದಕ್ಷಿಣ ಆಫ್ರಿಕಾದಲ್ಲಿನ ಪ್ಲೇಗ್ ಪೀಡಿತರ ಬಿಡಾರಗಳಲ್ಲಿ, ಗಾಂಧೀಜಿ ಜೀವದ ಹಂಗು ತೊರೆದು ರೋಗಿಗಳ ಶುಶ್ರೂಷೆ ಮಾಡುತ್ತಾರೆ. ಅದೇರೀತಿ, ಊರಿನಲ್ಲಿ ಕಾಲರಾ ಕಾಣಿಸಿಕೊಂಡಾಗ ಕುಮಾರಸ್ವಾಮಿಗಳು ಬಾಧೆಗೊಳಗಾದವರಿಗೆ ಚಿಕಿತ್ಸೆ ನೀಡುತ್ತಾರೆ. ಗಾಂಧಿಯವರ ಆಶ್ರಮ ಎಲ್ಲ ವರ್ಗದವರಿಗೂ ಮುಕ್ತವಾಗಿದ್ದಂತೆ, ಕುಮಾರಸ್ವಾಮಿ ಅವರು ಕೂಡ ತಮ್ಮ ಮಠವನ್ನು ಎಲ್ಲರಿಗೂ ಮುಕ್ತವಾಗಿರಿಸಿದ್ದರು. ಗಾಂಧಿಯವರ ಆಶ್ರಮ ಸಮ ಸಮಾಜದ ಪ್ರಯೋಗಶಾಲೆ ಆಗಿದ್ದಂತೆ, ಕುಮಾರಸ್ವಾಮಿಗಳ ಮಠ ಹಾಗೂ ವಿದ್ಯಾಮಂದಿರಗಳು ಸಮಾನ ಅವಕಾಶಗಳನ್ನು ಒದಗಿಸುವ ಹಂಬಲ ಹೊಂದಿದ್ದವು.

ಗಾಂಧೀಜಿ ತಮ್ಮ ಆಶ್ರಮದಲ್ಲಿ ಅಸ್ಪೃಶ್ಯರಿಗೆ ಆಶ್ರಯ ಕಲ್ಪಿಸಿದ್ದನ್ನು ವಿರೋಧಿಸಿ, ಅವರ ಆಶ್ರಮಕ್ಕೆ ಬರುತ್ತಿದ್ದ ನೆರವು ನಿಂತುಹೋಗುತ್ತದೆ. ಆಶ್ರಮ ಮುಚ್ಚುವ ಸಂದರ್ಭ ತಲೆದೋರಿ, ಅಪರಿಚಿತ ವ್ಯಕ್ತಿಯೊಬ್ಬರು ಉದಾರ ನೆರವು ನೀಡಿ ಗಾಂಧಿಯವರನ್ನು ಧರ್ಮ-ಸಂಕಟದಿಂದ ಪಾರುಮಾಡುತ್ತಾರೆ. ಅಂತಹುದೇ ಸನ್ನಿವೇಶ ಸಿನಿಮಾದಲ್ಲೂ ಇದೆ. ಭೀಕರ ಬರ ತಲೆದೋರಿ, ಮಠದಲ್ಲಿನ ಸಂಪನ್ಮೂಲಗಳು ಬರಿದಾಗಿ, 'ಮುಂದೇನು?' ಎನ್ನುವ ಪ್ರಶ್ನೆಗೆ ಉತ್ತರ ಕಾಣದೆ ಸ್ವಾಮೀಜಿ ತೊಳಲಾಡುತ್ತಿರುವಾಗ, ವ್ಯಕ್ತಿಯೊಬ್ಬ ಆರ್ಥಿಕ ನೆರವು ನೀಡುತ್ತಾನೆ. ಗಾಂಧಿ ಆಶ್ರಮದೊಂದಿಗಿನ ಹೋಲಿಕೆಯಾಚೆಗೂ ಈ ಪ್ರಸಂಗಕ್ಕೆ ಮಹತ್ವವಿದೆ. ಬರದ ಸಂದರ್ಭದಲ್ಲಿ ಮಠದ ದಾಸೋಹಕ್ಕೆ ನೆರವಾಗಲೆಂದು ಆ ವ್ಯಕ್ತಿ ತನ್ನ ಪಿತ್ರಾರ್ಜಿತ ಏಳು ಎಕರೆ ಭೂಮಿಯನ್ನು ಮಾರಾಟ ಮಾಡಿರುತ್ತಾನೆ. ಮಠಕ್ಕೆ ಒಳ್ಳೆಯ ದಿನಗಳು ಮರಳಿದ ನಂತರ, ಆ ವ್ಯಕ್ತಿಯ ಮನೆಗೆ ಹೋಗಿ ಹಣ ಹಿಂದಿರುಗಿಸುವ ಸ್ವಾಮೀಜಿ, ಮಾರಾಟ ಮಾಡಿದ ಭೂಮಿಯನ್ನು ಮರಳಿ ಖರೀದಿಸುವಂತೆ ಹೇಳುತ್ತಾರೆ. ಹಾನಗಲ್ ಮಠದ ಪರಂಪರೆ ಎಷ್ಟು ಘನವಾದದ್ದು ಎಂದು ಹೇಳುವುದಕ್ಕೆ ಇದೊಂದು ಸನ್ನಿವೇಶ ಸಾಕು. ಈ ಸನ್ನಿವೇಶ, ಕುಮಾರಸ್ವಾಮಿಗಳ ವ್ಯಕ್ತಿತ್ವದ ಚೆಲುವನ್ನಷ್ಟೇ ಕಾಣಿಸುವುದಿಲ್ಲ; ಇಂದಿನ ಸರ್ಕಾರಿ ಪೋಷಿತ ಮಠಗಳ ದಾಹಕ್ಕೂ ಕನ್ನಡಿ ಹಿಡಿಯುತ್ತದೆ.

ಸ್ವಾಮೀಜಿಯ ಜೀವನವೃತ್ತಾಂತವಾಗಿದ್ದರೂ ಲಿಂಗದೇವರು ಅವರ ಸಿನಿಮಾ ಯಾವ ಸಂದರ್ಭದಲ್ಲೂ ಪವಾಡದ ಮೊರೆಹೋಗುವುದಿಲ್ಲ. ಕುಮಾರಸ್ವಾಮಿ ಅವರನ್ನು ದೈವವನ್ನಾಗಿಸದೆ, ಮನುಷ್ಯಮಾತ್ರರನ್ನಾಗಿ ಚಿತ್ರಿಸಿರುವುದು ಸಿನಿಮಾದ ಅಗ್ಗಳಿಕೆ. ಚಿಕಿತ್ಸೆಯ ನಂತರವೂ ಕಾಲರಾ ತೀವ್ರತೆಯಿಂದ ಜನ ಸಾಯುವಾಗ ಸ್ವಾಮೀಜಿ ಸಂಕಟಪಡುತ್ತಾರೆ. ಬರದ ದವಡೆಗೆ ಸಿಲುಕಿ ಜನ ಹಸಿವಿನಿಂದ ಒದ್ದಾಡುವಾಗ, ಜಾನುವಾರುಗಳು ನೀರು-ಮೇವಿಲ್ಲದೆ ಸಾಯುವಾಗ ಅಸಹಾಯಕರಾಗಿ ಚಡಪಡಿಸುತ್ತಾರೆ. ಹೀಗೆ ನೋವಿಗೆ ಮಿಡಿಯುವ ಭಾವತೀವ್ರತೆ ಮತ್ತು ನೋವನ್ನು ಪರಿಹರಿಸಲಾಗದ ಅಸಹಾಯಕತೆ, ವಿರಾಗದ ವ್ಯಾಖ್ಯಾನವನ್ನೇ ಬದಲಿಸಲು ಒತ್ತಾಯಿಸುವಂತಿದೆ. ವಿರಾಗವೆಂದರೆ ಸಮಾಜದ ತವಕತಲ್ಲಣಗಳಿಗೆ ಕುರುಡಾಗುವುದಲ್ಲ; ಸಮಾಜದ ಸಂಕಟಗಳಿಗೆ ಸ್ಪಂದಿಸುವಲ್ಲಿ ಸನ್ಯಾಸದ ಸಾರ್ಥಕತೆಯಿದೆ ಎನ್ನುವುದನ್ನು ಕುಮಾರಸ್ವಾಮಿಗಳು ತಮ್ಮ ಬದುಕಿನುದ್ದಕ್ಕೂ ಸಾಧಿಸಿ ತೋರಿಸಿದವರು. 'ಮನುಷ್ಯ ಮಹಾದೇವ ಆಗೋದು ಬೇಡ. ಮನುಷ್ಯನಾಗಿದ್ದರೆ ಸಾಕು. ಭೂಮಿ ಕೈಲಾಸ ಆಗೋದು ಬೇಡ. ಕಲ್ಯಾಣ ಆದರೆ ಸಾಕು' ಎನ್ನುವ ಮಾತುಗಳ ಹಿನ್ನೆಲೆಯಲ್ಲಿರುವುದು ಒಳಿತನ್ನು ಕೇಂದ್ರವಾಗಿಸಿಕೊಂಡ ಅಪ್ಪಟ ಕರ್ಮಸಿದ್ಧಾಂತ.

ಸ್ವಾಮೀಜಿಯೊಬ್ಬರ ಜೀವನವೃತ್ತಾಂತವನ್ನಾಗಿಯಷ್ಟೇ ನೋಡಿದರೆ, 'ವಿರಾಟಪುರ ವಿರಾಗಿ' ಸಿನಿಮಾ ಅಷ್ಟೇನೂ ಮಹತ್ವದ್ದೆನ್ನಿಸುವುದಿಲ್ಲ. ನೂರೈವತ್ತು ವರ್ಷಗಳ ಹಿಂದೆ ಜೀವಿಸಿದ್ದ ಸ್ವಾಮೀಜಿಯ ಬದುಕಿನ ಸಂಗತಿಗಳಲ್ಲಿ ನಮ್ಮ ಕಾಲದ ವಾಸ್ತವಗಳಿಗೆ ಪ್ರತಿಕ್ರಿಯೆ ಇರುವ ಕಾರಣದಿಂದಲೇ ಈ ಸಿನಿಮಾ ಮಹತ್ವ ಪಡೆದುಕೊಳ್ಳುತ್ತದೆ. ಕಥಾನಾಯಕನ ಬೆನ್ನಿಗೆ ಸಮುದಾಯದ ಪ್ರಭಾವಳಿಯಿದ್ದರೂ, ಅಂತಿಮವಾಗಿ ಈ ಸಿನಿಮಾ ಪ್ರತಿಪಾದಿಸುವುದು ವಿಶ್ವಮಾನವ ಸಂದೇಶವನ್ನು.

ಕುಮಾರಸ್ವಾಮಿಗಳ ಜೀವನಮಾರ್ಗ ಮೂರು ಕಾರಣಗಳಿಂದಾಗಿ ಎಲ್ಲ ಕಾಲಕ್ಕೂ ಮಾದರಿಯಾದುದು. ಜನರನ್ನು ತಲುಪಲು ಸ್ವಾಮೀಜಿ ಆರಿಸಿಕೊಂಡ ಅನ್ನ ಹಾಗೂ ಅರಿವಿನ ದಾರಿ, ಮೊದಲೆರಡು ಕಾರಣಗಳು. ಮೂರನೆಯದು, ತಾನು ನೆಚ್ಚಿದ ದಾರಿಗಳಲ್ಲಿ ಸಾಗಲು ಅನುಸರಿಸಿದ ಜಾತ್ಯತೀತ ಮನೋಧರ್ಮ. ಹೊಟ್ಟೆಯ ಹಸಿವು ಹಾಗೂ ಮನಸಿನ ಹಸಿವು – ಎರಡನ್ನೂ ತಣಿಸುವ ನಿಟ್ಟಿನಲ್ಲಿ ಸ್ವಾಮೀಜಿ ತಮ್ಮ ಮಠವನ್ನು ಸಜ್ಜುಗೊಳಿಸಿದ್ದರು. ಹಸಿದು ಬಂದವರ ಜಾತಿ ಕೇಳದೆ ಅನ್ನದಾಸೋಹ ನಡೆಸಿದಂತೆ, ಅಕ್ಷರದ ಹಸಿವುಳ್ಳ ಎಲ್ಲ ಜಾತಿಯವರಿಗೂ ಮಠ ಪೋಷಿಸುತ್ತಿದ್ದ ವಿದ್ಯಾಸಂಸ್ಥೆಗಳಲ್ಲಿ ಕಲಿಯಲು ಅವಕಾಶ ಕಲ್ಪಿಸಿದರು. ಮನಸ್ಸು ಪಕ್ವವಾಗುವುದರೊಂದಿಗೆ ದೇಹ ದೃಢವಾಗಬೇಕು ಎನ್ನುವ ಉದ್ದೇಶದಿಂದ, ಯೋಗದ ಕಲಿಕೆಗೆ ಒತ್ತುನೀಡಿದರು. ಗೋಶಾಲೆ ತೆರೆದರು. ಕಾಯಕದಿಂದ ದೂರವಾದ ಜ್ಞಾನಮಾರ್ಗದ ಬಗ್ಗೆ ಅವರಿಗೆ ನೆಚ್ಚುಗೆಯಿರಲಿಲ್ಲ. ವಿದ್ಯಾಸಂಸ್ಥೆಗಳನ್ನು ಆರಂಭಿಸುವಂತೆ ತಮ್ಮ ಹಣವಂತ ಶಿಷ್ಯರನ್ನು ಸ್ವಾಮೀಜಿ ಹುರಿದುಂಬಿಸಿದರು. ಇದರ ಫಲವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸದ್ದಿಲ್ಲದೆ ಶಿಕ್ಷಣ ಕ್ರಾಂತಿ ನಡೆಯಿತು. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸ್ವಾಮೀಜಿ ಒತ್ತು ನೀಡಿದ್ದರು.

ಸಿನಿಮಾದ ಆಶಯವನ್ನು ಅನುರಣಿಸುವಂತೆ ಸಿನಿಮಾದುದ್ದಕ್ಕೂ ವಚನಗಳು ಬಳಕೆಯಾಗಿವೆ. ಗದಿಗೆಯ್ಯನೆಂಬ ಬಾಲಕ ಪಂಚಾಕ್ಷರಿ ಗವಾಯಿಯಾಗುವ ರೂಪಾಂತರ ವೃತ್ತಾಂತವೂ ಇದೆ. ಇದರಿಂದಾಗಿ ಸಿನಿಮಾಕ್ಕೆ ಸಂಗೀತದ ಸಖ್ಯ ಅನಾಯಾಸವಾಗಿ ದೊರೆತಿದೆ. ಆದರೆ, ನಿರ್ದೇಶಕರ ಗಮನ ತಮ್ಮ ಕೃತಿಯನ್ನು ಸಂಗೀತಪ್ರಧಾನವನ್ನಾಗಿಸುವುದೋ ಭಾವುಕ ಕಥನವನ್ನಾಗಿಸುವುದೋ ಅಲ್ಲ. ಸ್ವಾಮೀಜಿಯ ವಿಚಾರಧಾರೆಯನ್ನು ಕಾಣಿಸುವುದಷ್ಟೇ ಅವರ ಪ್ರಮುಖ ಗುರಿಯಾಗಿದೆ. ಇದರಿಂದ ಸಿನಿಮಾ ಪಡೆದುಕೊಂಡಿದ್ದೇನು ಹಾಗೂ ಬಿಟ್ಟುಕೊಟ್ಟಿದ್ದೇನು ಎನ್ನುವುದು ಬೇರೆಯದೇ ಚರ್ಚೆ. ಆದರೆ, ಕನ್ನಡದ ಬಹುತ್ವ ಪರಂಪರೆಗೆ ಪೂರಕವಾಗಿದ್ದ 'ಧಾರ್ಮಿಕ ಮಾದರಿ'ಯನ್ನು ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗಿರುವುದು ನಿರ್ದೇಶಕರ ಬಹು ದೊಡ್ಡ ಸಾಧನೆ.

ಪಂಚಾಕ್ಷರಿ ಗವಾಯಿಗಳು ಕುಮಾರಸ್ವಾಮಿಗಳ ಶಿಷ್ಯರು. ಪುಟ್ಟರಾಜ ಗವಾಯಿಗಳು ಪಂಚಾಕ್ಷರಿ ಅವರ ಶಿಷ್ಯರು. ಸಂಗೀತವನ್ನೇ ಕಣ್ಣುಗಳನ್ನಾಗಿಸಿಕೊಂಡಿದ್ದ ಇಬ್ಬರು ಗವಾಯಿಗಳ ಬಗ್ಗೆಯೂ ಈಗಾಗಲೇ ಸಿನಿಮಾಗಳು ನಿರ್ಮಾಣವಾಗಿವೆ. ಈಗ ಗುರುಗಳ ಸರದಿ. ತಡವಾಗಿಯಾದರೂ ಕುಮಾರಸ್ವಾಮಿಗಳ ಬಗ್ಗೆ ಸಿನಿಮಾ ರೂಪುಗೊಂಡಿದೆ. ಮೇಲ್ನೋಟಕ್ಕೆ ಈ ಸಿನಿಮಾ ಲಿಂಗಾಯತ– ವೀರಶೈವ ಸಮುದಾಯದ ಆಚಾರ್ಯ-ಪುರುಷನ ಕಥನದಂತೆ ಕಾಣಿಸುತ್ತದೆ. 'ಅಖಿಲ ಭಾರತ ವೀರಶೈವ ಮಹಾಸಭಾ', 'ಶಿವಯೋಗ ಮಂದಿರ'ಗಳು ಕುಮಾರಸ್ವಾಮಿ ಅವರ ವಿವೇಕ ಮತ್ತು ದೂರದೃಷ್ಟಿಯ ಫಲಶ್ರುತಿಗಳು. ಈ ಸಂಸ್ಥೆಗಳು ಕೂಡ ಕುಮಾರಸ್ವಾಮಿ ಅವರನ್ನು ಲಿಂಗಾಯತ-ವೀರಶೈವ ಧರ್ಮದ ಚೌಕಟ್ಟಿನಲ್ಲಿ ನೋಡಲು ಒತ್ತಾಯಿಸುತ್ತವೆ. ಆದರೆ, ಸಮಾಜದ ಜ್ಞಾನವಿಕಾಸದ ಉದಾತ್ತ ಉದ್ದೇಶದಿಂದ ಆರಂಭಗೊಂಡ ಈ ಕೇಂದ್ರಗಳು ಮೂಲದಲ್ಲಿ ಎಲ್ಲರನ್ನೂ ಒಳಗೊಳ್ಳುವ ಬಹುತ್ವದ ಗುಣ ಹೊಂದಿದ್ದವು. ಕಾಯಕದಲ್ಲಿ ನಂಬಿಕೆಯುಳ್ಳ ಎಲ್ಲರನ್ನೂ ಒಳಗೊಳ್ಳುವ ಬಸವ ಪ್ರಜ್ಞೆಯನ್ನು ಆಧರಿಸಿ ಕುಮಾರಸ್ವಾಮಿಯವರು ಸಂಸ್ಥೆಗಳನ್ನು ರೂಪಿಸಿದ್ದರು. ಈಗ ಆ ಸಂಸ್ಥೆಗಳಲ್ಲಿ ಕುಮಾರಸ್ವಾಮಿಗಳು ಹಂಬಲಿಸಿದ ಬಸವಪ್ರಜ್ಞೆ ಎಷ್ಟರಮಟ್ಟಿಗೆ ಉಳಿದಿದೆ ಎನ್ನುವುದರ ಅವಲೋಕನಕ್ಕೂ 'ವಿರಾಟಪುರ ವಿರಾಗಿ' ಸಿನಿಮಾ ಒತ್ತಾಯಿಸುವಂತಿದೆ.

ಚುರುಮುರಿ

ಉತ್ತರವಿಲ್ಲದ ಪ್ರಶ್ನೆಗಳು

● ಲಿಂಗರಾಜು ಡಿ.ಎಸ್.

'ಗಡಿ ಸಮಸ್ಯೆಗಳಿಗೆ ಶಾನುಭೋಗರು ಕಾರಣ ಅಲ್ಲುವಾ? ಪಟೇಲರು ಅಂದವ್ರೆ ಅಧ್ಯಕ್ಸರು!' ಚಂದ್ರು ಕ್ಯಾತೆ ತೆಗೆದ.

'ಆ ಗಡಿಬಿಡಿ ಬ್ಯಾರೆ. ಇಲ್ಲಿ ನೋಡು, ರಾಜಕೀಯದವುಕ್ಕೆ ಏನು ಮಲ್ಲಾಗರು ಬಂದದೆ! ನರಿ, ನಾಯಿ, ತೋಳ, ಗುಲಾಮ, ಲಡ್ಡುಲಸೆ ಅಂತೆಲ್ಲಾ ಬೀದೀಲಿ ಬುಸುಗುಟ್ಕಂದು ಬೋದಾಡತಾವೆ? ಈ ಖೇಲು ಯಾವತ್ತು ಬಂದ್ ಆದದು?' ನನ್ನ ಬೇಜಾರು ಹೊರಹಾಕಿದೆ.

'ನೋಡ್ಲಾ, ಅಮಾಸೆ ಟೇಮಿಗೆ ಹುಚ್ಚು ಕೆದರ್ತದಂತೆ. ಹಂಗೇ ಇವುಕ್ಕೆ ಎಲೆಕ್ಷನ್ ಹತ್ತಿರಕ್ಕೆ ಬಂದಾಗ ನಾಲಗೆ ಕೂಗುಯ್ಯಾಲೆ ಹಾಡ್ತದೆ. ಎಲೆಕ್ಷನ್ ಗೆದ್ದಾತಿಂಗೇ ರಾಜೀಕಬೂಲಾಗಿ ಹೆಗಲ ಮ್ಯಾಲೆ ಕೈಯ್ಯಾಕ್ಯಂದು ಗೆಣೆಕಾರರ ಥರಾ ವಾಲಾಡ್ತವೆ' ತುರೇಮಣೆ ವಿಶ್ಲೇಷಣೆ ಮಾಡಿದರು.

'ಅದೇ ಯಾಕೆ ಅಂತ?' ನನ್ನ ಅನುಮಾನ ಹೋಗಿರಲಿಲ್ಲ.

'ಒಂದಷ್ಟು ಪ್ರಶ್ನೆಗಳಿಗೆ ಉತ್ತರವೇ ಇರಕುಲ್ಲ ಕನೋ. ಉದಾಹರಣೆಗೆ, ಡ್ರಗ್ಸ್ ಕೇಸು ಎಲ್ಲಿಗೆ ಬಂತು? ಪಿಎಸ್ಐ ನೇಮಕಾತಿ ಹಗರಣ ಏನಾಯ್ತು? ಸೈಬರ್ ಕ್ರೈಮ್ ಎಲ್ಲಿಗೋಯ್ತು?' ಅಂದ್ರು.

'ಇನ್ನೂ ಅವಲ್ಲೋ! ವೋಟರ್ ಗೇಟ್ ಮುಚ್ಚಿಕ್ಯತ್ತಾ? ಬಿಟ್‌ಕಾಯಿನ್ ಬಿಟ್ಹೋಯ್ತಾ? ರಸ್ತೆಗುಂಡಿ ಮುಚ್ಚಿಕ್ಯಳದು ಯಾವಾಗ? ಪರ್ಸೆಂಟೇಜ್ ಯಾವಾಗ ಕೊನೆಯಾಯ್ತದೆ? ಒತ್ತುವರಿ ತೆರವು ಪೂರ್ತಿಯಾಗದು ಯಾವಾಗ?' ಯಂಟಪ್ಪಣ್ಣ ನಿಟ್ಟುಸಿರುಬುಟ್ಟಿತು.

'ಅಣ್ಣೆ, ಶಾಸಕರು ವಿಧಾನಸಭೆಗೆ ತಪ್ಪದೇ ಬರದು ಯಾವಾಗ? ಪಕ್ಷಾಂತರ ಎಂದು ನಿಂತದು? ಕುಟುಂಬ ರಾಜಕಾರಣಕ್ಕೆ ಕೊನೆ ಯಾವಾಗ? ಅಧಿಕಾರಿಗಳ ಭ್ರಷ್ಟಾಚಾರ ಯಾವಾಗ ಕೊನೆಯಾದದು? ಸಾಹಿತ್ಯ ಸಮ್ಮೇಳನದ ನಿರ್ಣಯಗಳು ಅಟ್ಟ ಹತ್ತಿ ಕುಂತಂಗೆ, ಇದು ಸುದ್ದಾಗೋದಿಲ್ಲ' ಅಂತಂದೆ.

'ಪಾರಿನ್ನಿಂದ ಕಳ್ಳದುಡ್ಡು ತಂದು ದೇಸದ ಜನಕ್ಕೆಲ್ಲಾ ಹಂಚತೀನಿ ಅಂದಿದ್ರಲ್ಲ! ಇದೂ ಹಂಗೀಯೆ?' ಯಂಟಪ್ಪಣ್ಣ ನೆನಪಿಸಿಕೊಂಡಿತು.

'ಕೇಳ್ರೋ 'ನಾ ಖಾವೂಂಗ, ನಾ ಖಾನೇ ದೂಂಗ' ಅನ್ನೋ ಸುಭಾಷಿತ ಯಾವತ್ತು ದಿಟವಾದದೋ ಅವತ್ತೇ ಇವೆಲ್ಲ ಪ್ರಶ್ನೆಗಳಿಗೂ ಉತ್ತರ ಸಿಕ್ತದೆ!' ತುರೇಮಣೆ ಕಡ್ಡೆರಡು ತುಂಡಾಗುವಂಗೆ ಮಾತಾಡಿದರು.

ಸಂಗತ

ಸಂಶೋಧನೆ ಮತ್ತು ನೈತಿಕ ಸವಾಲು

ಶೈಕ್ಷಣಿಕ ವಲಯದಲ್ಲಿ ನಡೆಯುವ ಸಂಶೋಧನೆಗಳಲ್ಲಿನ ಅನೈತಿಕತೆಗೆ ಕಡಿವಾಣ ಹಾಕಲು ನೈತಿಕಪ್ರಜ್ಞೆಯನ್ನು ಜಾಗೃತಗೊಳಿಸುವ ಅಗತ್ಯವಿದೆ

● ಎಚ್.ಕೆ.ಶರತ್

2020ನೇ ಸಾಲಿನಿಂದ ಪಿಎಚ್.ಡಿ ಪದವಿಗೆ ಪ್ರವೇಶ ಪಡೆಯುವವರು 'ಸಂಶೋಧನಾ ಪ್ರಕಟಣೆ ಮತ್ತು ನೈತಿಕತೆ' (Research Publication & Ethics) ವಿಷಯವನ್ನು ಕಡ್ಡಾಯವಾಗಿ ಓದಲೇಬೇಕಿರುವ ನಿಯಮಾವಳಿಯನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ರೂಪಿಸಿದೆ. ಸಂಶೋಧನಾರ್ಥಿಗಳೆಲ್ಲರೂ ಕೋರ್ಸ್‌ವರ್ಕ್‌ನ ಭಾಗವಾಗಿ ಈ ವಿಷಯದ ಪರೀಕ್ಷೆ ಬರೆದು ಉತ್ತೀರ್ಣರಾಗಬೇಕಿರುವುದು ಕಡ್ಡಾಯ. ಸಂಶೋಧನೆಯ ಮೂಲಕ ತಾವು ಕಂಡುಕೊಂಡ ಅಂಶಗಳನ್ನು ಪ್ರಬಂಧ ಅಥವಾ ಲೇಖನವಾಗಿ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಿಸುವಾಗ ಅನುಸರಿಸಬೇಕಾದ ಕ್ರಮಗಳೇನು ಎಂಬುದರ ಕುರಿತು ಮನದಟ್ಟು ಮಾಡಿಕೊಡುವಲ್ಲಿ ಇದು ಮಹತ್ವದ ಪಾತ್ರ ನಿರ್ವಹಿಸಲಿದೆ.

ಈ ಬಾರಿ ವಿಶ್ವವಿದ್ಯಾಲಯವೊಂದು ತನ್ನಲ್ಲಿ ಪಿಎಚ್.ಡಿ ಪದವಿಗೆ ದಾಖಲಾದ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳ ಮೂಲಕ 'ಸಂಶೋಧನಾ ಪ್ರಕಟಣೆ ಮತ್ತು ನೈತಿಕತೆ' ವಿಷಯವನ್ನು ಬೋಧಿಸಿತು. ವಿವಿಧ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಷಯ ತಜ್ಞರು, ಸಂಶೋಧನಾ ಲೇಖನಗಳನ್ನು ಪ್ರಕಟಿಸುವಾಗ ಏನು ಮಾಡಬೇಕು ಮತ್ತು ಯಾವುದನ್ನೆಲ್ಲ ಮಾಡಕೂಡದು ಎಂಬುದನ್ನು ಸಂಶೋಧನಾರ್ಥಿಗಳಿಗೆ ತಿಳಿಸಿಕೊಟ್ಟರು. ಆನ್‌ಲೈನ್ ತರಗತಿ ವೇಳೆ, ತಮಗಿರುವ ಅನುಮಾನಗಳನ್ನು ಬಗೆಹರಿಸಿಕೊಳ್ಳುವ ಸಲುವಾಗಿ ಬೋಧಕರಿಗೆ ಪ್ರಶ್ನೆ ಕೇಳುವ ಅವಕಾಶ ದೊರೆತಾಗ, ಸಂಶೋಧನಾರ್ಥಿಯೊಬ್ಬರು ಕೇಳಿದ ಪ್ರಶ್ನೆ ಗಮನಾರ್ಹವಾದುದು.

'ಈ ಕೋರ್ಸಿನಲ್ಲಿ ಕಲಿತ ವಿಷಯಗಳನ್ನು ಪಾಲಿಸುವುದು ಮತ್ತು ಅನುಷ್ಠಾನಕ್ಕೆ ತರುವುದು ನಮ್ಮಿಂದ ಮಾತ್ರ ಸಾಧ್ಯವಿಲ್ಲ. ನಮಗೆ ಮಾರ್ಗದರ್ಶನ ನೀಡುವವರಿಗೂ ಸಂಶೋಧನಾ ಲೇಖನಗಳ ಪ್ರಕಟಣೆ ವೇಳೆ ಅನುಸರಿಸಬೇಕಾದ ಕ್ರಮಗಳ ಕುರಿತು ತಿಳಿದಿರಬೇಕಲ್ಲವೇ? ತಿಳಿವಳಿಕೆ ಇದ್ದರೂ ಇವನ್ನೆಲ್ಲ ಕಟ್ಟುನಿಟ್ಟಾಗಿ ಪಾಲಿಸುವ ಬದ್ಧತೆ ತೋರುವರೆಂಬ ಖಾತರಿಯೇನು? ಒಂದುವೇಳೆ ಸಂಶೋಧನಾರ್ಥಿ ನೈತಿಕ ಚೌಕಟ್ಟು ಮೀರಿ ಏನನ್ನೂ ಮಾಡಬಾರದೆನ್ನುವ ನಿಲುವಿಗೆ ಬದ್ಧನಾಗಿ, ಆತನ ಮಾರ್ಗದರ್ಶಕರಿಗೆ ಆ ಬದ್ಧತೆ ಇಲ್ಲದೇ ಹೋದಾಗ ಎದುರಾಗುವ ಸಂಘರ್ಷದಿಂದ ಪಾರಾಗುವುದು ಹೇಗೆ?' ಎಂದು ಒಬ್ಬರು ಕೇಳಿದ್ದಕ್ಕೆ, ಉಳಿದವರು ತಾವು ಕೂಡ ಈ ಪ್ರಶ್ನೆಗೆ ಉತ್ತರ ನಿರೀಕ್ಷಿಸುತ್ತಿರುವುದಾಗಿ ದನಿಗೂಡಿಸಿದರು.

ಮತ್ತೊಬ್ಬರು, 'ನಾವು ಅಧ್ಯಾಪಕರಾಗಿ ಕಾರ್ಯನಿರ್ವಹಿಸುವ ಸಂಸ್ಥೆಯ ಆಡಳಿತಕ್ಕೂ ಸಂಶೋಧನಾ ಪ್ರಕಟಣೆ ಮತ್ತು ನೈತಿಕತೆ ಕುರಿತು ಅರಿವಿರಬೇಕಲ್ಲವೇ?' ಎಂದು ಪ್ರಶ್ನಿಸಿದರು. ಸಂಶೋಧನಾರ್ಥಿಗಳಲ್ಲಿನ ಈ ಗೊಂದಲ ಬಗೆಹರಿಸಲು ಸರಳ ಪರಿಹಾರಗಳಿಲ್ಲ ಎಂಬುದನ್ನು ಮನಗಂಡ ವಿಷಯ ತಜ್ಞರು, 'ಪರಿಸ್ಥಿತಿ ಮುಂಬರುವ ದಿನಗಳಲ್ಲಿ ಸುಧಾರಿಸಬಹುದು. ಈ ದಿಸೆಯಲ್ಲಿ ಸಂಬಂಧಪಟ್ಟವರು ಕೂಡ ಸೂಕ್ತ ಕ್ರಮ ಕೈಗೊಳ್ಳಬಹುದು' ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ವೇತನ ಹೆಚ್ಚಳ ಮತ್ತು ಬಡ್ತಿಗೆ ಅರ್ಹವಾಗಲು ನಿರ್ದಿಷ್ಟ ಸಂಖ್ಯೆಯ ಸಂಶೋಧನಾ ಪ್ರಬಂಧಗಳನ್ನು ಕಡ್ಡಾಯವಾಗಿ ಪ್ರಕಟಿಸಬೇಕೆಂಬ ನಿಯಮಗಳನ್ನು ವಿಧಿಸಿರುವುದರಿಂದ, ಹೇಗಾದರೂ ಸರಿ ಅಗತ್ಯವಿರುವಷ್ಟು ಸಂಶೋಧನಾ ಲೇಖನಗಳು ತಮ್ಮ ಹೆಸರಿನಲ್ಲಿ ಪ್ರಕಟವಾಗುವಂತೆ ನೋಡಿಕೊಂಡರೆ ಸಾಕು ಎನ್ನುವ ವಾತಾವರಣ ಉನ್ನತ ಶಿಕ್ಷಣ ವಲಯದಲ್ಲಿ ಬೇರೂರಿದೆ.

ಸಂಶೋಧನಾ ಲೇಖನಗಳ ಗುಣಮಟ್ಟ ಕಾಯ್ದುಕೊಳ್ಳುವ ಸಲುವಾಗಿ ಮಾನದಂಡಗಳನ್ನು ರೂಪಿಸಲಾಗಿದೆ. ಹೀಗಾಗಿ ಕೆಲವೊಮ್ಮೆ ಸಂಶೋಧನಾ ಲೇಖನಗಳ ಗುಣಮಟ್ಟ ಸ್ವೀಕಾರಾರ್ಹವಾಗಿದ್ದರೂ, ಸಂಶೋಧನಾ ಲೇಖನಗಳನ್ನು ಬರೆಯುವ ಮತ್ತು ಪ್ರಕಟಿಸುವ ಪ್ರಕ್ರಿಯೆಯಲ್ಲಿ ನೈತಿಕತೆಯ ಎಲ್ಲೆ ಮೀರಿರಬಹುದಾದ ಸಾಧ್ಯತೆಯೂ ಇರಲಿದೆ. ಉನ್ನತ ಶಿಕ್ಷಣ ವಲಯದಲ್ಲಿ ವೃತ್ತಿಪರತೆ ಮತ್ತು ನೈತಿಕ ಪ್ರಜ್ಞೆ ಮೈಗೂಡದೇ ಹೋದಲ್ಲಿ, ವ್ಯಕ್ತಿಗತ ನೆಲೆಯಲ್ಲಿ ಅದನ್ನು ಮೈಗೂಡಿಸಿದರೂ ಅನುಷ್ಠಾನಕ್ಕೆ ತರುವುದು ತ್ರಾಸದಾಯಕ. ಈ ಕುರಿತು ಬರೀ ಸಂಶೋಧನಾರ್ಥಿಗಳಲ್ಲದೆ ಮಾರ್ಗದರ್ಶಕರು, ಕಾಲೇಜು-ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿ, ಪ್ರಾಧ್ಯಾಪಕರು, ಸ್ನಾತಕೋತ್ತರ ವಿದ್ಯಾರ್ಥಿಗಳಲ್ಲೂ ತಿಳಿವಳಿಕೆ ಮೂಡಿಸುವ ಅಗತ್ಯವಿದೆ.

ಸಂಶೋಧನಾ ಲೇಖನಗಳನ್ನು ಪ್ರಕಟಿಸಲು ತುದಿಗಾಲಿನಲ್ಲಿ ನಿಂತಿರುವ ಸಂಶೋಧನಾರ್ಥಿಗಳು ಮತ್ತು ಬೋಧಕರ ಅಗತ್ಯಗಳನ್ನು ಕ್ಷಿಪ್ರಗತಿಯಲ್ಲಿ ಪೂರೈಸುವ ಮೂಲಕ ಹಣ ಗಳಿಸಬಹುದು ಎಂಬುದನ್ನು ಕಂಡುಕೊಂಡಿರುವ ಕೆಲವರು, ಪ್ರಕಟಣೆಗೆ ಸ್ವೀಕರಿಸುವ ಸಂಶೋಧನಾ ಪತ್ರಿಕೆಗಳನ್ನು ಹುಟ್ಟುಹಾಕಿ, ಕೆಲ ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಕುರಿತು ವಿದ್ಯಾರ್ಥಿಗಳಿಗೆ ತಿಳಿಹೇಳಬೇಕಾದ ಅಧ್ಯಾಪಕರೇ, 'ಪತ್ರಿಕೆ ಯಾವುದಾದರೂ ಪರವಾಗಿಲ್ಲ, ಪ್ರಕಟಣೆಗೆ ಕಳಿಸಿ' ಎನ್ನುವ ನಿಲುವಿಗೆ ಜೋತುಬೀಳುವುದೂ ಇದೆ.

ಗುಣಮಟ್ಟ ಕಾಯ್ದುಕೊಳ್ಳದ ಸಂಶೋಧನಾ ಪತ್ರಿಕೆಗಳಲ್ಲಿ ಲೇಖನ ಪ್ರಕಟಿಸುವುದಕ್ಕಿಂತ ಪ್ರಕಟಿಸದಿರುವುದೇ ಏಕೆ ಉತ್ತಮವೆಂದು ಇಡೀ ಶೈಕ್ಷಣಿಕ ವಲಯಕ್ಕೆ ಮನದಟ್ಟು ಮಾಡಿಕೊಡುವ ಅಗತ್ಯ ಇದೆ. ಗುಣಮಟ್ಟದೊಂದಿಗೆ ನೈತಿಕತೆಯೂ ಮೈಗೂಡುವಂತೆ ನೋಡಿಕೊಳ್ಳಬೇಕೆಂದರೆ, ನೈತಿಕಪ್ರಜ್ಞೆ ಕಾಪಿಟ್ಟುಕೊಂಡ ಶೈಕ್ಷಣಿಕ ವಾತಾವರಣ ರೂಪುಗೊಳ್ಳಬೇಕು. ಲಭ್ಯವಿರುವ ತಾಂತ್ರಿಕ ಹತಾರಗಳ ಮೂಲಕ ತಕ್ಕ ಮಟ್ಟಿಗೆ ಗುಣಮಟ್ಟ ಕಾಯ್ದುಕೊಳ್ಳಲಷ್ಟೇ ಸಾಧ್ಯವಿದೆ.

ಶೈಕ್ಷಣಿಕ ವಲಯದಲ್ಲಿ ನಡೆಯುವ ಸಂಶೋಧನೆಗಳಲ್ಲಿನ ಅನೈತಿಕತೆಗೆ ಕಡಿವಾಣ ಹಾಕಲು ನೈತಿಕಪ್ರಜ್ಞೆಯನ್ನು ಜಾಗೃತಗೊಳಿಸುವ ಅಗತ್ಯವಿದೆ.

ವಾಚಕರ ವಾಣಿ

ಹೊಸ ಪ್ರತಿಮೆ ಅಗತ್ಯವೇ?

ವಿಧಾನಸೌಧದ ಮುಂಭಾಗದಲ್ಲಿ ಬಸವಣ್ಣ ಮತ್ತು ಕೆಂಪೇಗೌಡ ಅವರ ಪ್ರತಿಮೆಗಳ ಸ್ಥಾಪನೆಗೆ ಸರ್ಕಾರ ಶಂಕುಸ್ಥಾಪನೆ ಮಾಡಲು ಹೊರಟಿರುವುದು ಆಶ್ಚರ್ಯಕರ. ರಾಜ್ಯದಲ್ಲಿ ಹಲವಾರು ಜ್ವಲಂತ ಸಮಸ್ಯೆಗಳು ತಾಂಡವವಾಡುತ್ತಿವೆ. ಸೂರು ಮತ್ತು ಆಹಾರದಂತಹ ಪ್ರಮುಖ ವಿಚಾರಗಳ ಬಗ್ಗೆ ಗಮನಹರಿಸುವುದು ಸರ್ಕಾರದ ಆದ್ಯತೆಯಾಗಬೇಕೇ ವಿನಾ ಪ್ರತಿಮೆಗಳ ಸ್ಥಾಪನೆ ಇಂದಿನ ಜರೂರತ್ತಲ್ಲ. ತೆರಿಗೆದಾರರ ಹಣವನ್ನು ಈ ರೀತಿ ಪೋಲು ಮಾಡುವುದು ನ್ಯಾಯಸಮ್ಮತವೂ ಅಲ್ಲ.

'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಬಸವಣ್ಣನವರ ಮಾತನ್ನೇ ಸುಳ್ಳಾಗಿಸುವ ಪ್ರಯತ್ನ ಸರ್ವಥಾ ಸಲ್ಲದು. ₹ 84 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ಸುಂದರವಾದ ಅಶ್ವಾರೋಹಿ ಕೆಂಪೇಗೌಡರ 108 ಅಡಿ ಪ್ರತಿಮೆಯನ್ನು ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ಈಚೆಗಷ್ಟೇ ಪ್ರಧಾನಿ ಉದ್ಘಾಟಿಸಿದ್ದಾರೆ. ಅಶ್ವಾರೋಹಿ ಬಸವಣ್ಣನವರ ಪ್ರತಿಮೆಯನ್ನು ವಿಧಾನಸೌಧದ ಕೂಗಳತೆಯ ದೂರದಲ್ಲಿ ಪ್ರತಿಷ್ಠಾಪಿಸಲಾಗಿದೆ. ಹೀಗಿರುವಾಗ ಮತ್ತೆರಡು ಪ್ರತಿಮೆಗಳ ಅವಶ್ಯಕತೆಯಿದೆಯೇ? ಪ್ರತಿಮೆಗಳನ್ನು ನಿರ್ಮಿಸಲು ಹೀಗೆ ದುಂದುವೆಚ್ಚ ಮಾಡುವ ಬದಲು, ಚಾಲುಕ್ಯ ವೃತ್ತದಲ್ಲಿರುವ ಪ್ರತಿಮೆಯನ್ನು ವಿಧಾನಸೌಧಕ್ಕೆ ಸ್ಥಳಾಂತರಿಸಲಿ ಹಾಗೂ ಸರ್ಕಾರದ ವೆಚ್ಚದಲ್ಲಿ ಈಗಾಗಲೇ ನಗರದ ಹಲವಾರು ಬಡಾವಣೆಗಳ ಉದ್ಯಾನಗಳಲ್ಲಿ ಸ್ಥಾಪಿಸಿರುವ ಉತ್ತಮವಾದ ಅಶ್ವಾರೋಹಿ ಕೆಂಪೇಗೌಡರ ಪ್ರತಿಮೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ವಿಧಾನಸೌಧದ ಆವರಣದಲ್ಲಿಯೇ ಸ್ಥಾಪಿಸಲಿ.

ಟಿ.ಉಮಾಶಂಕರ್, ಬೆಂಗಳೂರು

ಹೀಗೂ ಬರಬಹುದು ಎಚ್ಚರಿಕೆ ಫಲಕ!

ಶಾಲಾ ಆವರಣ, ಆಸ್ಪತ್ರೆ ಆವರಣದಂತಹ ಕಡೆಗಳಲ್ಲಿ ಸುರಕ್ಷತೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಇರುವ ಎಚ್ಚರಿಕೆಯ ಫಲಕಗಳೊಂದಿಗೆ ಇನ್ನುಮುಂದೆ ಚಿರತೆ ಇದೆ, ಆನೆ ಇದೆ, ಹುಲಿ ಇದೆ ಎಂಬಂತಹ ಎಚ್ಚರಿಕೆಯ ಫಲಕಗಳು ಕಂಡುಬರಬಹುದು. ಪ್ರಾಣಿ ಪಕ್ಷಿಗಳ ಜಾಗಕ್ಕೆ ಮನುಷ್ಯ ಲಗ್ಗೆ ಇಟ್ಟದ್ದರ ಫಲ ಇದು. ಎಂತಹ ವಿಪರ್ಯಾಸ?

ಸಿ.ಆರ್.ದಿನೇಶ್, ಮೈಸೂರು

ದೇವಾಲಯದ ಹಿಂದೆ ವಾದ್ಯ ನುಡಿಸಿದಂತೆ!

ಹಾವೇರಿ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಕಲಾ ಪ್ರದರ್ಶನ ನೀಡಲು ಉತ್ಸುಕವಾಗಿದ್ದ, ನಾಡಿನ ನಾನಾ ಭಾಗಗಳಿಂದ ಬಂದಿದ್ದ ಕಲಾತಂಡಗಳಿಗೆ ನಿರಾಸೆ ಉಂಟಾಯಿತು. ಸಾಮಾನ್ಯವಾಗಿ ಯಾವುದೇ ಉತ್ಸವದ ಮೆರವಣಿಗೆಯಲ್ಲಿ ಉತ್ಸವಮೂರ್ತಿಯ ರಥದ ಮುಂದೆ ಕಲಾವಿದರ ಕಲಾಪ್ರದರ್ಶನ ಸಾಗುವುದು ವಾಡಿಕೆ. ಆದರೆ ಈ ಸಾಹಿತ್ಯ ಸಮ್ಮೇಳನದಲ್ಲಿ ಇದೇ ಪ್ರಥಮ ಬಾರಿಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆಯ ಹಿಂದೆ ಕಲಾತಂಡಗಳು ಬರುವಂತೆ ಮಾಡಿದ್ದು ಎಷ್ಟು ಸರಿ? ಇದರಿಂದ ಕಲಾವಿದರಿಗೆ ಸಿಗಬೇಕಾಗಿದ್ದ ಮನ್ನಣೆ ಸಿಗದಂತಾಯಿತು. ಈ ರೀತಿ ಮಾಡಿರುವುದು ದೇವಸ್ಥಾನದ ಹಿಂದೆ ವಾದ್ಯ ನುಡಿಸಿದಂತೆ ಅಲ್ಲವೇ?

ಶಿವಕುಮಾರ್, ಸಾರ್ಥವಳ್ಳಿ

ಪಟೇಲ್ ವಿರುದ್ಧ ಸಲ್ಲದ ಆರೋಪ

ಗಡಿಗೆ ಸಂಬಂಧಿಸಿದ ಈಗಿನ ಸಮಸ್ಯೆಗಳಿಗೆ ಕೇಂದ್ರದಲ್ಲಿ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಕಾರಣ ಎಂದು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ದೊಡ್ಡರಂಗೇಗೌಡ ಅವರು ಆಪಾದನೆ ಮಾಡಿರುವುದು ಎಷ್ಟು ಸರಿ? ಇಂದಿನ ರಾಜಕಾರಣದಲ್ಲಿ ಎಲ್ಲ ಸಮಸ್ಯೆಗಳಿಗೂ ಮತ್ತೊಬ್ಬರ ಮೇಲೆ ಗೂಬೆ ಕೂರಿಸುವ ಹುನ್ನಾರ ನಡೆಯುತ್ತಿದೆ. ಪಾಕಿಸ್ತಾನದೊಂದಿಗಿನ ಸಮಸ್ಯೆಗೆ ಮಹಾತ್ಮ ಗಾಂಧಿ, ಚೀನಾ ಸಮಸ್ಯೆಗೆ ನೆಹರೂ, ಆರ್ಥಿಕ ಸ್ಥಿತಿಗೆ ಮನಮೋಹನ್ ಸಿಂಗ್ ಕಾರಣ ಎಂಬ ಆರೋಪಗಳು ಕೇಳಿಬರುತ್ತವೆ. ಸಮಯಕ್ಕೆ ಅನುಗುಣವಾಗಿ ಸ್ಪಂದಿಸದ ನಾವೇ ಎಲ್ಲ ಸಮಸ್ಯೆಗಳಿಗೂ ಮೂಲ ಎಂದು ಅರ್ಥಮಾಡಿಕೊಳ್ಳದೆ, ಚಿಕ್ಕಪುಟ್ಟ ಸಮಸ್ಯೆಗಳನ್ನು ಸ್ವತಃ ಹುಟ್ಟುಹಾಕಿ, ಅದರಲ್ಲಿ ನಾವೇ ಸಿಲುಕಿಕೊಂಡು ಅನುಭವಿಸುತ್ತಿರುವ ಬವಣೆಗಳಿಗೆ ಯಾರು ಕಾರಣ?

ಎಚ್.ಎಸ್.ಚಂದ್ರಶೇಖರ, ಬೆಂಗಳೂರು

ಯಡಿಯೂರಪ್ಪ ಅನಿವಾರ್ಯವಲ್ಲವೇ?

'ಬಿಜೆಪಿಗೆ ದೇವದುರ್ಲಭವಾದ ಕಾರ್ಯಕರ್ತರ ಪಡೆ ಇದೆ. ಆ ಕಾರ್ಯಕರ್ತರಿಂದಲೇ ಬಿಜೆಪಿ ಈ ಮಟ್ಟಕ್ಕೆ ಬೆಳೆದಿದೆ. ಅದಕ್ಕೆ ಯಡಿಯೂರಪ್ಪ, ನಳಿನ್ ಕುಮಾರ್ ಕಟೀಲ್ ಯಾರೂ ಅನಿವಾರ್ಯವಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಹೇಳಿರುವುದಾಗಿ ವರದಿಯಾಗಿದೆ. ಆದರೆ ವಾಸ್ತವ ಬೇರೆಯೇ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಯಡಿಯೂರಪ್ಪ ಬಿಜೆಪಿ ತೊರೆದು ಕೆಜೆಪಿ ಕಟ್ಟಿದಾಗ ಅವರಿಗೆ ಕೆಲವೇ ಸ್ಥಾನಗಳು ಬಂದರೂ ಅದರಿಂದ ಬಿಜೆಪಿಗೆ ಎಷ್ಟು ಹಾನಿಯಾಯಿತು, ಅದು ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆಗೆ ಹೇಗೆ ಕಾರಣವಾಯಿತು ಎಂಬುದನ್ನು ರಾಜ್ಯದ ಜನ ಗಮನಿಸಿದ್ದಾರೆ. ಆಗ ಕಾರ್ಯಕರ್ತರ ಪಡೆ ಇರಲಿಲ್ಲವೇ? ಕೆಜೆಪಿಯನ್ನು ಕಾಪಿಟ್ಟುಕೊಂಡು ಬಂದಿದ್ದರೆ ಅದು ಜೆಡಿಎಸ್‌ನಂತೆ ಕಿಂಗ್‌ಮೇಕರ್ ಪಕ್ಷ ಆಗುತ್ತಿತ್ತೋ ಏನೋ. ಆದರೆ ಅವರು ಹಾಗೆ ಮಾಡದೆ ಮಾತೃಪಕ್ಷಕ್ಕೆ ಮರಳಿದರು. ಬಿಜೆಪಿಗೂ ಅವರನ್ನು ಸೇರಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಅಧಿಕಾರವಿಲ್ಲದಿದ್ದರೂ ರಾಜಕೀಯವಾಗಿ ಯಡಿಯೂರಪ್ಪ ಬಲಿಷ್ಠರಾಗಿರಲು ಕಾರಣ, ಅವರು ಪ್ರಬಲ ಕೋಮಿಗೆ ಸೇರಿದ ಮಾಸ್ ಲೀಡರ್ ಆಗಿರುವುದು ಮತ್ತು ಬಿಜೆಪಿಯನ್ನು ಕಟ್ಟಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿರುವುದು.

ಯಡಿಯೂರಪ್ಪನವರನ್ನು ಮೂಲೆಗುಂಪು ಮಾಡಲಾಗುತ್ತಿದೆ ಎನ್ನುವ ಮಾತಿನಲ್ಲಿ ಹುರುಳಿದೆ ಎಂದು ಬಿಜೆಪಿಯಲ್ಲಿ ನಡೆಯುತ್ತಿರುವ ಇತ್ತೀಚಿನ ಬೆಳವಣಿಗೆಗಳಿಂದ ತಿಳಿಯಬಹುದು. ಕುಟುಂಬ ರಾಜಕೀಯದ ಕಾರಣ ಒಡ್ಡಿ ಯಡಿಯೂರಪ್ಪ ಕುಟುಂಬಕ್ಕೆ ಒಂದೇ ಟಿಕೆಟ್ ನೀಡುವ ಮೂಲಕ ಅವರನ್ನು ರಾಜಕೀಯವಾಗಿ ಕಟ್ಟಿಹಾಕಬಹುದು. ಹೀಗಾದಲ್ಲಿ ಯಡಿಯೂರಪ್ಪ ಏನು ಮಾಡುತ್ತಾರೆ, ಅದು ಪಕ್ಷದ ಮೇಲೆ ಬೀರುವ ಪರಿಣಾಮವೇನು ಎಂಬುದನ್ನು ಕಾದು ನೋಡಬೇಕು.

ಶಿವಕುಮಾರ ಬಂಡೋಳಿ, ಹುಣಸಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬ್ರೆಜಿಲ್: ಬೊಲ್ಸೊನಾರೊ ಬೆಂಬಲಿಗರಿಂದ ಸಂಸತ್ತಿಗೆ ಮುತ್ತಿಗೆ

ಫಲಿತಾಂಶ ಪ್ರಶ್ನಿಸಿ ದಾಂದಲೆ ಪ್ರಜಾತಂತ್ರಕ್ಕೆ ಕುತ್ತು

ಪ್ರಜಾವಾಣಿ ವಾರ್ತೆ

ಪ್ರಜಾಸತ್ತಾತ್ಮಕವಾಗಿ ನಡೆದ ಚುನಾವಣೆಯ ಫಲಿತಾಂಶವನ್ನು ಒಪ್ಪಿಕೊಳ್ಳದೇ ಇರುವುದು ಮತ್ತು ಸೋತ ರಾಜಕೀಯ ನಾಯಕರ ಬೆಂಬಲಿಗರು ಸಂಸತ್ತಿಗೇ ನುಗ್ಗಿ ದಾಂದಲೆ ನಡೆಸುವುದು ಹೊಸ ಪ್ರವೃತ್ತಿಯಾಗಿದೆ. ಬ್ರೆಜಿಲ್‌ನಲ್ಲಿ ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಅಧ್ಯಕ್ಷ, ಅತಿಬಲಪಂಥೀಯವಾದದ ಪ್ರತಿಪಾದಕ ಜೈರ್ ಬೊಲ್ಸೊನಾರೊ ಅವರು ಸೋತಿದ್ದಾರೆ. ಎಡಪಂಥೀಯ ಒಲವಿನ ಲುಯಿಸ್ ಇನಾಸಿಯೊ ಲುಲ ಡ ಸಿಲ್ವ ಅವರು ಗೆದ್ದು ಅಧಿಕಾರ ವಹಿಸಿಕೊಂಡಿದ್ದಾರೆ. ಆದರೆ, ಬೊಲ್ಸೊನಾರೊ ಬೆಂಬಲಿಗರು ಬ್ರೆಜಿಲ್‌ನ ಸಂಸತ್ತು, ಸುಪ್ರೀಂ ಕೋರ್ಟ್ ಮತ್ತು ಅಧ್ಯಕ್ಷರ ಅರಮನೆಗೆ ಭಾನುವಾರ ನುಗ್ಗಿ ದಾಂದಲೆ ನಡೆಸಿದ್ದಾರೆ.

ಬ್ರೆಜಿಲ್‌ನ ಅಧಿಕಾರ ಕೇಂದ್ರವಾದ 'ಥ್ರೀ ಪವರ್ ಸ್ಕ್ವೇರ್'ಗೆ ಜನರು ನುಗ್ಗಿದರು. ಥ್ರೀ ಪವರ್ ಸ್ಕ್ವೇರ್‌ನಲ್ಲಿರುವ ಸಂಸತ್ತು, ಸುಪ್ರೀಂ ಕೋರ್ಟ್ ಮತ್ತು ಅಧ್ಯಕ್ಷರ ಅರಮನೆಗೆ ದಾಳಿಯಿಟ್ಟರು. ಕಿಟಕಿಯ ಗಾಜುಗಳನ್ನು ಒಡೆದು ಹಾಕಿದರು, ಬೆಂಕಿ ಹಚ್ಚಿದರು. ದಾಂದಲೆ ಸುಮಾರು ಮೂರು ತಾಸು ನಡೆಯಿತು. ಪೊಲೀಸರು ಸುಮಾರು 300 ಮಂದಿಯನ್ನು ಬಂಧಿಸಿದ್ದಾರೆ.

ಲುಲ ಅವರಿಗೆ ಶೇ 50.9ರಷ್ಟು ಮತಗಳು ಸಿಕ್ಕಿವೆ. ಹಾಗಾಗಿಯೇ, ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಬೊಲ್ಸೊನಾರೊ ಬೆಂಬಲಿಗರು ಪ್ರತಿಪಾದಿಸುತ್ತಿದ್ದಾರೆ. ಸೇನೆಯು ಮಧ್ಯಪ್ರವೇಶಿಸಿ ಲುಲ ಅವರು ಅಧಿಕಾರ ವಹಿಸಿಕೊಳ್ಳುವುದನ್ನು ತಡೆಯಬೇಕು ಎಂದು ಒತ್ತಾಯಿಸಿದ್ದರು. ಜೊತೆಗೆ, ಚುನಾವಣೆಯಲ್ಲಿ ವಂಚನೆ ನಡೆದಿದೆಯೇ ಎಂಬ ಕುರಿತು ಸೇನೆಯು ತನಿಖೆ ನಡೆಸಬೇಕು ಎಂದು ಬೊಲ್ಸೊನಾರೊ ಆಗ್ರಹಿಸಿದ್ದರು.

ಸೇನೆಯು ತನಿಖೆ ನಡೆಸಿ, ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಕುರಿತು ವರದಿಯೊಂದನ್ನು ಸಿದ್ಧಪಡಿಸಿದೆ. ಚುನಾವಣೆಯಲ್ಲಿ ವಂಚನೆ ನಡೆದಿದೆ ಎಂಬುದಕ್ಕೆ ಯಾವುದೇ ಪುರಾವೆ ಸಿಕ್ಕಿಲ್ಲ ಎಂದು ಈ ವರದಿಯಲ್ಲಿ ಹೇಳಲಾಗಿದೆ.

ಕೆಲವು ಮತಯಂತ್ರಗಳ ಕೆಲವು ಮತಗಳನ್ನು ಅಸಿಂಧುಗೊಳಿಸಬೇಕು ಎಂದು ಚುನಾವಣಾ ಪ್ರಾಧಿಕಾರಕ್ಕೆ ಬೊಲ್ಸೊನಾರೊ ಅವರು ದೂರು ಕೊಟ್ಟಿದ್ದರು. ಆದರೆ, ಅದನ್ನು ಪ್ರಾಧಿಕಾರವು ತಳ್ಳಿ ಹಾಕಿದೆ. ಹಾಗೆಯೇ ಲುಲ ಅವರಿಗೆ ಅಧಿಕಾರ ನೀಡುವ ವಿಚಾರದಲ್ಲಿ ಆಡಳಿತ ವ್ಯವಸ್ಥೆಯು ಯಾವುದೇ ಆಕ್ಷೇಪ ಹೊಂದಿಲ್ಲ ಮತ್ತು ಲುಲ ಅವರು ಅಧಿಕಾರವನ್ನೂ ವಹಿಸಿಕೊಂಡಿದ್ದಾರೆ. ಬೊಲ್ಸೊನಾರೊ ಅವರು ಸೋಲನ್ನು ಒಪ್ಪಿಕೊಂಡಿಲ್ಲ ಮತ್ತು ಹೊಸ ಅಧ್ಯಕ್ಷರಿಗೆ ಅಭಿನಂದನೆಯನ್ನೂ ಹೇಳಿಲ್ಲ. ಇದರಿಂದಾಗಿ ಬೊಲ್ಸೊನಾರೊ ಅವರ ಬೆಂಬಲಿಗರು ಕೂಡ ಫಲಿತಾಂಶವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ.

ಬೊಲ್ಸೊನಾರೊ ಅವರ ಬೆಂಬಲಿಗರು ಬ್ರೆಜಿಲ್ ಸಂಸತ್ತಿಗೆ ಭಾನುವಾರ ಮುತ್ತಿಗೆ ಹಾಕಿದರು ಚಿತ್ರ ಎಎಫ್‌ಪಿ

ಚುನಾವಣೆಯಿಂದ ದಂಗೆಯವರೆಗೆ...

2022

ಅಕ್ಟೋಬರ್ 30; 2003ರಿಂದ 2011ರವರೆಗೆ ಅಧ್ಯಕ್ಷರಾಗಿ ಕೆಲಸ ಮಾಡಿದ್ದ ಲುಲ ಅವರು ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಯಲ್ಲಿ ಬೊಲ್ಸೊನಾರೊ ಅವರನ್ನು ಸೋಲಿಸಿದರು. ಫಲಿತಾಂಶದಿಂದ ರೊಚ್ಚಿಗೆದ್ದ ಬೊಲ್ಸೊನಾರೊ ಅವರ ಬೆಂಬಲಿಗರು ದೇಶದ ಎಲ್ಲ ಸೇನಾನೆಲೆಗಳ ಹೊರಗೆ ಜಮಾವಣೆಗೊಂಡರು

ನ.22; ಚುನಾವಣಾ ಫಲಿತಾಂಶವನ್ನು ಬೊಲ್ಸೊನಾರೊ ಪ್ರಶ್ನಿಸಿದರು. ಕೆಲವು ಮತಯಂತ್ರಗಳ ಮತಗಳನ್ನು ಅಸಿಂಧು ಎಂಬುದಾಗಿ ಘೋಷಿಸಲು ಆಗ್ರಹಿಸಿದರು. ಆದರೆ, ಅವರ ದೂರನ್ನು ಚುನಾವಣಾ ಪ್ರಾಧಿಕಾರ ತಿರಸ್ಕರಿಸಿತು

ಡಿ.12; ಲುಲ ಅವರ ಚುನಾವಣಾ ಜಯವನ್ನು ಚುನಾವಣಾ ಪ್ರಾಧಿಕಾರ ಪ್ರಮಾಣೀಕರಿಸಿತು. ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ ಆರೋಪದ ಮೇಲೆ ಬೊಲ್ಸೊನಾರೊ ಬೆಂಬಲಿಗರನ್ನು ಬಂಧಿಸಲಾಯಿತು. ಇದನ್ನು ಖಂಡಿಸಿ ಇನ್ನಷ್ಟು ಬೆಂಬಲಿಗರು ಬ್ರೆಸಿಲಿಯಾದ ಪೊಲೀಸ್ ಕೇಂದ್ರ ಕಚೇರಿ ಮೇಲೆ ದಾಳಿ ಮಾಡಿದರು

ಡಿ.24; ಚುನಾವಣಾ ಫಲಿತಾಂಶವನ್ನು ಪ್ರತಿಭಟಿಸಿ ಬಾಂಬ್ ಸ್ಫೋಟಿಸಲು ಯತ್ನಿಸಿದ ವ್ಯಕ್ತಿಯನ್ನು ಬಂಧಿಸಲಾಯಿತು. ನಾಗರಿಕರನ್ನು ಶಸ್ತ್ರಧಾರಿಗಳನ್ನಾಗಿ ಮಾಡುವ ಬೊಲ್ಸೊನಾರೊ ಅವರ ಇಚ್ಛೆಯಿಂದ ಸ್ಫೂರ್ತಿ ಪಡೆದು ಬಾಂಬ್ ತಯಾರಿಸಿದ್ದೆ ಎಂದು ಬಂಧಿತ ವ್ಯಕ್ತಿ ಹೇಳಿಕೊಂಡಿದ್ದ

ಡಿ.30; ಲುಲ ಅವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ಎರಡು ದಿನ ಮುನ್ನ, ಬೊಲ್ಸೊನಾರೊ ಅವರು ಫ್ಲಾರಿಡಾಗೆ ಹಾರಿದರು

2023

ಜ.1; ಬ್ರೆಜಿಲ್ ಅಧ್ಯಕ್ಷರಾಗಿ ಮೂರನೇ ಅವಧಿಗೆ ಅಧಿಕಾರ ವಹಿಸಿಕೊಂಡ ಲುಲ ಅವರು, ಅಧ್ಯಕ್ಷೀಯ ಚುನಾವಣೆಯಲ್ಲಿ ನಿಜವಾಗಿ ಗೆದ್ದಿದ್ದು ಪ್ರಜಾಪ್ರಭುತ್ವ ಎಂದು ಬಣ್ಣಿಸಿದರು

ಜ.8; ಬೊಲ್ಸೊನಾರೊ ಬೆಂಬಲಿಗರಿಂದ ಅಧ್ಯಕ್ಷೀಯ ಅರಮನೆ, ಸಂಸತ್ ಭವನ ಹಾಗೂ ಸುಪ್ರೀಂ ಕೋರ್ಟ್ ಮೇಲೆ ದಾಳಿ

ಜ.8; ದೇಶದಲ್ಲಿ ತುರ್ತು ಪರಿಸ್ಥಿತಿ ವಿಧಿಸುವ ಸುಗ್ರೀವಾಜ್ಞೆಗೆ ಅಧ್ಯಕ್ಷ ಲುಲ ಅವರಿಂದ ಸಹಿ. ಪ್ರತಿಭಟನಾಕಾರರು ಸೇನಾ ನೆಲೆಗಳ ಹೊರಭಾಗದಲ್ಲಿ ಹಾಕಿರುವ ಟೆಂಟ್‌ಗಳನ್ನು 24 ಗಂಟೆಯ ಒಳಗೆ ತೆರವುಗೊಳಿಸಬೇಕು ಎಂದು ಬ್ರೆಜಿಲ್ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ

ಬ್ರೆಜಿಲ್‌ನಲ್ಲಿ ಸರ್ಕಾರಿ ವ್ಯವಸ್ಥೆಯ ಮೇಲೆ ನಡೆದ ದಾಳಿಯಿಂದ ತೀವ್ರ ನೋವಾಗಿದೆ. ಪ್ರಜಾಪ್ರಭುತ್ವದ ನೀತಿಗಳಿಗೆ ಎಲ್ಲರೂ ಗೌರವ ನೀಡಬೇಕು. ಈ ದಿಸೆಯಲ್ಲಿ ಬ್ರೆಜಿಲ್ ಸರ್ಕಾರಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ

ನರೇಂದ್ರ ಮೋದಿ, ಪ್ರಧಾನಿ

ಬ್ರೆಜಿಲ್‌ನಲ್ಲಿ ಸೇನಾದಂಗೆಯನ್ನು ಪ್ರಚೋದಿಸುವುದು ಹಾಗೂ ಆ ಮೂಲಕ ಬೊಲ್ಸೊನಾರೊ ಅವರಿಗೆ ಮತ್ತೆ ಅಧಿಕಾರ ನೀಡುವ ಉದ್ದೇಶ ಹೊಂದಿದ್ದ ಮತಾಂಧ ನಾಯಕರಿಗೆ ಕಠಿಣ ಶಿಕ್ಷೆ ಖಚಿತ

ಲುಲ ಡಸಿಲ್ವಾ, ಬ್ರೆಜಿಲ್ ಅಧ್ಯಕ್ಷ

ಇದು ಪ್ರಜಾಪ್ರಭುತ್ವದ ಮೇಲಿನ ದಾಳಿ. ಅಧಿಕಾರವನ್ನು ಶಾಂತಿಯುತವಾಗಿ ಹಸ್ತಾಂತರ ಮಾಡದಿರುವುದನ್ನು ನಾನು ಖಂಡಿಸುತ್ತೇನೆ. ಬ್ರೆಜಿಲ್‌ನ ಪ್ರಜಾಪ್ರಭುತ್ವ ವ್ಯವಸ್ಥೆಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಬ್ರೆಜಿಲ್ ನಾಗರಿಕರು ನೀಡಿದ ಜನಾದೇಶವನ್ನು ಕಡೆಗಣಿಸಬಾರದು. ಲುಲ ಡಸಿಲ್ವಾ ಜೊತೆ ಕೆಲಸ ಮಾಡುವುದನ್ನು ಎದುರು ನೋಡುತ್ತಿದ್ದೇನೆ

ಜೋ ಬೈಡನ್, ಅಮೆರಿಕ ಅಧ್ಯಕ್ಷ

ಟ್ರಂಪ್ ಮಾದರಿ

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಬ್ರೆಜಿಲ್‌ನಲ್ಲಿ ಮೊದಲ ಹಂತದ ಮತದಾನವಷ್ಟೇ ನಡೆದಿತ್ತು. ಸ್ಟೀವ್ ಬ್ಯಾನನ್ ಅವರು ಪಾಡ್‌ಕಾಸ್ಟ್ ನಡೆಸಿ, ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದರು. ಅಂತಿಮ ಫಲಿತಾಂಶ ಪ್ರಕಟವಾಗುವುದಕ್ಕೆ ಮೊದಲೇ ಅವರು ಚುನಾವಣಾ ಅಕ್ರಮ ಕುರಿತಂತೆ ಸುಳ್ಳು ಸುದ್ದಿಗಳನ್ನು ಹರಿಬಿಡುತ್ತಲೇ ಇದ್ದರು. ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿದ್ದಾಗ ಶ್ವೇತ ಭವನದ ಕಾರ್ಯತಂತ್ರ ವಿಭಾಗದ ಮುಖ್ಯಸ್ಥರಾಗಿ ಸ್ಟೀವ್ ಕೆಲಸ ಮಾಡಿದ್ದರು.

'ಬ್ರೆಜಿಲಿಯನ್ ಸ್ಪ್ರಿಂಗ್' ಎಂಬ ಹ್ಯಾಷ್‌ಟ್ಯಾಗ್ ಅನ್ನು ಕೂಡ ಸ್ಟೀವ್ ಸೃಷ್ಟಿಸಿದ್ದರು.

ಅಮೆರಿಕ ಅಧ್ಯಕ್ಷ ಹುದ್ದೆಗೆ 2020ರಲ್ಲಿ ನಡೆದ ಚುನಾವಣೆಯ ಫಲಿತಾಂಶದ ಕುರಿತು ಬೆಂಬಲಿಗರಲ್ಲಿ ಸಂದೇಹ ಮೂಡಿಸಲು ಇದೇ ಕಾರ್ಯತಂತ್ರವನ್ನು ಅನುಸರಿಸಲಾಗಿತ್ತು. ಅಮೆರಿಕದಲ್ಲಿ 2021ರ ಜನವರಿ 6ರ ಗಲಭೆಯ ಮುನ್ನಾದಿನ ನಡೆಸಿದ ಪಾಡ್‌ಕಾಸ್ಟ್‌ನಲ್ಲಿ 'ನಾಳೆ ಎಲ್ಲವೂ ತಲೆಕೆಳಗಾಗಲಿದೆ' ಎಂದು ಸ್ಟೀವ್ ಹೇಳಿದ್ದರು.

'ಲುಲ ಅವರು ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆ. ಬ್ರೆಜಿಲ್‌ನ ಜನರಿಗೆ ಅದು ಗೊತ್ತು' ಎಂದು ಸ್ಟೀವ್ ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.



ಬೊಲ್ಸೊನಾರೊ



ಲುಲ ಡಸಿಲ್ವಾ

ಬ್ರೆಜಿಲ್‌ನಲ್ಲಿ ಭಾನುವಾರ ದಾಂದಲೆ ನಡೆಸಿದವರನ್ನು 'ಸ್ವಾತಂತ್ರ್ಯ ಹೋರಾಟಗಾರರು' ಎಂದು ಕರೆದಿದ್ದಾರೆ.

ಟ್ರಂಪ್ ಮತ್ತು ಬೊಲ್ಸೊನಾರೊ ಅವರ ಮಗ ಎಡ್ವರ್ಡೊ ಬೊಲ್ಸೊನಾರೊ, ಟ್ರಂಪ್ ಅವರ ಫ್ಲಾರಿಡಾದ ರೆಸಾರ್ಟ್‌ನಲ್ಲಿ ಕಳೆದ ನವೆಂಬರ್‌ನಲ್ಲಿ ಭೇಟಿಯಾಗಿದ್ದರು. ಈ ಭೇಟಿಯ ಸಂದರ್ಭದಲ್ಲಿ ಎಡ್ವೊರ್ಡೊ ಅವರು ಸ್ಟೀವ್ ಅವರನ್ನು ಭೇಟಿಯಾಗಿದ್ದರು. ಟ್ರಂಪ್ ಅವರ ಸಲಹೆಗಾರ ಜೇಸನ್ ಮಿಲ್ಲರ್ ಅವರನ್ನೂ ಭೇಟಿಯಾಗಿದ್ದರು ಎಂಬುದು ವಾಷಿಂಗ್ಟನ್ ಪೋಸ್ಟ್ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ವರದಿಯಾಗಿತ್ತು.

ಟ್ರಂಪ್ ಅವರು ಮತದಾನ ವ್ಯವಸ್ಥೆಯ ಬಗ್ಗೆಯೇ ಅನುಮಾನ ವ್ಯಕ್ತಪಡಿಸಿದ್ದರು. ಮತಯಂತ್ರಗಳ ಮತ ಎಣಿಕೆ ವ್ಯವಸ್ಥೆ ಸರಿ ಇಲ್ಲ ಎಂಬುದು ಬೊಲ್ಸೊನಾರೊ ಅವರ ಆರೋಪವಾಗಿದೆ. ಹೀಗೆ, ಎರಡೂ ದೇಶಗಳಲ್ಲಿ ನಡೆದ ದಾಂದಲೆ, ಅದರ ಹಿಂದಿನ ಪಿತೂರಿ, ಕಾರ್ಯತಂತ್ರ ಎಲ್ಲವೂ ಒಂದೇ ರೀತಿಯದ್ದಾಗಿದೆ.

ಅಮೆರಿಕದಲ್ಲಿ ನಡೆದದ್ದೇನು?

ಡೊನಾಲ್ಡ್ ಟ್ರಂಪ್ ಬೆಂಬಲಿಗರು ರಾಜಧಾನಿ ವಾಷಿಂಗ್ಟನ್‌ನಲ್ಲಿ 2021ರ ಜನವರಿ 6ರಂದು ದಾಂದಲೆ ನಡೆಸಿದ್ದರು. ಅವರು ಸಂಸತ್ತಿಗೆ ನುಗ್ಗಿ ಕಿಟಕಿಗಳ ಗಾಜು ಒಡೆದಿದ್ದರು ಮತ್ತು ಪೀಠೋಪಕರಣಗಳಿಗೆ ಹಾನಿ ಮಾಡಿದ್ದರು. ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂಬುದು ಟ್ರಂಪ್ ಅವರ ಪ್ರತಿಪಾದನೆಯಾಗಿತ್ತು. ದಾಳಿ ನಡೆಸುವಂತೆ ತಮ್ಮ ಬೆಂಬಲಿಗರಿಗೆ ಟ್ರಂಪ್ ಅವರು ಕುಮ್ಮಕ್ಕು ನೀಡಿದ್ದರು. ಸುಳ್ಳು ಸುದ್ದಿಗಳನ್ನು ನಿರಂತರವಾಗಿ ಹರಡಿದ್ದರು.

ಮೂಲಭೂತವಾದಿಗಳ ಅಬ್ಬರ

ಬ್ರೆಜಿಲ್‌ನಲ್ಲಿ ಉಂಟಾಗಿರುವ ದಂಗೆಗೆ ಕಾರಣ ಎನ್ನಲಾಗಿರುವ ಮಾಜಿ ಅಧ್ಯಕ್ಷ ಬೊಲ್ಸೊನಾರೊ ಅವರು ತೀವ್ರ ಬಲಪಂಥೀಯವಾದಿ ಎಂಬ ಹಣೆಪಟ್ಟಿ ಹೊತ್ತಿದ್ದಾರೆ. ತೀವ್ರ ಮೂಲಭೂತವಾದವನ್ನು ಬೆಂಬಲಿಸುವ ದೊಡ್ಡ ಬೆಂಬಲಿಗರ ಪಡೆಯನ್ನೇ ಅವರು ಹೊಂದಿದ್ದಾರೆ. ಅವರ ಅಧಿಕಾರ ಅವಧಿಯಲ್ಲಿ ನಡೆದುಕೊಂಡ ರೀತಿ ಹಾಗೂ ತೆಗೆದುಕೊಂಡ ತೀರ್ಮಾನಗಳು, ಎಡಪಂಥೀಯ ಸರ್ಕಾರ ಅಧಿಕಾರಕ್ಕೆ ಬಾರದಂತೆ ತಡೆಯುವ ಎಲ್ಲ ಸೂಚನೆಗಳನ್ನು ನೀಡಿದ್ದವು.

ಕಳೆದ ಸೆಪ್ಟೆಂಬರ್‌ನಲ್ಲಿ, ಸ್ವಾತಂತ್ರ್ಯದ 200ನೇ ವರ್ಷವನ್ನು ಬ್ರೆಜಿಲ್ ಆಚರಿಸುತ್ತಿದ್ದ ವೇಳೆ, ಬೊಲ್ಸೊನಾರೊ ಅವರು ನಿರಂಕುಶಾಧಿಕಾರದ ಬಗ್ಗೆ ಮಾತನಾಡಿದ್ದರು. ರಿಯೊ ಡಿ ಜನೈರೊ ಸೇರಿದಂತೆ ಕೆಲವು ಕಡೆ ಆಯೋಜಿಸಿದ್ದ ಸಮಾರಂಭಗಳಲ್ಲಿ ಭಾಗಿಯಾಗಿದ್ದ ಬೊಲ್ಸೊನಾರೊ, 'ಇತಿಹಾಸ ಮರುಕಳಿಸುತ್ತದೆ. ಕೆಟ್ಟ ದಿನಗಳ ಮೇಲೆ ಒಳ್ಳೆಯ ದಿನಗಳು ಗೆಲುವು ಸಾಧಿಸಲಿವೆ' ಎಂದು ಹೇಳುವ ಮೂಲಕ ನಿರಂಕುಶಾಧಿಕಾರದ ಸುಳಿವು ನೀಡಿದ್ದರು. ಸುಪ್ರೀಂ ಕೋರ್ಟ್ ಅನ್ನು ಮುಚ್ಚುವ ಹಾಗೂ ಸರ್ಕಾರದ ಆಡಳಿತದಲ್ಲಿ ಸೇನೆ ಮಧ್ಯಪ್ರವೇಶಿಸುವ ಬೇಡಿಕೆಗಳನ್ನು ಸಮರ್ಥಿಸಿ ಬೊಲ್ಸೊನಾರೊ ಮಾತನಾಡಿದ್ದರು.

ಮತ್ತೆ ಅಧಿಕಾರಕ್ಕೆ ಬರುವುದು ಕಷ್ಟ ಎಂಬ ಸುಳಿವು ಸಿಕ್ಕಿದ್ದರಿಂದ, ಚುನಾವಣೆಗೆ ಒಂದು ತಿಂಗಳ ಮೊದಲೇ ಅಧ್ಯಕ್ಷರ ಬೆಂಬಲಿಗರು ಬೀದಿಗಿಳಿದು ಬೃಹತ್ ಪ್ರತಿಭಟನೆ ನಡೆಸಿದ್ದರು.

2019ರ ಜನವರಿ 1ರಂದು ಬೊಲ್ಸೊನಾರೊ ಅವರು ಅಧಿಕಾರ ವಹಿಸಿಕೊಂಡ ದಿನದಿಂದಲೇ ಮೂಲಭೂತವಾದಿ ನಿಲುವುಗಳನ್ನು ಅನುಸರಿಸಲು ಮುಂದಾದರು. ಬ್ರೆಜಿಲ್‌ನ ಸಂಸತ್ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಬಹಿರಂಗವಾಗಿ ಟೀಕಿಸಲು ಶುರು ಮಾಡಿದರು. ಪೊಲೀಸ್ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ್ದರು.

ಬೊಲ್ಸೊನಾರೊ ಅವರು ಮೂಲಭೂತವಾದಿ ಸಿದ್ಧಾಂತದ ಸಂಘಟನೆಗಳನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ ಎನ್ನುತ್ತಾರೆ ವಿಶ್ಲೇಷಕರು. ಬಲಪಂಥದ ಬಗ್ಗೆ ಒಲವುಳ್ಳ ಈ ಸಂಘಟನೆಗಳ ಸದಸ್ಯರೇ ಬ್ರೆಜಿಲ್‌ನಲ್ಲಿ ಬೀದಿಗಿಳಿದು ದಾಳಿ ಎಸಗಿದ್ದಾರೆ ಎನ್ನಲಾಗಿದೆ.

ಆಧಾರ: ಎಪಿ, ರಾಯಿಟರ್ಸ್, ಬಿಬಿಸಿ

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಸರ್ಕಾರ ಅನುಷ್ಠಾನಕ್ಕೆ ತರುತ್ತದೆ ಎನ್ನುವ ನಂಬಿಕೆ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಬಿಐಎಸ್ ಮಾನದಂಡ ನಿಗದಿ

ಎಲ್ಲ ಉಪಕರಣಗಳಿಗೆ ಟೈಪ್–ಸಿ ಚಾರ್ಜರ್

ನವದೆಹಲಿ (ಪಿಟಿಐ): ಭಾರತೀಯ ಮಾನಕ ಸಂಸ್ಥೆಯು (ಬಿಐಎಸ್) ಮೂರು ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಗುಣಮಟ್ಟ ಮಾನದಂಡಗಳನ್ನು ನಿಗದಿಪಡಿಸಿದೆ. ಡಿಜಿಟಲ್ ಟಿ.ವಿ ರಿಸೀವರ್‌ಗಳು, ಟೈಪ್–ಸಿ ಯುಎಸ್‌ಬಿ ಕೇಬಲ್ ಹಾಗೂ ವಿಡಿಯೊ ಕಣ್ಗಾವಲು ವ್ಯವಸ್ಥೆಗಳಿಗೆ (ವಿಎಸ್‌ಎಸ್) ಮಾನದಂಡಗಳನ್ನು ಗೊತ್ತುಪಡಿಸಿದೆ.

ಲ್ಯಾಪ್‌ಟಾಪ್, ಮೊಬೈಲ್ ಸೇರಿದಂತೆ ಎಲ್ಲ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳಲ್ಲೂ ಏಕರೂಪ ಬಳಕೆಗೆ ಹೊಂದುವ ರೀತಿಯಲ್ಲಿ ಟೈಪ್–ಸಿ ವಿಧದ ಪೋರ್ಟ್, ಪ್ಲಗ್, ಕೇಬಲ್‌ಗಳನ್ನು ತಯಾರಿಸಬೇಕು ಎಂಬ ಮಾನದಂಡ ರೂಪಿಸಲಾಗಿದೆ. ದೇಶದಲ್ಲಿ ಮಾರಾಟವಾಗುವ ಎಲ್ಲ ರೀತಿಯ ಸ್ಮಾರ್ಟ್‌ಫೋನ್‌ಗಳು ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಏಕರೂಪದ ಚಾರ್ಜಿಂಗ್ ಸವಲತ್ತು ಒದಗಿಸುವುದಕ್ಕಾಗಿ ಈ ಮಾನದಂಡ ಗೊತ್ತುಪಡಿಸಲಾಗಿದೆ.

ಈ ಮಾನದಂಡದಿಂದಾಗಿ, ಪ್ರತಿಯೊಬ್ಬ ಗ್ರಾಹಕರಿಗೂ ಪ್ರತ್ಯೇಕ ಚಾರ್ಜರ್ ಅನ್ನು ಒದಗಿಸುವ ಅಗತ್ಯ ಇರುವುದಿಲ್ಲ. ಪ್ರತಿ ಬಾರಿ ಉಪಕರಣ ಖರೀದಿಸಿದಾಗ ಗ್ರಾಹಕರು ತಮ್ಮ ಮೊಬೈಲ್‌ಗೆ ಹೊಂದಿಕೆಯಾಗಬಲ್ಲ ಪ್ರತ್ಯೇಕ ಚಾರ್ಜರ್ ಅನ್ನು ಖರೀದಿಸುವ ಅಗತ್ಯವಿರುವುದಿಲ್ಲ. ಈ ಕ್ರಮದಿಂದ ಇ–ತ್ಯಾಜ್ಯ ಉತ್ಪಾದನೆಯೂ ತಗ್ಗಲಿದ್ದು, ಚಾರ್ಜರ್ ಖರೀದಿಗೆ ಮಾಡುವ ವೆಚ್ಚವೂ ಉಳಿತಾಯವಾಗಲಿದೆ. ಹಲವು ದೇಶಗಳು ಈ ಮಾನದಂಡವನ್ನು ಅನುಸರಿಸುವತ್ತ ಹೆಜ್ಜೆ ಇರಿಸಿವೆ.

ಇತ್ತೀಚಿನ ದಿನಗಳಲ್ಲಿ ವಿಡಿಯೊ ನಿಗಾ ವ್ಯವಸ್ಥೆಗೆ ಹೆಚ್ಚಿನ ಬೇಡಿಕೆಯಿದ್ದು, ಗ್ರಾಹಕರಿಗೆ ಯಾವ ರೀತಿಯ ಉಪಕರಣಗಳನ್ನು ಖರೀದಿಸುವುದು ಸೂಕ್ತ ಎಂಬ ಗೊಂದಲವಿದೆ. ಇದನ್ನು ನಿವಾರಣೆ ಮಾಡುವುದಕ್ಕಾಗಿ ಮಾನಕ ಸಂಸ್ಥೆಯು ವಿಡಿಯೊ ನಿಗಾ ವ್ಯವಸ್ಥೆಗೆ ಮಾನದಂಡ ರೂಪಿಸಿದೆ. ಕ್ಯಾಮರಾ, ಇಂಟರ್‌ಫೇಸ್, ಇನ್‌ಸ್ಟಾಲೇಷನ್ ಮೊದಲಾದವುಗಳಿಗೆ ನಿಯಮಗಳನ್ನು ಗೊತ್ತುಪಡಿಸಿದೆ. ಭದ್ರತಾ ವ್ಯವಸ್ಥೆಯನ್ನು ಹೆಚ್ಚು ನಿಖರವಾಗಿ ಹಾಗೂ ಕಡಿಮೆ ವೆಚ್ಚದಲ್ಲಿ ಪಡೆಯಲು ಈ ಮಾನದಂಡಗಳು ನೆರವಾಗುತ್ತವೆ.

'ಸೆಟ್‌ಟಾಪ್ ಬಾಕ್ಸ್ ಬೇಡ'

ಜನರು ಶುಲ್ಕ ಸಹಿತ ಹಾಗೂ ಉಚಿತ ಟಿ.ವಿ ವಾಹಿನಿಗಳನ್ನು ವೀಕ್ಷಿಸಬೇಕಾದರೆ, ಸೆಟ್‌ಟಾಪ್ ಬಾಕ್ಸ್‌ಗಳನ್ನು ಖರೀದಿಸಬೇಕಿದೆ. ದೂರದರ್ಶನದ ಉಚಿತ ಚಾನಲ್‌ಗಳನ್ನು ವೀಕ್ಷಿಸಬೇಕಿದ್ದರೂ, ಸೆಟ್‌ಟಾಪ್ ಬಾಕ್ಸ್ ಖರೀದಿಸಲೇಬೇಕಿದೆ. ಆದರೆ, ಉಚಿತ ಚಾನಲ್‌ಗಳನ್ನು ಸೆಟ್‌ಟಾಪ್ ಬಾಕ್ಸ್ ಇಲ್ಲದೆಯೇ ವೀಕ್ಷಿಸುವುದು ಇನ್ನುಮುಂದೆ ಸಾಧ್ಯವಾಗಲಿದೆ.

ಸ್ಯಾಟಲೈಟ್ ಟ್ಯೂನರ್‌ಗಳನ್ನು ಅಳವಡಿಸಿದ ರಿಸೀವರ್‌ಗಳನ್ನು ಟಿ.ವಿ ತಯಾರಿಸುವಾಗಲೇ ಅಳವಡಿಸಲಾಗುತ್ತದೆ. ತಂತ್ರಜ್ಞಾನದ ಈ ಸೌಲಭ್ಯದಿಂದ ಸರ್ಕಾರದ ಹಲವು ಕಾರ್ಯಕ್ರಮಗಳು, ಶೈಕ್ಷಣಿಕ ಮಾಹಿತಿ ವೀಕ್ಷಕರಿಗೆ ಸುಲಭವಾಗಿ ಸಿಗಲಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಚಲಾವಣೆಯಲ್ಲಿರುವ ರೂಪಾಯಿ ನೋಟುಗಳ ಮೇಲೆ ಯಾವುದೇ ರೀತಿಯ ಬರಹ ಇದ್ದರೆ, ಆ ನೋಟು ಚಲಾವಣೆಗೆ ಯೋಗ್ಯವಲ್ಲ ಎಂದು ತಿಳಿಸುವ ಸಂದೇಶವೊಂದು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿದೆ. ನೋಟುಗಳ ಮೇಲೆ ಅಕ್ಷರಗಳು ಅಥವಾ ಸಂಖ್ಯೆಯನ್ನು ಬರೆಯುವುದನ್ನು ಕೆಲವರು ರೂಢಿ ಮಾಡಿಕೊಂಡಿದ್ದಾರೆ. 'ನೋಟುಗಳ ಮೇಲೆ ಯಾವುದೇ ರೀತಿಯ ಬರಹ ಕಂಡುಬಂದರೂ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ' ಎಂಬುದಾಗಿ ಸಂದೇಶದಲ್ಲಿ ಹೇಳಲಾಗಿದೆ. ಆದರೆ ಇದು ಸುಳ್ಳು ಸಂದೇಶ.

ಬರಹ ಇರುವ ನೋಟುಗಳನ್ನು ರಿಸರ್ವ್ ಬ್ಯಾಂಕ್ ಅಮಾನ್ಯ ಮಾಡಲಿದೆ ಎಂಬ ಸಂದೇಶ ಸುಳ್ಳು ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಬರಹ ಇರುವ ನೋಟುಗಳು ಚಲಾವಣೆಗೆ ಯೋಗ್ಯವಾಗಿವೆ. ಜನರು ನೋಟುಗಳ ಮೇಲೆ ಏನನ್ನೂ ಬರೆಯಬಾರದು ಎಂದು ಆರ್‌ಬಿಐ ಮನವಿ ಮಾಡಿದೆ. ಸ್ವಚ್ಛ ನೋಟು ನೀತಿಯ ಪ್ರಕಾರ, ನೋಟುಗಳ ಮೇಲೆ ಬರೆಯುವುದರಿಂದ ಅವು ವಿರೂಪಗೊಳ್ಳುತ್ತವೆ ಹಾಗೂ ಅವುಗಳ ಆಯಸ್ಸು ಕಡಿಮೆಯಾಗುತ್ತದೆ. ಹೀಗಾಗಿ ಜನರು ನೋಟುಗಳ ಸ್ವಚ್ಛತೆಯನ್ನು ಕಾಪಾಡಬೇಕು ಎಂದು ಮನವಿ ಮಾಡಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಕ್ತಿಬೀಜ

ಸರಿ ಹದದ ಕಾಳು ತಿರೆಯಪ್ಪಿದೊಡೆ
ಮೊಳೆಯುವುದು |
ಹುರಿದೊಡದು ಮೊಳೆಯದರಳಹುದು ಬಾಯ್ಸವಿಗೆ
ಪರಮತತ್ತ್ವಜ್ಞಾನಿಯೊಡರಿಸುವ ಕರುಮಗಳು |
ಮರುಬೆಳೆಗೆ ಬಿತ್ತಲ್ಲ – ಮಂಕುತಿಮ್ಮ || **796** ||

ಪದ-ಅರ್ಥ: ತಿರಿಯೊಪ್ಪಿದೊಡೆ = ತಿರೆಯ(ಭೂಮಿಯ) + ಅಪ್ಪಿದೊಡೆ(ಅಪ್ಪಿದಾಗ), ಹುರಿದೊಡದು = ಹುರಿದೊಡೆ + ಅದು, ಮೊಳೆಯದರಳಹುದು = ಮೊಳೆಯದೆ + ಅರಳು + ಅಹುದು, ಬಾಯ್ಸವಿಗೆ = ಬಾಯಿಸವಿಗೆ, ಪರಮತತ್ತ್ವಜ್ಞಾನಿಯೊಡರಿಸುವ = ಪರಮ + ತತ್ವಜ್ಞಾನಿ + ಒಡರಿಸಂವ(ಮಾಡುವ), ಕರುಮಗಳು = ಕರ್ಮಗಳು, ಮರುಬೆಳೆಗೆ = ಮತ್ತೊಂದು ಬೆಳೆಗೆ, ಬಿತ್ತಲ್ಲ = ಬೀಜವಲ್ಲ.

ವಾಚ್ಯಾರ್ಥ: ಸರಿಯಾದ ಸಮಯಕ್ಕೆ ಹದವಾದ ಕಾಳು ಭೂಮಿಯಲ್ಲಿ ಬಿದ್ದರೆ ಮೊಳೆಯುತ್ತದೆ. ಆದರೆ ಬೀಜವನ್ನು ಹುರಿದರೆ ಅದು ಮೊಳೆಯದೆ ಬಾಯಿಸವಿಗೆ ಅರಳಾಗುತ್ತದೆ. ಅದನ್ನು ಮತ್ತೊಂದು ಬೆಳೆಗೆ ಬೀಜವಾಗಿ ಬಳಸಲು ಸಾಧ್ಯವಿಲ್ಲ.ಪರಮತತ್ತ್ವಜ್ಞಾನಿಯ ಕರ್ಮಗಳು ಅಂತೆ ಮರುಜನ್ಮಕ್ಕಲ್ಲ.

ವಿವರಣೆ: ಕಗ್ಗ ಒಂದು ಸುಂದರವಾದ ರೂಪಕದೊಂದಿಗೆ, ಅಧ್ಯಾತ್ಮಿಕ ಸತ್ಯಕ್ಕೆ ನೆಗೆಯುತ್ತದೆ. ಒಂದು ಸರಿಯಾಗಿ ಹದವಾದ ಕಾಳು, ಸರಿಯಾದ ಸಮಯದಲ್ಲಿ, ಸಿದ್ಧವಾದ ಮಣ್ಣಿನಲ್ಲಿ ಬಿದ್ದಾಗ, ಮೊಳಕೆಯೊಡೆಯುತ್ತದೆ. ಆದರೆ ಆ ಬೀಜವನ್ನು ಹುರಿದರೆ, ನಂತರ ಮಣ್ಣಿನಲ್ಲಿ ಹಾಕಿದರೆ ಅದು ಮೊಳೆಯಲಾರದು. ಆದರೆ ಅದು ಹುರಿದಾಗ ಕೇವಲ ಅರಳಾಗಿ ಬಾಯಿಸವಿಗೆ ವಸ್ತುವಾಗುತ್ತದೆ. ಹುರಿದಾಗ ಅದು ಮತ್ತೊಮ್ಮೆ ಮೊಳೆಯುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅದು ಮತ್ತೊಮ್ಮೆ ಬೆಳೆಯಾಗಲು ಸಾಧ್ಯವಿಲ್ಲ. ಅದನ್ನೇ ಕಗ್ಗ "ಮರುಬೆಳೆಗೆ ಬಿತ್ತಲ್ಲ" ಎನ್ನುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಕಗ್ಗ ಈ ಉದಾಹರಣೆಯನ್ನು ಮುಂದಿಟ್ಟುಕೊಂಡು ನಿಷ್ಕಾಮ ಕರ್ಮದ ಬಗ್ಗೆ ತಿಳಿಹೇಳುತ್ತದೆ. ಯಾವೊಬ್ಬ ವ್ಯಕ್ತಿಯೂ ಒಂದು ಕ್ಷಣವೂ ಕ್ರಿಯಾಶೂನ್ಯವಾಗಿ ಇರಲಾರ. ಕರ್ಮದಲ್ಲೂ ಎರಡು ಬಗೆ ಒಂದು ಕಾಮಕರ್ಮ, ಎರಡನೆಯದು ನಿಷ್ಕಾಮ ಕರ್ಮ. ದೇವತಾಸಮರ್ಪಣೆ ಇಲ್ಲದೇ, ಯಜ್ಞ ಬುದ್ಧಿಯಿಂದಲ್ಲದೆ ಮಾಡಿದ ಕರ್ಮ, ನಮ್ಮನ್ನು ಈ ಲೋಕಕ್ಕೆ ಬಿಗಿಯುತ್ತದೆ. "ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ|" ಎನ್ನುತ್ತದೆ ಭಗವದ್ಗೀತೆ. ಇದು ಹದವಾದ ಕಾಳು ನೆಲಕ್ಕೆ ಬಿದ್ದಂತೆ. ಅದರಿಂದ ಬೆಳೆ, ಬೆಳೆಯಿಂದ ಬೀಜ, ಮತ್ತೆ ಬೀಜದಿಂದ ಬೆಳೆ ಹೀಗೆ ಚಕ್ರ ಸುತ್ತುತ್ತಲೇ ಇರುತ್ತದೆ. ಕಾಮಫಲ ಮನುಷ್ಯರನ್ನು ಜನ್ಮಜನ್ಮಾಂತರಕ್ಕೆ ಭೂಮಿಯಲ್ಲಿ ಬಂಧಿಸಿ ಇಡುತ್ತದೆ. ಯಾರು ಈಶ್ವರಾರ್ಪಣ ಭಾವದಿಂದ ಕರ್ಮವನ್ನು ಮಾಡುತ್ತ, ಫಲಾಸಕ್ತಿಯಿಂದ ಮುಕ್ತನಾಗುತ್ತಾನೋ ಅವನೇ ಪರಮತತ್ವಜ್ಞಾನಿ. ಅವನು ಮಾಡುವ ಕರ್ಮವೆಲ್ಲ ನಿಷ್ಕಾಮ ಕರ್ಮ. ಶ್ರೀ ರಮಣ ಮಹರ್ಷಿಗಳು ಹೇಳಿದರು, ಈಶ್ವರಾರ್ಪಿತಂನೇಚ್ಛಯಾಕೃತಂ ಚಿತ್ತಶೋಧಕ ಮುಕ್ತಿಸಾಧಕಂ "ಭಗವದರ್ಪಣ ಬುದ್ಧಿಯಿಂದ, ಸ್ವಇಚ್ಛೆಯನ್ನು ತೊರೆದು ಮಾಡಿದ ಕರ್ಮ ಚಿತ್ತ ಶೋಧಕವಾಗುವುದರೊಂದಿಗೆ ಮುಕ್ತಿಸಾಧಕವಾಗುತ್ತದೆ". ಮುಕ್ತಿಯೆಂದರೆ ಪುನರ್ಜನ್ಮವಿಲ್ಲ. ಇದು ಮತ್ತೊಂದು ಬೆಳೆಗೆ ಸಾಧ್ಯವಾಗದ ಬೀಜ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 10, 2023

ಶ್ರೀಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ತೃತೀಯ ಗಂ. 12-10 ನಕ್ಷತ್ರ: ಆಶ್ಲೇಷ ಗಂ. 09-01 ಯೋಗ: ಪ್ರೀತಿ ಗಂ. 11-19, ಕರಣ: ವಿಷ್ಟಿ ಗಂ. 12-10, ಧನುರ್ ಮಾಸದ 25 ನೇ ದಿನ.
ರಾಹುಕಾಲ : ಮಧ್ಯಾಹ್ನ 03-00–04-30, ಸೂರ್ಯೋದಯ : 07-00 ಸೂರ್ಯಾಸ್ತ : 06-16, ಮುಸ್ಲಿಂ ದಿನಾಂಕ : 17 ಜುಮಾದುಸ್ಸಾನಿ
ದಿನ ವಿಶೇಷ : ಸಂಕಷ್ಟಹರ ಚತುರ್ಥಿ
ಅದೃಷ್ಟ ಸಂಖ್ಯೆ : 5, 9

ಮೇಷ: ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳು ಬರುವುವು. ವ್ಯಕ್ತಿಯಿಂದ ಅಥವಾ ಖಾಸಗೀ ಸಂಸ್ಥೆಯಿಂದ ಹಣ ಪಡೆದುಕೊಂಡು ಸ್ವಂತ ಉದ್ಯಮ ಆರಂಭಿಸುವ ಆಲೋಚನೆ ಮಾಡುವುದು ಸರಿಯಲ್ಲ.

ವೃಷಭ: ಬೆಲೆ ಬಾಳುವ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡುವಿರಿ. ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ವ್ಯಾಪಾರ ವ್ಯವಹಾರ ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ. ಬಿಳಿ ಬಣ್ಣ ಶುಭ ತರಲಿದೆ.

ಮಿಥುನ: ಈ ದಿನದಂದು ನಡೆಯುವ ಕಹಿ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವು ಕೇವಲ ಕ್ಷಣಿಕವಾದದ್ದು. ಉದ್ಯೋಗದಲ್ಲಿ ಉನ್ನತ ಪದವಿ ದೊರೆಯುವ ಅಥವಾ ಸ್ಥಳ ಬದಲಾವಣೆಯ ಸಾಧ್ಯತೆ ಇದೆ.

ಕರ್ಕಾಟಕ: ಅಂಕಣಗಾರರಿಗೆ, ಲೇಖಕರಿಗೆ ಉತ್ತೇಜನದ ಕೊರತೆ ಕಾಣಲಿದೆ. ಸಣ್ಣ ಮಕ್ಕಳ ವರ್ತನೆ ಮನಸ್ಸಿಗೆ ಸಂತೋಷ ತಂದುಕೊಡಲಿದೆ.ಆಹಾರದಿಂದ ಆರೋಗ್ಯ ಹದಗೆಡುವ ಲಕ್ಷಣಗಳಿವೆ.

ಸಿಂಹ: ಮನೆಯಲ್ಲಿ ಸಂತಸದ ವಾತಾವರಣದಿಂದ ಹಿರಿಯರಿಗೆ ನೆಮ್ಮದಿ ಇರುವುದು. ಹೊಸ ಜನರಲ್ಲಿ ಮತ್ತು ಹೊಸ ಸ್ಥಳದಲ್ಲಿ ಹೊಂದಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳುವಿರಿ. ಕೆಲಸ ಶ್ರದ್ಧೆಯಿಂದ ಮಾಡಿದರೆ ಜಯ.

ಕನ್ಯಾ: ವೈದ್ಯ ವೃತ್ತಿಯಲ್ಲಿನ ನಿಮ್ಮ ಸಾಧನೆಗೆ ಸಾಮಾಜಿಕವಾಗಿ ಗೌರವ ಪಡೆದುಕೊಳ್ಳುವಿರಿ. ಹೊಸದೊಂದು ಆದಾಯದ ದಾರಿ ಮುಂದೆ ಬರಲಿದೆ. ಧೈರ್ಯಂ ಸರ್ವತ್ರ ಸಾಧನಂ ಎನ್ನುವ ವಾಕ್ಯದಂತೆ ಹೆದರದೆ ಒಪ್ಪಿಕೊಳ್ಳಿ.

ತುಲಾ: ಈ ದಿನ ನೀವು ಆಕಸ್ಮಿಕವಾಗಿ ನಿಮ್ಮ ಆತ್ಮೀಯರನ್ನು ಭೇಟಿ ಮಾಡಲಿದ್ದೀರಿ. ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಹೆಜ್ಜೆ ಇಡುವುದು ಸೂಕ್ತವಾದದ್ದು. ಪುಸ್ತಕ ವ್ಯಾಪಾರಿಗಳಿಗೆ ಉತ್ತಮ ಲಾಭ.

ವೃಶ್ಚಿಕ: ಸಂತೋಷದ ನಡುವೆಯೂ ಒತ್ತಡದಿಂದಿರುವುದು ಜಾಯಮಾನ. ಸಕ್ರಿಯ ಹಾಗೂ ಕಾರ್ಯ ಮಗ್ನತೆಯ ದಿನವು ಇದಾಗಿದೆ. ವ್ಯವಹಾರದಲ್ಲಿ ಪಾಲುದಾರರಿಂದ ಮೋಸ ಹೋಗುವ ಸಾಧ್ಯತೆ ಅತ್ಯಧಿಕವಾಗಿರಲಿದೆ.

ಧನು: ಯಶಸ್ಸು ಹುಡುಕಿಕೊಂಡು ಬರುವುದರಿಂದ ಹೆಚ್ಚಿನ ಸಂತಸ ಸಿಗಲಿದೆ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನರಕ್ಕೇರಲು ಇದು ಸಕಾಲ. ಹರಿತಾದ ಯಂತ್ರಗಳ ಕೆಲಸ ಮಾಡುವವರು ಈ ದಿನ ಜಾಗ್ರತರಾಗಿರಿ.

ಮಕರ: ಬಹಳ ದಿನಗಳಿಂದ ಪರಿಶ್ರಮಕ್ಕೆ ತಕ್ಕಂಥಹ ಆದಾಯವಿಲ್ಲದೆ ಸೊರಗಿದ್ದ ನಿಮಗೆ ಇಂದು ಅತಿ ಹೆಚ್ಚಿನ ವರಮಾನದ ಮಾರ್ಗವನ್ನು ಸ್ನೇಹಿತರೊಬ್ಬರು ತೋರುವರು. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚಿರುವುದು.

ಕುಂಭ: ಕೌಟುಂಬಿಕ ಸಮಸ್ಯೆಗಳ ಪರಿಹಾರಕ್ಕಾಗಿ ಕುಲದೇವರ ದರ್ಶನ ಮಾಡಿರಿ. ನಿಮ್ಮ ಮನದ ಮಾತುಗಳಿಗೆ ಬೆಲೆ ಕೊಡುವುದು ಉತ್ತಮ. ಸ್ನೇಹಿತರು ನಿಮ್ಮ ಆಲೋಚನೆಗಳನ್ನು ಗೌರವಿಸುವುದಲ್ಲದೆ ಸಲಹೆಗಳನ್ನು ಕೇಳಲಿದ್ದಾರೆ.

ಮೀನ: ವ್ಯಾಪಾರಿಗಳಿಗೆ ಇಂದು ಸ್ವಲ್ಪ ಮಟ್ಟಿನ ಬಿಡುವು ಸಿಗಲಿದೆ. ಕಳೆದು ಹೋಗಿರಬಹುದೆಂದು ತಿಳಿದಿದ್ದ ದಾಖಲೆ ಪತ್ರಗಳು ಸಿಕ್ಕು ಮನಸ್ಸಿಗೆ ನೆಮ್ಮದಿ. ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂತಸದ ಸುದ್ದಿ ಕೇಳಲಿದ್ದೀರಿ.

ಪದಬಂಧ 5195

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೋಲಿಕೆಗೆ ಮೀರಿದುದು (4)
3.ಮುತ್ತಿಕ್ಕುವಂತೆ ಮಧುರವಾಗಿಹ ತುಟಿ (3)
4.ದೊಡ್ಡ ನಗಾರಿ ಇಲ್ಲಿದೆ (4)
6.ಒನಪು ತೋರಿದಾಗ ಬಂದಿರುವ ಸ್ಮರಣೆ (3)
8.ಅರ್ಧ ಚಂದ್ರಾಕೃತಿ ರಚನೆ (3)
9.ಕರುವಿನೊಳಗಿರುವ ಬೆನ್ನೆಲಬು (3)
10.ಬಿರುಸಾದುದನ್ನು ಹೀಗೆನ್ನಿ (3)
13.ತಪ್ಪನ್ನು ಮನ್ನಿಸುವಿಕೆ (4)
15.ಈ ರೀತಿ ಕೋಪಗೊಳ್ಳು! (3)
16.ಒಂದು ಸಂಖ್ಯೆಯನ್ನು ಮತ್ತೊಂದರಿಂದ ಗುಣಿಸುವುದು (4)

ಮೇಲಿಂದ ಕೆಳಕ್ಕೆ
1.ರಾಜನ ಮನೆ (4)
2.ಮಧುರ ಫಲ ನೀಡುವ ವೃಕ್ಷ (2)
3.ಸ್ವಲ್ಪಮಾತ್ರ ತಿಳಿದಿರುವವ (3)
5.ನಷ್ಟ ಈ ರೀತಿ ಬಂದಿದೆ (3)
7.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)
9.ಕಕ್ಷದಲ್ಲಿ ದೊರೆತಿರುವ ಅನುಗ್ರಹ (3)
11.ಸುರದೊಳಗಿನ ಚಂದ್ರ ಕಾಣುತ್ತಿದ್ದಾನೆಯೇ? (4)
12.ತೊಲಗುವಾತನ ಚರ್ಮ! (3)
14.ನಡುಗುವವನ ನೋಡಿಯೇ ಈ ಮಂದಹಾಸ! (2)



5194ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಪ್ರಲಾಪ 3.ಹಲುಬೆ
5.ಗಣಪ 7.ಗಲಾಟೆ
8.ವಿಮಾನಯಾನ
11.ಗುಲಾಬಿ 12.ಕಲಭ
15.ಕಲ್ಯಾಣಿ 16.ವಿಚ್ಛೇದನ

ಮೇಲಿಂದ ಕೆಳಕ್ಕೆ:
1.ವಿಯೋಗ 2.ಪಕ್ಷ
3.ಹರಟೆ 4.ಬೆಸುಗೆ
6.ಪಲ್ಲವಿ 7.ಗಗನಚುಂಬಿ
9.ನಡುಕ 10.ದೈಹಿಕ
11.ಗುರಾಣಿ 13.ಭವನ
14.ಭವಿ

ಸುಡೊಕು 5581

			4		3	9	6	
		8						5
		3	5		8	7	2	1
		9						7
	3	7	1	8	6	4	5	
8						2	1	
6		5		2				4
3						5		2
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5580 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಷೇರುಪೇಟೆ ವಹಿವಾಟು ▲847



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,859
ಇಂದಿನ ಅಂತ್ಯ	18,101
▲	242
ದಿನದ ಗರಿಷ್ಠ	18,141

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹577

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹1260 (1270)
ಸೂರ್ಯಕಾಂತಿ (ರಿಫೈನ್ಡ್)	₹1300 (1310)
ಪಾಮೋಲಿನ್	₹948 (953)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1700
ಮಧ್ಯಮ	₹1000-1200
ಸಣ್ಣ	₹500-700

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹535-632
ದ್ವಿತಳಿ (ಬಿ.ವಿ)	₹450-795

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13750
ಎಸಿ	₹6720
ಆರ್‌ಪಿ	₹8000
ಆರ್‌ಸಿ	₹4530

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಮೆಟಾ ಇಂಡಿಯಾಗೆ ವಿಕಾಸ್

ನವದೆಹಲಿ (ಪಿಟಿಐ): ಮೆಟಾ ಕಂಪನಿಯ ಭಾರತದ ಜಾಗತಿಕ ಉದ್ಯಮ ಸಮೂಹದ ನಿರ್ದೇಶಕರಾಗಿ ಟಾಟಾ ಕ್ಲಿಕ್‌ನ ಮಾಜಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ವಿಕಾಸ್ ಪುರೋಹಿತ್ ನೇಮಕ ಆಗಿದ್ದಾರೆ.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ವ್ಯಾಸಂಗ ಮಾಡಿರುವ ವಿಕಾಸ್ ಅವರು ವಿವಿಧ ಕ್ಷೇತ್ರಗಳಲ್ಲಿ 20 ವರ್ಷಕ್ಕೂ ಹೆಚ್ಚಿನ ಅನುಭವ ಹೊಂದಿದ್ದಾರೆ.

ಟಾಟಾ ಕ್ಲಿಕ್, ಅಮೆಜಾನ್, ಆದಿತ್ಯ ಬಿರ್ಲಾ ಸಮೂಹ, ರಿಲಯನ್ಸ್‌ನಂತಹ ಪ್ರಮುಖ ಕಂಪನಿಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಭಾರತದ ಪ್ರಮುಖ ಜಾಹೀರಾತುದಾರರು ಮತ್ತು ಏಜೆನ್ಸಿ ಪಾಲುದಾರರೊಂದಿಗೆ ಉತ್ತಮ ಸಂಬಂಧ ಹೊಂದುವ ಮೂಲಕ ಕಂಪನಿಯ ವರಮಾನ ಹೆಚ್ಚಿಸಲು ವಿಕಾಸ್ ಅವರು ಕಾರ್ಯತಂತ್ರ ರೂಪಿಸಲಿದ್ದಾರೆ ಎಂದು ಕಂಪನಿಯು ಸೋಮವಾರ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮುಂಬೈ ಧಾರಣೆ

ಶೇಂಗಾ

9–1–2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11600-11700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಸೋಯಾ ಕಚ್ಚಾ	--- (1190)
ಪಾಮ್ ವಾರದ ಡೆಲಿವರಿ	946 (955)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,050 (55,765)
ಬೆಳ್ಳಿ ಕೆ.ಜಿ 68,800 (68,400)

ಆವರಣದಲ್ಲಿ ಶನಿವಾರದ ಧಾರಣೆ

ಸುಧಾ, ಮಯೂರ ಓದಿರಿ

ಮಾರುಕಟ್ಟೆ ತಜ್ಞರ ಅಂದಾಜಿಗಿಂತ ತುಸು ಕಡಿಮೆ ಲಾಭ

ಟಿಸಿಎಸ್ ಲಾಭ ಶೇ 11ರಷ್ಟು ಹೆಚ್ಚಳ

ಮುಂಬೈ/ಬೆಂಗಳೂರು (ಪಿಟಿಐ/ರಾಯಿಟರ್ಸ್): ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ಡಿಸೆಂಬರ್ ತ್ರೈಮಾಸಿಕದ ಲಾಭದಲ್ಲಿ ಶೇಕಡ 11ರಷ್ಟು ಏರಿಕೆ ಆಗಿದ್ದು, ಕಂಪನಿಯು ₹10,846 ಕೋಟಿ ಲಾಭ ಗಳಿಸಿದೆ.

ಮುಂದಿನ ದಿನಗಳಲ್ಲಿ ವಹಿವಾಟು ಇನ್ನಷ್ಟು ಉತ್ತಮವಾಗಲಿದೆ ಎಂಬ ಆಶಾವಾದವನ್ನು ಕಂಪನಿ ವ್ಯಕ್ತಪಡಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಕಂಪನಿಯ ನೌಕರರ ಸಂಖ್ಯೆ ತಗ್ಗಿದೆ. ಆದರೆ ಮುಂದಿನ ಆರ್ಥಿಕ ವರ್ಷದಲ್ಲಿ ಒಂದೂವರೆ ಲಕ್ಷ ಜನರನ್ನು ನೇಮಕ ಮಾಡಿಕೊಳ್ಳುವುದಾಗಿ ಹೇಳಿದೆ. ಕಂಪನಿಯು ಪ್ರತಿ ಷೇರಿಗೆ ₹ 67 ವಿಶೇಷ ಡಿವಿಡೆಂಡ್ ಸೇರಿದಂತೆ ಒಟ್ಟು ₹ 75ರಷ್ಟು ಡಿವಿಡೆಂಡ್ ಘೋಷಿಸಿದೆ.

ಮುಖ್ಯಾಂಶಗಳು
- ₹ 67 ವಿಶೇಷ ಡಿವಿಡೆಂಡ್ ಘೋಷಿಸಿದ ಕಂಪನಿ
- ಮುಂದಿನ ವರ್ಷ 1.50 ಲಕ್ಷ ಜನರ ನೇಮಕ

ಕಂಪನಿಯ ಒಟ್ಟು ವರಮಾನವು ಶೇ 19.1ರಷ್ಟು ಹೆಚ್ಚಾಗಿದ್ದು, ₹ 58,229 ಕೋಟಿಗೆ ತಲುಪಿದೆ.

‘ಉತ್ತರ ಅಮೆರಿಕ ಹಾಗೂ ಬ್ರಿಟನ್ನಿನಲ್ಲಿನ ವಹಿವಾಟುಗಳ ವಿಚಾರವಾಗಿ ಕಂಪನಿ ಹೆಚ್ಚು ವಿಶ್ವಾಸ ಹೊಂದಿದೆ. ಆದರೆ, ಯುರೋಪಿನಲ್ಲಿ ಅಲ್ಪಾವಧಿಯ ಅನಿಶ್ಚಿತತೆಗಳು ಇವೆ. ಜಾಗತಿಕ ಬಿಕ್ಕಟ್ಟುಗಳು ಕಂಪನಿಗಳ ಐ.ಟಿ. ಸೇವಾ ವೆಚ್ಚಗಳನ್ನು ಕಡಿಮೆ ಮಾಡಬಹುದು’ ಎಂದು ಕಂಪನಿಯ ಸಿಇಒ ರಾಜೇಶ್ ಗೋಪಿನಾಥನ್ ಹೇಳಿದ್ದಾರೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಸಿಬ್ಬಂದಿ ಸಂಖ್ಯೆಯು 2,197ರಷ್ಟು ಕಡಿಮೆ ಆಗಿದೆ. ಕಂಪನಿಯಲ್ಲಿ ಈಗ 6.13 ಲಕ್ಷ ನೌಕರರು ಇದ್ದಾರೆ. ಕಂಪನಿಯು ಮುಂದಿನ ಹಣಕಾಸು ವರ್ಷದಲ್ಲಿ ವೃತ್ತಿ ಅನುಭವ ಇಲ್ಲದ 40 ಸಾವಿರ ಜನರನ್ನು ಹೊಸದಾಗಿ ನೇಮಕ ಮಾಡಿಕೊಳ್ಳಲಿದೆ.

ಮಾರುಕಟ್ಟೆ ತಜ್ಞರು ಮತ್ತು ಹೂಡಿಕೆದಾರರು ಟಿಸಿಎಸ್ ಕಂಪನಿಯ ತ್ರೈಮಾಸಿಕ ಫಲಿತಾಂಶದ ಮೇಲೆ ಗಮನ ಇರಿಸಿದ್ದಾರೆ. ಅಮೆರಿಕ ಮತ್ತು ಯುರೋಪಿನಲ್ಲಿ ಆರ್ಥಿಕ ಹಿಂಜರಿತ ಎದುರಾದರೆ ದೇಶದ ಐ.ಟಿ. ಸೇವಾ ವಲಯದ ವರಮಾನದ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇರುತ್ತದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಟಿಸಿಎಸ್ ಗಳಿಸಿರುವ ಲಾಭವು ಮಾರುಕಟ್ಟೆ ತಜ್ಞರ ನಿರೀಕ್ಷೆಗಿಂತ ತುಸು ಕಡಿಮೆ ಇದೆ. ಕಂಪನಿಯು ₹ 11,046 ಕೋಟಿ ಲಾಭ ಗಳಿಸಬಹುದು ಎಂದು ತಜ್ಞರು ಅಂದಾಜು ಮಾಡಿದ್ದರು. ಕಂಪನಿಯ ಸೇವೆಗಳನ್ನು ಪಡೆಯುವವರು ತಮ್ಮ ವೆಚ್ಚಗಳನ್ನು ಕಡಿಮೆ ಮಾಡಿರುವುದು ಕೂಡ ಲಾಭದ ಪ್ರಮಾಣ ಕಡಿಮೆ ಆಗುವುದಕ್ಕೆ ಒಂದು ಕಾರಣ.

ಶೇ 1ಕ್ಕೂ ಹೆಚ್ಚು ಗಳಿಕೆ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ಸಕಾರಾತ್ಮ ವಹಿವಾಟಿನಿಂದಾಗಿ ದೇಶದ ಷೇರುಪೇಟೆಗಳು ಸೋಮವಾರದ ವಹಿವಾಟಿನಲ್ಲಿ ಶೇಕಡ 1ಕ್ಕೂ ಹೆಚ್ಚಿನ ಗಳಿಕೆ ಕಂಡುಕೊಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 847 ಅಂಶ ಏರಿಕೆ ಕಂಡು 60,747 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 242 ಅಂಶ ಹೆಚ್ಚಾಗಿ 18,101 ಅಂಶಗಳಿಗೆ ಏರಿಕೆ ಕಂಡಿತು.

ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಐ.ಟಿ. ವಲಯದ ಷೇರುಗಳು ಉತ್ತಮ ಖರೀದಿ ವಹಿವಾಟಿಗೆ ಒಳಗಾಗಿದ್ದು ಸಹ ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

‘ಅಮೆರಿಕದಲ್ಲಿ ಹಣದುಬ್ಬರವು ಇಳಿಕೆ ಆಗುವ ಸೂಚನೆಗಳು ದೊರೆತಿವೆ. ಹೀಗಾಗಿ ಅಲ್ಲಿನ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ವೇಗವಾಗಿ ಬಡ್ಡಿದರ ಹೆಚ್ಚಿಸುವ ತನ್ನ ಬಿಗಿ ನೀತಿಯನ್ನು ತುಸು ಸಡಿಲಿಸುವ ನಿರೀಕ್ಷೆ ವ್ಯಕ್ತವಾಗಿದೆ. ಇದು ಜಾಗತಿಕ ಷೇರುಪೇಟೆಗಳ ಗಳಿಕೆಗೆ ಕಾರಣವಾಯಿತು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ವಲಯವಾರು ಗಳಿಕೆ (%)



‘ಐ.ಟಿ. ವಲಯದ ಕಂಪನಿಗಳ ತ್ರೈಮಾಸಿಕ ಫಲಿತಾಂಶಕ್ಕೂ ಮುನ್ನವೇ ಕಂಪನಿಗಳ ಷೇರುಗಳು ಸೋಮವಾರ ಹೆಚ್ಚಿನ ಗಳಿಕೆ ಕಂಡವು. ಅಮೆರಿಕದ ಆರ್ಥಿಕತೆಯು ಚೇತರಿಕೆ ಕಾಣುವ ಆಶಾವಾದದಿಂದಾಗಿ ಐ.ಟಿ. ಕಂಪನಿಗಳ ಷೇರು ಮೌಲ್ಯ ಹೆಚ್ಚಾಯಿತು’ ಎಂದು ಅವರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 2.67ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 80.67 ಡಾಲರ್‌ಗೆ ತಲುಪಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		**ಸಾಗರ**		ತಟ್ಟಿಬೆಟ್ಟೆ	43899-43899
ಕೋಕ	12500-25000	ಬಿಳಿಗೋಟು	18110-31599	**ಶಿರಸಿ**	
ಹಳತು	48000-54500	ಚಾಲಿ	32600-39549	ಬೆಟ್ಟೆ	26218-44699
ಚಿತ್ರದುರ್ಗ		ಕೋಕ	14989-32829	ಬಿಳಿಗೋಟು	19899-35400
ಆಪಿ	46739-47169	ಕೆಂಪುಗೋಟು	26989-37199	ಚಾಲಿ	31299-44001
ಬೆಟ್ಟೆ	33819-34259	ರಾಶಿ	42599-47329	ಕೆಂಪುಗೋಟು	31899-33899
ಕೆಂಪುಗೋಟು	29600-30000	ಸಿಪ್ಪೆಗೋಟು	14989-22039	ರಾಶಿ	39699-46489
ರಾಶಿ	46229-46699	**ಶಿವಮೊಗ್ಗ**		**ಯಲ್ಲಾಪುರ**	
ಕಾರ್ಕಳ		ಬೆಟ್ಟೆ	47099-53409	ಬಿಳಿಗೋಟು	24899-34194
ಹೊಸತು	30000-39000	ಗೊರಬಲು	17000-36099	ಹಳೆಚಾಲಿ	38599-43599
ಹಳತು	40000-54500	ರಾಶಿ	41669-47050	ಹೊಸಚಾಲಿ	31899-35969
ಕುಮಟ		ಸರಕು	50199-80070	ಕೋಕ	16970-28112
ಚಿಪ್ಪು	26869-32609	**ಸಿದ್ದಾಪುರ**		ಕೆಂಪುಗೋಟು	24899-34809
ಕೋಕ	17089-30089	ಬಿಳಿಗೋಟು	28199-34019	ರಾಶಿ	43319-49110
ಫ್ಯಾಕ್ಟರಿ	11019-19829	ಚಾಲಿ	39099-42699	ತಟ್ಟಿಬೆಟ್ಟೆ	38969-42820
ಹಳೆಚಾಲಿ	38999-42339	ಕೋಕ	2689-33449		
ಹೊಸಚಾಲಿ	35089-37199	ಕೆಂಪುಗೋಟು	31889-32699		
		ರಾಶಿ	44099-46699		

ಬಜೆಟ್ ಚರ್ಚೆ: ತಜ್ಞರೊಂದಿಗೆ ಶುಕ್ರವಾರ ಪ್ರಧಾನಿ ಸಭೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕ ತಜ್ಞರು ಮತ್ತು ವಿವಿಧ ವಲಯಗಳ ತಜ್ಞರೊಂದಿಗೆ ಶುಕ್ರವಾರ ಬಜೆಟ್ ಪೂರ್ವ ಸಭೆ ನಡೆಸಲಿದ್ದಾರೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕತೆಯು ಶೇ 7ಕ್ಕಿಂತ ಕೆಳಗಿಳಿಯುವ ಅಂದಾಜು ಇದೆ. ಹೀಗಾಗಿ ಆರ್ಥಿಕ ಸ್ಥಿತಿಗತಿಯ ಕುರಿತು ಚರ್ಚಿಸಲು ಮತ್ತು ಬೆಳವಣಿಗೆಯನ್ನು ಹೆಚ್ಚಿಸಲು ತೆಗೆದುಕೊಳ್ಳಬೇಕಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚೆಯಾಗಲಿದೆ ಎಂದು ಹೇಳಿದ್ದಾರೆ.

ಬೇಡಿಕೆ ತಗ್ಗಿರುವುದರಿಂದ 2023ರ ಮಾರ್ಚ್‌ಗೆ ಅಂತ್ಯವಾಗಲಿರುವ ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆಯು ಶೇ 7ಕ್ಕಿಂತ ಕಡಿಮೆ ಇರುವ ನಿರೀಕ್ಷೆ ಇದೆ. ಹಾಗಾದಲ್ಲಿ, ಪ್ರಮುಖ ದೇಶಗಳ ಪೈಕಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಆರ್ಥಿಕತೆ ಎಂಬ ಹೆಗ್ಗಳಿಕೆ ಭಾರತಕ್ಕೆ ಇಲ್ಲವಾಗುವ ಸಾಧ್ಯತೆ ಇದೆ.

ಸೌದಿಗಿಂತ ಕಡಿಮೆ?: ಜಿಡಿಪಿ ಶೇ 8-8.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ಸರ್ಕಾರ ಈ ಮೊದಲು ಅಂದಾಜಿಸಿತ್ತು. ಆದರೆ, ಶೇ 6.8ರಷ್ಟು ಆಗಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. ಒಂದೊಮ್ಮೆ ಜಿಡಿಪಿ ಬೆಳವಣಿಗೆ ಶೇ 7ಕ್ಕಿಂತಲೂ ಕಡಿಮೆ ಆದಲ್ಲಿ, ಸೌದಿ ಅರೇಬಿಯಾದ ಆರ್ಥಿಕ ಬೆಳವಣಿಗೆಯ ಅಂದಾಜಿಗಿಂತಲೂ (ಶೇ 7.6) ಕಡಿಮೆ ಆಗಲಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಅಂದಾಜು ಮಾಡಿರುವ ಪ್ರಕಾರ, ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಶೇ 7ರಷ್ಟು ಆಗಲಿದೆ. 2021–22ರಲ್ಲಿ ಶೇ 8.7ರಷ್ಟು ಇತ್ತು.

ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ6.3ರಷ್ಟು ಆಗಿದೆ. ಇದೇ ಅವಧಿಯಲ್ಲಿ ಸೌದಿ ಅರೇಬಿಯಾದ ಜಿಡಿಪಿ ಶೇ8.7ರಷ್ಟು ಬೆಳವಣಿಗೆ ಕಂಡಿದೆ.

ಗೋಲ್ಡ್‌ಮನ್ ಸ್ಯಾಕ್ಸ್‌ನಿಂದ ಸಿಬ್ಬಂದಿ ಕಡಿತ?

ನ್ಯೂಯಾರ್ಕ್ (ಎಎಫ್‌ಪಿ): ಗೋಲ್ಡ್‌ಮನ್ ಸ್ಯಾಕ್ಸ್ ಕಂಪನಿಯು 3,200 ಮಂದಿಯನ್ನು ಕೆಲಸದಿಂದ ತೆಗೆಯಲು ಮುಂದಾಗಿದ್ದು, ಈ ವಾರದೊಳಗೆ ಆ ಬಗ್ಗೆ ಘೋಷಣೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಉದ್ಯೋಗ ಕಡಿತದ ಕುರಿತು ಕಂಪನಿಯು ಪ್ರತಿಕ್ರಿಯೆ ನೀಡಿಲ್ಲ.

ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡದ ಸಿಬ್ಬಂದಿಯನ್ನು ಗುರಿಯಾಗಿ ಇಟ್ಟುಕೊಂಡು ಕಂಪನಿಯು ಪ್ರತಿ ವರ್ಷವೂ ಶೇ 1–5ರಷ್ಟು ಸಿಬ್ಬಂದಿ ಕಡಿತ ಮಾಡುತ್ತದೆ. ಆದರೆ, ಆರ್ಥಿಕ ಮುನ್ನೋಟ ಅನಿಶ್ಚಿತ ಆಗಿರುವುದರಿಂದ ಈ ಬಾರಿ ಸಿಬ್ಬಂದಿ ಕಡಿತದ ಪ್ರಮಾಣ ಹೆಚ್ಚಿರಲಿದೆ ಎಂದು ಡಿಸೆಂಬರ್‌ನಲ್ಲಿ ಮೂಲಗಳು ಹೇಳಿದ್ದವು.

2022ರ ಅಕ್ಟೋಬರ್ ಅಂತ್ಯದ ವೇಳೆಗೆ ಕಂಪನಿಯ ಸಿಬ್ಬಂದಿ ಸಂಖ್ಯೆ 49,100 ಇತ್ತು. 2019ರ ಅಂತ್ಯಕ್ಕೆ ಹೋಲಿಸಿದರೆ ಇದು ಶೇ 30ರಷ್ಟು ಹೆಚ್ಚು.

ಏಕರೂಪ ನಾಗರಿಕ ಸಂಹಿತೆ: ಪಿಐಎಲ್ ವಜಾ-‘ಸುಪ್ರೀಂ’

ನವದೆಹಲಿ(ಪಿಟಿಐ): ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಅನುಷ್ಠಾನಕ್ಕೆ ಸಮಿತಿಗಳನ್ನು ರಚಿಸಿರುವ ಗುಜರಾತ್ ಮತ್ತು ಉತ್ತರಾಖಂಡ ಸರ್ಕಾರಗಳ ನಿರ್ಧಾರವನ್ನು ಪ್ರಶ್ನಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಇಂತಹ ಸಮಿತಿಗಳನ್ನು ರಚಿಸಲು ರಾಜ್ಯ ಸರ್ಕಾರಗಳಿಗೆ ಸಂವಿಧಾನವು 162ನೇ ವಿಧಿಯಡಿ ಅಧಿಕಾರ ನೀಡಿದೆ. ಇದು ತಪ್ಪಲ್ಲ. ಹಾಗಾಗಿ ಈ ಅರ್ಜಿ ವಿಚಾರಣೆಗೆ ಪರಿಗಣಿಸಲಾಗದು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರಿದ್ದ ಪೀಠವು ಅರ್ಜಿದಾರರಾದ ವಕೀಲ ಅನೂಪ್ ಬರನ್ವಾಲ್ ಮತ್ತು ಇತರರಿಗೆ ಹೇಳಿದೆ.

ವಿಚ್ಛೇದನ, ದತ್ತು ಸ್ವೀಕಾರ, ಪಿತ್ರಾರ್ಜಿತ, ಪಾಲನೆ ವಿಷಯದಲ್ಲಿ ಧರ್ಮ, ಲಿಂಗಭೇದವಿಲ್ಲದೆ ಎಲ್ಲ ನಾಗರಿಕರಿಗೂ ಒಂದೇ ರೀತಿಯ ಕಾನೂನು ಅನ್ವಯಿಸುವುದು ಯುಸಿಸಿಯ ಉದ್ದೇಶವಾಗಿದ್ದು, ಇದರ ಅನುಷ್ಠಾನಕ್ಕೆ ಕಾನೂನುಗಳ ತಿದ್ದುಪಡಿ ಪರಿಶೀಲನೆಗಾಗಿ ಗುಜರಾತ್ ಮತ್ತು ಉತ್ತರಾಖಂಡ ರಾಜ್ಯ ಸರ್ಕಾರಗಳು ತಜ್ಞರ ಸಮಿತಿಗಳನ್ನು ರಚಿಸಿವೆ.

ಮತಾಂತರ, ರಾಜಕೀಯ ಬಣ್ಣ ಬೇಡ: ಮತಾಂತರ ಗಂಭೀರ ವಿಚಾರ, ಅದಕ್ಕೆ ರಾಜಕೀಯ ಬಣ್ಣ ನೀಡುವುದು ಬೇಡ ಎಂದು ಸುಪ್ರೀಂ ಕೋರ್ಟ್ ಸೋಮವಾರ ಅಭಿಪ್ರಾಯಪಟ್ಟಿದೆ.

ಆಮಿಷದ ಮತಾಂತರದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು ಎಂದು ಕೋರಿರುವ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ಈ ಕುರಿತು ನೆರವು ನೀಡುವಂತೆ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರನ್ನು ಕೇಳಿತು.

‘ಅರ್ಜಿಯು ರಾಜಕೀಯ ಪ್ರೇರಿತವಾಗಿದೆ. ರಾಜ್ಯದಲ್ಲಿ ಆಮಿಷದ ಮತಾಂತರದ ಪ್ರಶ್ನೆಯೇ ಇಲ್ಲ’ ಎಂದು ಈ ತಮಿಳುನಾಡು ಪರ ಹಿರಿಯ ವಕೀಲ ಪಿ.ವಿಲ್ಸನ್ ಹೇಳಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಾಲಯ, ‘ವಿಚಾರವನ್ನು ಬೇರೆಡೆಗೆ ತಿರುಚಬೇಡಿ. ನಿಮ್ಮ ರಾಜ್ಯದಲ್ಲಿ ಆಮಿಷದ ಮತಾಂತರ ನಡೆಯುತ್ತಿದೆ ಎಂದರೆ ಅದು ತಪ್ಪು, ನಡೆಯುತ್ತಿಲ್ಲ ಎಂದರೆ ಸಂತಸದ ವಿಚಾರ. ಆದರೆ ಇದನ್ನು ರಾಜಕೀಯಗೊಳಿಸಬೇಡಿ’ ಎಂದು ಹೇಳಿತು.

25ನೇ ವರ್ಷದ ಪುಣ್ಯ ತಿಥಿ

ಶ್ರೀಮತಿ ಸಾಕಮ್ಮ
ನಿಧನ: 30.4.2011

ಪಟೇಲ್ ಆರ್. ಕೃಷ್ಣಾರೆಡ್ಡಿ
ನಿಧನ: 10.1.1998

ನೀವು ನಮ್ಮನ್ನು ಅಗಲಿ ಇಂದಿಗೆ 25 ವರ್ಷಗಳು ಸಂದರೂ ಸದಾ ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ

ಇಂತಿ: ಶ್ರೀ ಕೆ. ಪುರುಷೋತ್ತಮ ರೆಡ್ಡಿ ಮತ್ತು ಕುಟುಂಬದವರು
ಎಸ್.ಕೆ.ಆರ್. ಕನ್‌ವೆನ್‌ಷನ್ ಹಾಲ್,
ಮಾರತ್ತಹಳ್ಳಿ, ಬೆಂಗಳೂರು–37

4th ANNIVERSARY REMEMBRANCE

R.KRISHNAPPA
13-3-1930 - 10-01-2019
He is no more with us. But has left behind his fame, inspiring genius, Virtues, and his Deeds.
He continues to adorn our hearts and minds.
Fondly remembered for ever
K.Ramachandrappa and Family,
Dwarakanagara, Banashankari
3rd Stage, Bangalore 560085

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಲಿಮಿಟೆಡ್ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ಬಿಲ್ಲಿಂಗ್, ಪ್ರೊಡಕ್ಷನ್, ಮ್ಯಾನೇಜ್ಮೆಂಟ್ ಡಿಪಾರ್ಟ್ಮೆಂಟ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದಿರುವ ಯುವಕರು/ಯುವತಿಯರು ಬೇಕಾಗಿದ್ದಾರೆ. ಊಟ,ವಸತಿಯೊಂದಿಗೆ 17,000-28,000/- 8884611125, 8884611126.

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

Drivers

ಚಾಲಕರು ಬೇಕಾಗಿದ್ದಾರೆ ಪ್ರತಿ ತಿಂಗಳು ರೂ. 40,000- 50,000 ಗಳಿಸಿ ಕರೆ ಮಾಡಿ: 08069451001 ಅಗತ್ಯವಿದೆ: LMV Driving Licence (3 ವೀಲರ್/ 4 ವೀಲರ್)

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

★7.02.2023 16ದಿನಗಳು★ 95ದಿವ್ಯದೇಶ ಪ್ರವಾಸ. 04.03.2023 13/8ದಿನಗಳು ವಿಮಾನದಲ್ಲಿ ಕಾಶಿ,ಪ್ರಯಾಗ ಗಯಾ,ಆಗ್ರಾ ಮಥುರ, ಅಯೋಧ್ಯ.ಆರ್.ಗಾಂಧಿ ಟೂರ್ಸ್(ರಿ) ತ್ಯಾಗರಾಜನಗರ. 9945445809/ 9902433500

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಡಿಎಂಕೆ–ರಾಜ್ಯಪಾಲ ರವಿ ಮಧ್ಯೆ ತಿಕ್ಕಾಟ

ತಮಿಳುನಾಡು: ರಾಷ್ಟ್ರಗೀತೆಗೂ ಮುನ್ನವೇ ಸದನ ತೊರೆದ ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಹಾಗೂ ರಾಜ್ಯಪಾಲ ಆರ್.ಎನ್.ರವಿ ನಡುವಣ ತಿಕ್ಕಾಟ ತೀವ್ರಗೊಂಡಿದ್ದು, ಹೊಸ ವರ್ಷದ ಆರಂಭದಲ್ಲಿ ನಡೆದ ವಿಧಾನಸಭೆ ಅಧಿವೇಶನದ ವೇಳೆ ಇದು ಬಹಿರಂಗಗೊಂಡಿದೆ.

ರಾಜ್ಯಪಾಲರು ಸದನವನ್ನು ಉದ್ದೇಶಿಸಿ ಮಾತನಾಡುವಾಗ ಸರ್ಕಾರ ಸಿದ್ಧಪಡಿಸಿಕೊಟ್ಟಿದ್ದ ಭಾಷಣದಲ್ಲಿನ ಕೆಲ ಅಂಶಗಳನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿದ್ದಾರೆ ಎಂದು ಆರೋಪಿಸಿ ಡಿಎಂಕೆ ಮೈತ್ರಿಕೂಟದ ಶಾಸಕರು ಸದನದಲ್ಲಿ ಸೋಮವಾರ ಗದ್ದಲ ನಡೆಸಿದರು.

ರಾಜ್ಯಪಾಲರು ತಮ್ಮ ಭಾಷಣದ ವೇಳೆ ಸರ್ಕಾರದ ಯೋಜನೆಗಳನ್ನು ಪ್ರಸ್ತಾಪಿಸುವ ಬದಲು ವೈಯಕ್ತಿಕ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ. ಅವುಗಳನ್ನು ಕಡತದಿಂದ ತೆಗೆದು ಹಾಕಬೇಕು ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಗೊತ್ತುವಳಿ ಮಂಡಿಸಿದರು. ಸರ್ಕಾರ ಸಿದ್ಧಪಡಿಸಿದ್ದ ಭಾಷಣದಲ್ಲಿನ ಅಂಶಗಳನ್ನೇ ಕಡತದಲ್ಲಿ ಸೇರ್ಪಡೆ ಮಾಡಬೇಕು. ಅದನ್ನು ತಮಿಳಿನಲ್ಲಿ ವಾಚಿಸಬೇಕು ಎಂದು ಸಭಾಧ್ಯಕ್ಷರಾದ ಎಂ.ಅಪ್ಪಾವು ಅವರನ್ನು ಒತ್ತಾಯಿಸಿದರು. ಬಳಿಕ ಇದನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಕಲಾಪದ ವೇಳೆ ಡಿಎಂಕೆ ಮೈತ್ರಿಕೂಟದ ಶಾಸಕರು ಘೋಷಣೆ ಕೂಗುವ ಮೂಲಕ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಿದರು. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ (ಬಲತುದಿ) ಇದ್ದಾರೆ –ಪಿಟಿಐ ಚಿತ್ರ

ರಾಜ್ಯಪಾಲರು ಭಾಷಣ ಆರಂಭಿಸಿದ ಕೂಡಲೇ ಡಿಎಂಕೆ ಮೈತ್ರಿಕೂಟದ ಶಾಸಕರು ಅದಕ್ಕೆ ಅಡ್ಡಿಪಡಿಸಿದರು. ಸ್ವಾಮಿ ವಿವೇಕಾನಂದರ ಹೆಸರು ಉಲ್ಲೇಖಿಸಿದ ರಾಜ್ಯಪಾಲರು ಇ.ವಿ. ರಾಮಸ್ವಾಮಿ ಪೆರಿಯಾರ್, ಸಿ.ಎನ್. ಅಣ್ಣಾದೊರೈ ಸೇರಿದಂತೆ ದ್ರಾವಿಡ ಚಳವಳಿಯ ನೇತಾರರ ಹೆಸರು ಪ್ರಸ್ತಾಪಿಸಲಿಲ್ಲ. ಇದರಿಂದ ಕೆರಳಿದ ಆಡಳಿತಾರೂಢ ಪಕ್ಷದ ಶಾಸಕರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು.

ರಾಜ್ಯಪಾಲರು ಭಾಷಣ ಮುಕ್ತಾಯಗೊಳಿಸುತ್ತಿದ್ದಂತೆ ಎದ್ದುನಿಂತ ಮುಖ್ಯಮಂತ್ರಿ ಸ್ಟಾಲಿನ್ ಅವರು ಗೊತ್ತುವಳಿ ಮಂಡಿಸಿದರು. ಅವರು ಮಾತು ಪೂರ್ಣಗೊಳಿಸುವ ಮುನ್ನವೇ ರವಿ ಅವರು ಸದನದಿಂದ ಹೊರ ನಡೆದರು. ದಿನದ ಕಲಾಪ ಅಂತ್ಯಗೊಳಿಸುವ ಸಂಕೇತವಾಗಿ ರಾಷ್ಟ್ರಗೀತೆ ಮೊಳಗಿಸುವುದು ವಾಡಿಕೆ. ಅಲ್ಲಿಯವರೆಗೂ ಅವರು ಕಾಯಲಿಲ್ಲ.

‘ರಾಜ್ಯಪಾಲರು ಸದನದಲ್ಲಿ ಇರುವಾಗಲೇ ಅವರ ವಿರುದ್ಧ ಮುಖ್ಯಮಂತ್ರಿ ಸ್ಟಾಲಿನ್ ಗೊತ್ತುವಳಿ ಮಂಡಿಸಿದ್ದಾರೆ. ಇದು ಅಪ್ರಬುದ್ಧ ಹಾಗೂ ಅಗೌರವ ಸೂಚಕ ನಡೆ’ ಎಂದು ಬಿಜೆಪಿ ಹರಿಹಾಯ್ದಿದೆ.

ಕೊಚ್ಚರ್ ದಂಪತಿಗೆ ಜಾಮೀನು

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಚಂದಾ ಕೊಚ್ಚರ್ ಹಾಗೂ ಅವರ ಪತಿ ದೀಪಕ್ ಕೊಚ್ಚರ್ ಅವರಿಗೆ ಬಾಂಬೆ ಹೈಕೋರ್ಟ್ ಸೋಮವಾರ ಜಾಮೀನು ನೀಡಿದೆ.

ವಿಡಿಯೊಕಾನ್ – ಐಸಿಐಸಿಐ ಬ್ಯಾಂಕ್ ಸಾಲ ಹಗರಣ ಸಂಬಂಧ ದಂಪತಿಯನ್ನು ಸಿಬಿಐ 2022ರ ಡಿ. 23ರಂದು ಬಂಧಿಸಿತ್ತು. ದಂಪತಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದರು.

‘ದಂಪತಿಯ ಬಂಧನವು ಕಾನೂನಾತ್ಮಕವಾಗಿಲ್ಲ. ಬಂಧನಕ್ಕೂ ಮೊದಲ ನೋಟಿಸ್ ನೀಡಬೇಕು ಎಂದು ಭಾರತೀಯ ದಂಡ ಸಂಹಿತೆಯ 41ಎ ಸೆಕ್ಷನ್ ಹೇಳುತ್ತದೆ. ಆದರೆ, ಇಲ್ಲಿ ಇದು ಪಾಲನೆಯಾಗಿಲ್ಲ’ ಎಂದು ವಿಭಾಗೀಯ ಪೀಠವು ಅಭಿಪ್ರಾಯಪಟ್ಟಿತು.

ಕೊಚ್ಚರ್ ದಂಪತಿ ಹೊರತುಪಡಿಸಿದ ಹಗರಣ ಸಂಬಂಧ ವಿಡಿಯೊಕಾನ್ ಗುಂಪಿನ ಸಂಸ್ಥಾಪಕ ವೇಣುಗೋಪಾಲ್ ದೂತ್ ಅವರನ್ನೂ ಸಿಬಿಐ ಬಂಧಿಸಿತ್ತು. ಅವರೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ರಸ್ತೆ ಸಾರಿಗೆಗಳಿಗೆ ಇ–ಬಸ್ ಯೋಜನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಎಲ್ಲ ಸಾರ್ವಜನಿಕ ಸಾರಿಗೆ ವಾಹನಗಳನ್ನು ವಿದ್ಯುದ್ದೀಕರಣ ಮಾಡುವ ಉದ್ದೇಶದಿಂದ ಕೇಂದ್ರ ಭೂಸಾರಿಗೆ ಸಚಿವಾಲಯ ಹಾಗೂ ಭಾರಿ ಕೈಗಾರಿಕೆಗಳ ಸಚಿವಾಲಯವು ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಇರುವ ಡೀಸೆಲ್ ಬಸ್‌ಗಳನ್ನು ಎಲೆಕ್ಟ್ರಿಕ್ ಬಸ್‌ಗಳಾಗಿ ಪರಿವರ್ತಿಸಲು ಯೋಜನೆ ಸಿದ್ಧಪಡಿಸುತ್ತಿದೆ.

ಇತ್ತೀಚೆಗೆ ನಡೆದ ಪ್ರಧಾನಮಂತ್ರಿ ಗತಿ ಶಕ್ತಿ ರಾಷ್ಟ್ರೀಯ ಮಹಾಯೋಜನೆ ಪರಿಶೀಲನಾ ಸಭೆಯಲ್ಲಿ, ರಾಜ್ಯಗಳಲ್ಲಿ ಇರುವ ಎಲ್ಲ ಡೀಸೆಲ್ ಬಸ್‌ಗಳನ್ನು ‘ಇ-ಬಸ್’ಗಳಾಗಿ ಪರಿವರ್ತಿಸಲು ಮಾರ್ಗಸೂಚಿ ಸಿದ್ಧಪಡಿಸಲು ತೀರ್ಮಾನಿಸಲಾಯಿತು ಎಂದು ಭೂಸಾರಿಗೆ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ಭೂಸಾರಿಗೆ ಸಚಿವಾಲಯದ ಪ್ರಕಾರ, ಪ್ರಸ್ತುತ ದೇಶದ 56 ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಒಟ್ಟು 1,49,095 ಬಸ್‌ಗಳನ್ನು ಹೊಂದಿದ್ದು, ಅವುಗಳಲ್ಲಿ 1,33,770 ಬಸ್‌ಗಳು ಕಾರ್ಯಾಚರಿಸುತ್ತಿವೆ. ಸಾರ್ವಜನಿಕ ಸಾರಿಗೆಯನ್ನು ವಿದ್ಯುದ್ದೀಕರಣ ಮಾಡಲು ರಾಷ್ಟ್ರೀಯ ಇ-ಬಸ್ ಯೋಜನೆಯಡಿ ಕೇಂದ್ರ ಸರ್ಕಾರವು 50 ಸಾವಿರ ಇ-ಬಸ್‌ಗಳನ್ನು ಖರೀದಿಸಲು ಯೋಜಿಸಿದೆ. ಈಗಿರುವ ಡೀಸೆಲ್ ಬಸ್‌ಗಳ ಬದಲು ಎಲೆಕ್ಟ್ರಿಕ್ ಬಸ್‌ಗಳಿಗೆ ಆದ್ಯತೆ ನೀಡುವ ಸಂಬಂಧ ಕೇಂದ್ರ ಸಚಿವಾಲಯ ಎಲ್ಲ ರಸ್ತೆ ಸಾರಿಗೆ ಸಂಸ್ಥೆಗಳ ಜತೆಗೆ ಸಂಪರ್ಕದಲ್ಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕನ್ವರ್ಜೆನ್ಸಿ ಎನರ್ಜಿ ಸರ್ವಿಸಸ್ ಲಿ. (ಸಿಇಎಸ್‌ಎಲ್) ರಾಷ್ಟ್ರೀಯ ಇ-ಬಸ್ ಯೋಜನೆಯಡಿ ₹5,000 ಕೋಟಿ ವೆಚ್ಚದಲ್ಲಿ 4,675 ಬಸ್‌ಗಳ ಖರೀದಿಗೆ ಇತ್ತೀಚೆಗೆ ಟೆಂಡರ್ ಕರೆದಿದೆ. ಎಲೆಕ್ಟ್ರಿಕ್ ಬಸ್‌ಗಳ ಖರೀದಿಗೆ ಕಳೆದ 15 ತಿಂಗಳಲ್ಲಿ ಕರೆದ ಮೂರನೇ ಟೆಂಡರ್ ಇದು.

ಏರ್ ಇಂಡಿಯಾಗೆ ಡಿಜಿಸಿಎ ಷೋಕಾಸ್ ನೋಟಿಸ್

ಮುಂಬೈ (ಪಿಟಿಐ): ‘ಕಳೆದ ತಿಂಗಳು ಪ್ಯಾರಿಸ್‌ನಿಂದ ನವದೆಹಲಿಗೆ ತೆರಳುತ್ತಿದ್ದ ವಿಮಾನದಲ್ಲಿ ಪ್ರಯಾಣಿಕರು ಅನುಚಿತವಾಗಿ ವರ್ತಿಸಿದ ಎರಡು ಘಟನೆಗಳಿಗೆ ಸಂಬಂಧಿಸಿದಂತೆ ಏರ್ ಇಂಡಿಯಾಗೆ ಷೋಕಾಸ್ ನೋಟಿಸ್ ನೀಡಲಾಗಿದೆ’ ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಸೋಮವಾರ ತಿಳಿಸಿದೆ.

ಪ್ರಕರಣಗಳ ಕುರಿತು ವಿಮಾನ ಸಂಸ್ಥೆಯು ಡಿಜಿಸಿಎಗೆ ಪ್ರತಿಕ್ರಿಯೆ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸಿದೆ ಮತ್ತು ನೀರಸವಾಗಿ ಪ್ರತಿಕ್ರಿಯಿಸಿದೆ ಎಂದಿದೆ. ಎರಡೂ ಘಟನೆಗಳು 2022ರ ಡಿಸೆಂಬರ್ 6ರಂದು ಪ್ಯಾರಿಸ್–ನವದೆಹಲಿ ವಿಮಾನದಲ್ಲಿ ನಡೆದಿದ್ದವು.

‘ಒಂದು ಘಟನೆಯಲ್ಲಿ, ಪಾನಮತ್ತ ಪ್ರಯಾಣಿಕರೊಬ್ಬರು ವಿಮಾನದ ಶೌಚಾಲಯದಲ್ಲಿ ಧೂಮಪಾನ ಮಾಡುತ್ತಿದ್ದಾಗ ಸಿಕ್ಕಿಬಿದ್ದಿದ್ದರು ಮತ್ತು ಸಿಬ್ಬಂದಿಯ ಮಾತನ್ನು ಪಾಲಿಸಿರಲಿಲ್ಲ. ಎರಡನೇ ಘಟನೆಯಲ್ಲಿ ಪ್ರಯಾಣಿಕರೊಬ್ಬರು ತಮ್ಮ ಸಹ ಮಹಿಳಾ ಪ್ರಯಾಣಿಕರೊಬ್ಬರು ಶೌಚಾಲಯಕ್ಕೆ ಹೋದಾಗ ಅವರ ಆಸನವನ್ನು ಅತಿಕ್ರಮಿಸಿಕೊಂಡಿದ್ದಲ್ಲದೆ ಅವರ ಕಂಬಳಿಯನ್ನೂ ತೆಗೆದುಕೊಂಡಿದ್ದರು’ ಎಂದು ಡಿಜಿಸಿಎ ಹೇಳಿದೆ.

ಟಿ20ಯಿಂದ ದೂರ ಸರಿದಿಲ್ಲ: ರೋಹಿತ್

ಗುವಾಹಟಿ (ಪಿಟಿಐ): ಟಿ20 ಕ್ರಿಕೆಟ್ ಮಾದರಿಯಿಂದ ದೂರ ಸರಿಯುವ ಯಾವುದೇ ಚಿಂತನೆ ಮಾಡಿಲ್ಲ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

'ಬೆನ್ನುಬೆನ್ನಿಗೆ ಪಂದ್ಯಗಳನ್ನು ಆಡಲು ಸಾಧ್ಯವಿಲ್ಲ. ಮೂರೂ ಮಾದರಿಗಳನ್ನು (ಟೆಸ್ಟ್, ಏಕದಿನ ಮತ್ತು ಟಿ20) ಆಡುವ ಆಟಗಾರರಿಗೆ ಕೆಲವೊಮ್ಮೆ ವಿಶ್ರಾಂತಿ ನೀಡಬೇಕಾಗುತ್ತದೆ. ಆದ್ದರಿಂದ ನನಗೂ ವಿಶ್ರಾಂತಿ ನೀಡಲಾಗಿದೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನ್ಯೂಜಿಲೆಂಡ್ ವಿರುದ್ಧ ಮೂರು ಟಿ20 ಪಂದ್ಯಗಳನ್ನು ಆಡಲಿದ್ದೇವೆ. ಐಪಿಎಲ್ ಬಳಿಕ ಏನಾಗುತ್ತದೆ ಎಂಬುದನ್ನು ನೋಡೋಣ. ತಕ್ಷಣದಿಂದಲೇ ಚುಟುಕು ಕ್ರಿಕೆಟ್ ಮಾದರಿಯನ್ನು ಬಿಟ್ಟುಬಿಡುವ ಯೋಚನೆಯನ್ನಂತೂ ಮಾಡಿಲ್ಲ' ಎಂದರು.

2024ರ ಟಿ20 ವಿಶ್ವಕಪ್ ಟೂರ್ನಿಯನ್ನು ಗಮನದಲ್ಲಿಟ್ಟುಕೊಂಡು ತಂಡವನ್ನು ರೂಪಿಸುವ ನಿಟ್ಟಿನಲ್ಲಿ ಯುವ ಆಟಗಾರರಿಗೆ ಅವಕಾಶ ನೀಡಲಾಗುತ್ತದೆ ಎಂದು ಬಿಸಿಸಿಐ ಮೂಲಗಳು ಹೇಳಿದ್ದವು. ಇದರಿಂದ ರೋಹಿತ್, ವಿರಾಟ್ ಕೊಹ್ಲಿ ಮತ್ತು ಕೆ.ಎಲ್.ರಾಹುಲ್ ಅವರನ್ನು ಶ್ರೀಲಂಕಾ ವಿರುದ್ಧದ ಟಿ20 ಸರಣಿಗೆ ಕಡೆಗಣಿಸಲಾಗಿತ್ತು.

ಕ್ರಿಕೆಟ್: ಶ್ರೀಲಂಕಾ ವಿರುದ್ಧದ ಮೊದಲ ಏಕದಿನ ಪಂದ್ಯ ಇಂದು

ಭಾರತಕ್ಕೆ ಶುಭಾರಂಭ ನಿರೀಕ್ಷೆ

ಗುವಾಹಟಿ (ಪಿಟಿಐ): ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಈಗಿನಿಂದಲೇ ಸಜ್ಜಾಗುತ್ತಿರುವ ಭಾರತ ತಂಡ, ಶ್ರೀಲಂಕಾ ವಿರುದ್ಧದ ಮೂರು ಪಂದ್ಯಗಳ ಸರಣಿಯಲ್ಲಿ ಶುಭಾರಂಭದ ನಿರೀಕ್ಷೆಯಲ್ಲಿದೆ.

ಸರಣಿಯ ಮೊದಲ ಪಂದ್ಯ ಗುವಾಹಟಿಯಲ್ಲಿ ಮಂಗಳವಾರ ನಡೆಯಲಿದ್ದು, ರೋಹಿತ್ ಶರ್ಮಾ ಬಳಗ ಗೆಲುವಿನ ವಿಶ್ವಾಸದಲ್ಲಿದೆ.

ಟಿ20 ಸರಣಿಯಲ್ಲಿ ಆಡದೇ ಇದ್ದ ರೋಹಿತ್, ವಿರಾಟ್ ಕೊಹ್ಲಿ ಮತ್ತು ಕೆ.ಎಲ್.ರಾಹುಲ್ ಅವರು ಮರಳಿರುವುದು ತಂಡದ ಬಲ ಹೆಚ್ಚಿಸಿದೆ. ಆದರೆ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಗೈರು ಅಲ್ಪ ಹಿನ್ನಡೆ ಉಂಟುಮಾಡಿದೆ.

ಅನುಭವಿ ಆಟಗಾರರ ಅನುಪಸ್ಥಿತಿಯಲ್ಲಿ ಹಾರ್ದಿಕ್ ಪಾಂಡ್ಯ ನೇತೃತ್ವದ ಭಾರತ ತಂಡ ಲಂಕಾ ವಿರುದ್ಧದ ಟಿ20 ಸರಣಿಯನ್ನು 2–1 ರಲ್ಲಿ ಜಯಿಸಿತ್ತು.

ಏಕದಿನ ವಿಶ್ವಕಪ್ ಟೂರ್ನಿ ಭಾರತದ ಆತಿಥ್ಯದಲ್ಲಿ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ನಡೆಯಲಿದೆ. ವಿಶ್ವಕಪ್‌ಗೆ ಮುನ್ನ ಭಾರತ ತಂಡ 15 ಏಕದಿನ ಪಂದ್ಯಗಳನ್ನು (ಏಷ್ಯಾಕಪ್ ಹೊರತುಪಡಿಸಿ) ಆಡಲಿದೆ. ವಿಶ್ವಕಪ್‌ಗೆ ಸಮತೋಲಿತ ತಂಡವನ್ನು ಕಟ್ಟುವ ನಿಟ್ಟಿನಲ್ಲಿ ಪ್ರತಿಯೊಂದು ಪಂದ್ಯವೂ ಮಹತ್ವದ್ದಾಗಿದೆ.

ಲಂಕಾ ವಿರುದ್ಧದ ಪಂದ್ಯಕ್ಕೆ ಅಗ್ರ ಕ್ರಮಾಂಕದ ಐವರು ಬ್ಯಾಟರ್‌ಗಳ ಆಯ್ಕೆ ತಂಡದ ಆಡಳಿತಕ್ಕೆ ತಲೆನೋವಾಗಿ ಪರಿಣಮಿಸಿದೆ. ರೋಹಿತ್ ಜತೆ ಯಾರು ಇನಿಂಗ್ಸ್ ಆರಂಭಿಸುವರು ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ. ಶುಭಮನ್ ಗಿಲ್ ಮತ್ತು ಇಶಾನ್ ಕಿಶನ್ ಅವರ ನಡುವೆ ಪೈಪೋಟಿ ಇದೆ. ಇಶಾನ್ ಅವರು ಬಾಂಗ್ಲಾದೇಶ ವಿರುದ್ಧದ ಏಕದಿನ ಪಂದ್ಯದಲ್ಲಿ ದ್ವಿಶತಕ ಗಳಿಸಿದ್ದರು.

ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ ಮತ್ತು ಕೆ.ಎಲ್.ರಾಹುಲ್ ಅವರಿಗೆ ಅಂತಿಮ ಇಲೆವೆನ್‌ನಲ್ಲಿ ಸ್ಥಾನ ನೀಡಬೇಕಾದರೆ ಯುವ ಆಟಗಾರರನ್ನು ಕೈಬಿಡಬೇಕಾಗುತ್ತದೆ. ಟಿ20ಯಲ್ಲಿ ತಮ್ಮ ಸಾಮರ್ಥ್ಯ ತೋರಿಸಿರುವ ಸೂರ್ಯಕುಮಾರ್ ಯಾದವ್ ಅವರಿಗೆ ಅಂತಿಮ ಇಲೆವೆನ್‌ನಲ್ಲಿ ಸ್ಥಾನ ನೀಡುವ ಚಿಂತನೆಯೂ ನಡೆದಿದೆ.

ಬೌಲಿಂಗ್‌ನಲ್ಲಿ ಬೂಮ್ರಾ ಅನುಪಸ್ಥಿತಿಯಲ್ಲಿ ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್ ಮತ್ತು ಅರ್ಷದೀಪ್ ಸಿಂಗ್ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ.

ದಸುನ್ ಶನಕ ನೇತೃತ್ವದ ಶ್ರೀಲಂಕಾ ತಂಡ ಟಿ20 ಸರಣಿಯ ಮೊದಲ ಎರಡು ಪಂದ್ಯಗಳಲ್ಲಿ ಭಾರತಕ್ಕೆ ತಕ್ಕ ಪೈಪೋಟಿ ನೀಡಿತ್ತು. ಮೊದಲ ಪಂದ್ಯವನ್ನು ಕೇವಲ ಎರಡು ರನ್‌ಗಳಿಂದ ಸೋತಿದ್ದ ತಂಡ, ಎರಡನೇ ಪಂದ್ಯ ಜಯಿಸಿತ್ತು.

ಶನಕ ಅವರು ಟಿ20 ಸರಣಿಯಲ್ಲಿ 187.24ರ ಸರಾಸರಿಯಲ್ಲಿ 124 ರನ್ ಕಲೆಹಾಕಿದ್ದರು. ಪಥುಮ್ ನಿಸಾಂಕ ಮತ್ತು ಚರಿತ ಅಸಲಂಕಾ ಅವರಿಂದಲೂ ತಂಡ ಉತ್ತಮ ಆಟ ನಿರೀಕ್ಷಿಸುತ್ತಿದೆ.

ಬಲಾಬಲ	
ಒಟ್ಟು ಪಂದ್ಯಗಳು	162
ಭಾರತ ಗೆಲುವು	93
ಶ್ರೀಲಂಕಾ ಗೆಲುವು	57
ಟೈ	1
ಫಲಿತಾಂಶವಿಲ್ಲ	11

ಭಾರತ ತಂಡದ ನಾಯಕ ರೋಹಿತ್ ಶರ್ಮಾ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಕೆ.ಎಲ್.ರಾಹುಲ್, ಇಶಾನ್ ಕಿಶನ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮ್ರಾನ್ ಮಲಿಕ್, ಅರ್ಷದೀಪ್ ಸಿಂಗ್

ಶ್ರೀಲಂಕಾ: ದಸುನ್ ಶನಕ (ನಾಯಕ), ಕುಶಾಲ್ ಮೆಂಡಿಸ್ (ಉಪನಾಯಕ), ಪಥುಮ್ ನಿಸಾಂಕ, ಅವಿಷ್ಕಾ ಫೆರ್ನಾಂಡೊ, ಸದೀರ ಸಮರವಿಕ್ರಮ, ಚರಿತ ಅಸಲಂಕಾ, ಧನಂಜಯ ಡಿಸಿಲ್ವಾ, ವಣಿಂದು ಹಸರಂಗ, ಅಶೆನ್ ಬಂಡಾರ, ಮಹೀಶ್ ತೀಕ್ಷಣ, ಚಾಮಿಕ ಕರುಣರತ್ನೆ, ದಿಲ್ಶಾನ್ ಮಧುಶಂಕ, ಕಸುನ್ ರಜಿತ, ನುವನಿದು ಫೆರ್ನಾಂಡೊ, ದುನಿತ್ ವೆಲ್ಲಲಗೆ, ಪ್ರಮೋದ್ ಮದುಶನ್, ಲಾಹಿರು ಕುಮಾರ

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಜಸ್‌ಪ್ರೀತ್ ಬೂಮ್ರಾ ಅಲಭ್ಯ

ಸಂಪೂರ್ಣ ಫಿಟ್‌ನೆಸ್ ಪಡೆಯದ ವೇಗದ ಬೌಲರ್

ಗುವಾಹಟಿ (ಪಿಟಿಐ): ಭಾರತ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಶ್ರೀಲಂಕಾ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಗೆ ಅಲಭ್ಯರಾಗಿದ್ದಾರೆ. ಬೆನ್ನುನೋವಿನಿಂದ ಚೇತರಿಸಿಕೊಂಡಿದ್ದರೂ ಅವರು ಪೂರ್ಣ ಫಿಟ್ ಆಗಿಲ್ಲ. ಇದರಿಂದ ಅವರನ್ನು ಆಡಿಸದಿರಲು ತಂಡದ ಆಡಳಿತ ನಿರ್ಧರಿಸಿದೆ.

'ಬೂಮ್ರಾ ಸಹ ಆಟಗಾರರ ಜತೆ ಗುವಾಹಟಿಗೆ ಪ್ರಯಾಣಿಸಿಲ್ಲ. ಅವರು ಪೂರ್ಣ ಫಿಟ್‌ನೆಸ್ ಪಡೆಯಲು ಇನ್ನೂ ಕೆಲವು ಸಮಯ ಬೇಕು. ಆಸ್ಟ್ರೇಲಿಯಾ ವಿರುದ್ಧದ ಮಹತ್ವದ ಸರಣಿಗೆ ಅವರ ಸೇವೆ ತಂಡಕ್ಕೆ ಅಗತ್ಯವಿದೆ' ಎಂದು ಬಿಸಿಸಿಐ ಮೂಲಗಳು ಹೇಳಿವೆ.

ನ್ಯೂಜಿಲೆಂಡ್ ವಿರುದ್ಧ ಜನವರಿ 18ರಂದು ಆರಂಭವಾಗಲಿರುವ ಏಕದಿನ ಸರಣಿಯ ವೇಳೆಗೆ ಅವರು ತಂಡಕ್ಕೆ ಮರಳುವರೇ ಎಂಬುದನ್ನು ನೋಡಬೇಕಿದೆ.

ಬೂಮ್ರಾ ಅವರನ್ನು ಶ್ರೀಲಂಕಾ ಎದುರಿನ ಸರಣಿಗೆ ಆರಂಭದಲ್ಲಿ ಪರಿಗಣಿಸಿರಲಿಲ್ಲ. ಆದರೆ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯಲ್ಲಿ ಫಿಟ್‌ನೆಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಅವರಿಗೆ ತಂಡ ಸೇರುವ ಅವಕಾಶ ನೀಡಲಾಗಿತ್ತು. ಹೋದ ವರ್ಷ ಇಂಗ್ಲೆಂಡ್ ಪ್ರವಾಸದ ಬೆನ್ನಲ್ಲೇ ಬೆನ್ನುಹುರಿಯ ಗಾಯದಿಂದ ಬಳಲಿದ್ದ ಅವರು ಏಷ್ಯಾಕಪ್‌ನಲ್ಲಿ ಆಡಿರಲಿಲ್ಲ.

ಟಿ20 ವಿಶ್ವಕಪ್‌ನಲ್ಲಿ ಆಡಿಸುವ ಉದ್ದೇಶದಿಂದ ಆಸ್ಟ್ರೇಲಿಯಾ ವಿರುದ್ಧ ತವರಿನಲ್ಲಿ ನಡೆದಿದ್ದ ಟಿ20 ಸರಣಿಯಲ್ಲಿ ಅವರನ್ನು ಕಣಕ್ಕಿಳಿಸಲಾಗಿತ್ತು. ಆದರೆ ಬೆನ್ನು ನೋವು ಉಲ್ಬಣಿಸಿದ್ದರಿಂದ ವಿಶ್ವಕಪ್‌ನಿಂದಲೂ ಹೊರಗುಳಿದಿದ್ದರು.

ಬಾರ್ಡರ್– ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿ ಫೆ.9 ರಂದು ಆರಂಭವಾಗಲಿದ್ದು, ಆ ವೇಳೆಗೆ ಬೂಮ್ರಾ ಫಿಟ್‌ನೆಸ್ ಮರಳಿ ಪಡೆಯುವ ವಿಶ್ವಾಸದಲ್ಲಿ ತಂಡದ ಆಡಳಿತ ಇದೆ.

ಜಸ್‌ಪ್ರೀತ್ ಬೂಮ್ರಾ

ಮೊದಲ ಟೆಸ್ಟ್‌ಗೆ ಸ್ಟಾರ್ಕ್ ಅನುಮಾನ



ಮಿಚೆಲ್ ಸ್ಟಾರ್ಕ್

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ಅವರು ಭಾರತ ವಿರುದ್ಧದ ಬಾರ್ಡರ್– ಗಾವಸ್ಕರ್ ಕ್ರಿಕೆಟ್ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಆಡುವುದು ಅನುಮಾನ.

'ನಾನು ಮೊದಲ ಟೆಸ್ಟ್‌ಅನ್ನು ಕಳೆದುಕೊಳ್ಳುವ ಸಾಧ್ಯತೆಯೇ ಅಧಿಕ. ಈ ತಿಂಗಳ ಕೊನೆಯ ವೇಳೆಗೆ ಗಾಯದಿಂದ ಎಷ್ಟು ಚೇತರಿಸಿಕೊಳ್ಳುವೆ ಎಂಬುದನ್ನು ನೋಡಬೇಕು. 2ನೇ ಟೆಸ್ಟ್ ವೇಳೆಗೆ ಆಯ್ಕೆಗೆ ಲಭ್ಯನಾಗುವ ವಿಶ್ವಾಸವಿದೆ' ಎಂದು ಸೋಮವಾರ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧದ 'ಬಾಕ್ಸಿಂಗ್ ಡೇ' ಪಂದ್ಯದಲ್ಲಿ ಸ್ಟಾರ್ಕ್ ಅವರ ಕೈಬೆರಳಿಗೆ ಗಾಯವಾಗಿತ್ತು. ಕ್ಯಾಮರಾನ್ ಗ್ರೀನ್ ಅವರೂ ಮೊದಲ ಟೆಸ್ಟ್‌ಗೆ ಲಭ್ಯರಾಗುವ ಸಾಧ್ಯತೆ ಕಡಿಮೆ. ಆಸ್ಟ್ರೇಲಿಯಾ ತಂಡ ಫೆ.9ರಿಂದ ನಾಗ್ಪುರದಲ್ಲಿ ಆರಂಭವಾಗುವ ಮೊದಲ ಟೆಸ್ಟ್‌ನಲ್ಲಿ ಭಾರತದ ವಿರುದ್ಧ ಆಡಲಿದೆ.

ಕ್ರಿಕೆಟ್ ಪ್ರಸಾರ ಹಕ್ಕು: ₹ 130 ಕೋಟಿ ರಿಯಾಯಿತಿ ಕೋರಿದ ಸ್ಟಾರ್ ಇಂಡಿಯಾ

ನವದೆಹಲಿ (ಪಿಟಿಐ): ಭಾರತದಲ್ಲಿ ನಡೆಯುತ್ತಿರುವ ಕ್ರಿಕೆಟ್ ಪಂದ್ಯಗಳ ಪ್ರಸಾರದ ಹಕ್ಕು ಹೊಂದಿರುವ ಸ್ಟಾರ್ ಇಂಡಿಯಾ, ತನ್ನ ಒಪ್ಪಂದದ ಮೊತ್ತದಲ್ಲಿ ₹ 130 ಕೋಟಿ ರಿಯಾಯಿತಿ ನೀಡಬೇಕು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯನ್ನು (ಬಿಸಿಸಿಐ) ಕೋರಿದೆ.

ಸೋಮವಾರ ವರ್ಚುವಲ್ ವೇದಿಕೆಯಲ್ಲಿ ನಡೆದ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ತುರ್ತು ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ.

ಸ್ಟಾರ್ ಇಂಡಿಯಾ 2018 ರಿಂದ 2023ರ ಅವಧಿಗೆ ಭಾರತದಲ್ಲಿ ನಡೆಯುವ ಪಂದ್ಯಗಳ ಪ್ರಸಾರದ ಹಕ್ಕು ತನ್ನದಾಗಿಸಿಕೊಂಡಿತ್ತು. ಇದಕ್ಕಾಗಿ ಮಂಡಳಿಗೆ ₹ 6,138 ಕೋಟಿ ನೀಡಿತ್ತು.

ಆದರೆ ಕೋವಿಡ್ ಕಾರಣ ಕೆಲವೊಂದು ಪಂದ್ಯಗಳು ನಡೆದಿರಲಿಲ್ಲ. ಆದ್ದರಿಂದ ಒಪ್ಪಂದದ ಮೊತ್ತದಲ್ಲಿ ಅಲ್ಪ ರಿಯಾಯಿತಿ ನೀಡಬೇಕು ಎಂದು ಕೇಳಿಕೊಂಡಿದೆ.

'ಈ ವಿಷಯದ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು. ಆದರೆ ಸ್ಟಾರ್ ಇಂಡಿಯಾ ಕೋರಿಕೆಯನ್ನು ತಿರಸ್ಕರಿಸುವ ಅಥವಾ ಒಪ್ಪಿಕೊಳ್ಳುವ ಬಗ್ಗೆ ಅಂತಿಮ ತೀರ್ಮಾನ ಆಗಿಲ್ಲ' ಎಂದು ಮಂಡಳಿಯ ಮೂಲಗಳು ತಿಳಿಸಿವೆ.

ರಿಯಾಯಿತಿ ಕೋರಿಲ್ಲ: 'ನಾವು ಬಿಸಿಸಿಐನಲ್ಲಿ ಯಾವುದೇ ರಿಯಾಯಿತಿ ಕೋರಿಲ್ಲ. ಒಪ್ಪಂದದ ಪ್ರಕಾರ ಶುಲ್ಕ ಪಡೆದುಕೊಳ್ಳುವಂತೆ ಕೇಳಿದ್ದೇವೆ. 2020ರಲ್ಲಿ ನಡೆಯಬೇಕಿದ್ದ ಕೆಲವು ಪಂದ್ಯಗಳು ಕೋವಿಡ್ ಕಾರಣ ಮುಂದೂಡಲ್ಪಟ್ಟು 2022 ರಲ್ಲಿ ನಡೆದಿದೆ. ಆ ಪಂದ್ಯಗಳಿಗೆ 2020ರಲ್ಲಿದ್ದ ಶುಲ್ಕ ವಿಧಿಸಬೇಕೇ ಹೊರತು 2022ರ ಶುಲ್ಕ ವಿಧಿಸಬಾರದು ಎಂದಿದ್ದೇವೆ. ರಿಯಾಯಿತಿಯ ಪ್ರಶ್ನೆಯೇ ಬಂದಿಲ್ಲ' ಎಂದು ಸ್ಟಾರ್ ಇಂಡಿಯಾದ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದ್ದಾರೆ.

ಬ್ಯಾಂಕ್ ಖಾತರಿ ಮೊತ್ತ ನಗದೀಕರಿಸಲು ಬೈಜುಸ್ ಕೋರಿಕೆ: ಭಾರತ ಕ್ರಿಕೆಟ್ ತಂಡದ ಪ್ರಾಯೋಜಕತ್ವದಿಂದ ಹೊರನಡೆಯಲು ಬಯಸಿರುವ ಬೈಜುಸ್, ಬ್ಯಾಂಕ್ ಖಾತರಿಯಾಗಿ ಇಟ್ಟಿರುವ ₹140 ಕೋಟಿ ಮೊತ್ತವನ್ನು ನಗದೀಕರಿಸುವಂತೆ ಬಿಸಿಸಿಐನಲ್ಲಿ ಕೇಳಿದೆ.

ಪೋಷಾಕು ಪ್ರಾಯೋಜತ್ವದಿಂದ ದೂರ ಸರಿಯುತ್ತಿರುವುದಾಗಿ ಬೈಜುಸ್, ಕಳೆದ ನವೆಂಬರ್‌ನಲ್ಲಿ ಬಿಸಿಸಿಐಗೆ ಹೇಳಿತ್ತು. ಆದರೆ 2023ರ ಮಾರ್ಚ್‌ವರೆಗೆ ಮುಂದುವರಿಯುವಂತೆ ಮಂಡಳಿಯು ಕೇಳಿಕೊಂಡಿತ್ತು.

ಒಪ್ಪಂದದಂತೆ ಬೈಜುಸ್, ₹ 140 ಕೋಟಿಯನ್ನು ಬ್ಯಾಂಕ್ ಖಾತರಿಯಾಗಿ ಇಟ್ಟಿತ್ತು. ಇನ್ನುಳಿದ ಸುಮಾರು ₹ 160 ಕೋಟಿ ಹಣವನ್ನು ಕಂತಿನಲ್ಲಿ ಪಾವತಿಸಬೇಕಿತ್ತು.

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಸಿಂಧುಗೆ ಕರೋಲಿನಾ ಸವಾಲು

ಕ್ವಾಲಾಲಂಪುರ (ಪಿಟಿಐ): ಐದು ತಿಂಗಳ ಬಳಿಕ ಸ್ಪರ್ಧಾಕಣಕ್ಕೆ ಮರಳಲಿರುವ ಭಾರತದ ಪಿ.ವಿ. ಸಿಂಧು ಅವರು ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಕಠಿಣ ಸವಾಲು ಎದುರಿಸಲಿದ್ದಾರೆ.

ಮಂಗಳವಾರದಿಂದ ಟೂರ್ನಿಯು ಇಲ್ಲಿ ನಡೆಯಲಿದ್ದು ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಸಿಂಧು ಅವರಿಗೆ ಸ್ಪೇನ್‌ನ ಕರೋಲಿನಾ ಮರಿನ್ ಮುಖಾಮುಖಿಯಾಗಲಿದ್ದಾರೆ. ಎಚ್.ಎಸ್. ಪ್ರಣಯ್, ಲಕ್ಷ್ಯ ಸೇನ್ ಸೇರಿದಂತೆ ಭಾರತದ ಆಟಗಾರರು, ವರ್ಷದ ಮೊದಲ ಟೂರ್ನಿಯಲ್ಲಿ ಶುಭಾರಂಭದ ನಿರೀಕ್ಷೆಯಲ್ಲಿದ್ದಾರೆ.

ಪಾದದ ಗಾಯದಿಂದ ಬಳಲಿದ್ದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಚೇತರಿಸಿಕೊಂಡಿದ್ದು, ಪೈಪೋಟಿ ನೀಡಲು ಸಜ್ಜಾಗಿದ್ದಾರೆ. ಅವರು ಕೊನೆಯ ಬಾರಿ ಆಡಿದ್ದು 2022ರ ಆಗಸ್ಟ್‌ನಲ್ಲಿ ನಡೆದ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ.

ಪಿ.ವಿ.ಸಿಂಧು

ಮರಿನ್ ಅವರು ಸಿಂಧು ಎದುರು ಕೊನೆಯ ಬಾರಿ ಆಡಿದ ಮೂರೂ ಪಂದ್ಯಗಳಲ್ಲಿ ಜಯ ಸಾಧಿಸಿದ್ದಾರೆ. ಅಲ್ಲದೆ ಮುಖಾಮುಖಿಯಾದ ಒಟ್ಟು ಪಂದ್ಯಗಳ ಗೆಲುವಿನಲ್ಲಿ 9–5ರಿಂದ ಮುಂದಿದ್ದಾರೆ. ಹೀಗಾಗಿ ಇಬ್ಬರ ಮಧ್ಯದ ಹಣಾಹಣಿ ಕುತೂಹಲ ಕೆರಳಿಸಿದೆ.

ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಲಕ್ಷ್ಯ, ಸಹ ಆಟಗಾರ ಪ್ರಣಯ್ ಎದುರು ಆಡಲಿದ್ದಾರೆ. ಕಿದಂಬಿ ಶ್ರೀಕಾಂತ್ ಅವರು ಜಪಾನ್‌ನ ಕೆಂಟೊ ನಿಶಿಮೊಟಾ ವಿರುದ್ಧ ಕಣಕ್ಕಿಳಿಯುವರು. ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಮಹಿಳಾ ಸಿಂಗಲ್ಸ್‌ನಲ್ಲಿ ಸೈನಾ ನೆಹ್ವಾಲ್, ಆಕರ್ಷಿ ಕಶ್ಯಪ್ ಮತ್ತು ಮಾಳವಿಕಾ ಬನ್ಸೋದ್ ಅವರು ಅದೃಷ್ಟಪರೀಕ್ಷಿಸಲಿದ್ದಾರೆ.

ಮಹಿಳಾ ಡಬಲ್ಸ್‌ನಲ್ಲಿ ತ್ರಿಶಾ ಜೋಲಿ– ಗಾಯತ್ರಿ ಗೋಪಿಚಂದ್, ಅಶ್ವಿನಿ ಭಟ್– ಶಿಖಾ ಗೌತಮ್, ಮಿಶ್ರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್– ತನಿಶಾ ಕ್ರಾಸ್ಟೊ ಆಡುವರು.

ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸನ್, ಮಲೇಷ್ಯಾದ ಲೀ ಜಿ ಜಿಯಾ, ಜಪಾನ್‌ನ ಅಕಾನೆ ಯಮಗುಚಿ ಟೂರ್ನಿಯಲ್ಲಿ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ಪಂದ್ಯಗಳ ಆರಂಭ: ಬೆಳಿಗ್ಗೆ 7.30

ನೇರಪ್ರಸಾರ: ಸ್ಪೋರ್ಟ್ಸ್ 18

'ಆಸ್ಟ್ರೇಲಿಯಾ ಓಪನ್ ಟೆನಿಸ್: ಕೋವಿಡ್ ಇದ್ದರೂ ಆಡಬಹುದು'

ಮೆಲ್ಬರ್ನ್ (ರಾಯಿಟರ್ಸ್): ಈ ತಿಂಗಳು ನಡೆಯಲಿರುವ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಕಣಕ್ಕಿಳಿಯುವ ಟೆನಿಸ್ ಪಟುಗಳಿಗೆ ಕೋವಿಡ್ ಪರೀಕ್ಷೆ ಅಗತ್ಯವಿಲ್ಲ. ಕೊರೊನಾ ಸೋಂಕು ದೃಢಪಟ್ಟರೂ ಅವರು ಆಡಬಹುದು ಎಂದು ಟೂರ್ನಿಯ ನಿರ್ದೇಶಕ ಕ್ರೇಗ್ ಟಿಲಿ ಸೋಮವಾರ ಹೇಳಿದ್ದಾರೆ.

ಕಳೆದ ಎರಡು ವರ್ಷಗಳಿಂದ ಇದ್ದ ಕೋವಿಡ್ ನಿಯಮಾವಳಿಗಳಲ್ಲಿ ಆದ ಗಮನಾರ್ಹ ಬದಲಾವಣೆಗಳನ್ನು ಟಿಲಿ ಅವರ ಹೇಳಿಕೆ ಪ್ರತಿಬಿಂಬಿಸಿದೆ.

2021ರ ಟೂರ್ನಿಯನ್ನು ಬಯೋ-ಬಬಲ್‌ನಲ್ಲಿ ನಡೆಸಲಾಗಿತ್ತು. ಕಳೆದ ವರ್ಷ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ನಿರಾಕರಿಸಿದ್ದ, ಒಂಬತ್ತು ಬಾರಿಯ ಚಾಂಪಿಯನ್ ಸರ್ಬಿಯಾದ ಆಟಗಾರ ನೊವಾಕ್ ಜೊಕೊವಿಚ್ ಅವರಿಗೆ ಆಡಲು ಆಯೋಜಕರು ಅವಕಾಶ ನೀಡಿರಲಿಲ್ಲ.

ಫುಟ್‌ಬಾಲ್: ಎಚ್‌ಎಎಲ್‌ಗೆ ಜಯ

ಬೆಂಗಳೂರು: ಎಚ್‌ಎಎಲ್ ಮತ್ತು ಬೆಂಗಳೂರು ಗನ್ನರ್ಸ್ ತಂಡಗಳು ಬಿಡಿಎಫ್‌ಎ ಎ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿದವು.

ಸೋಮವಾರ ಎಚ್‌ಎಎಲ್ 1–0ಯಿಂದ ಪರಿಕ್ರಮ ಎಫ್‌ಸಿ ತಂಡವನ್ನು ಸೋಲಿಸಿತು. ವಿಜೇತ ತಂಡದ ಪರ ದೇವದತ್ತ 10ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಮತ್ತೊಂದು ಹಣಾಹಣಿಯಲ್ಲಿ ಗನ್ನರ್ಸ್ 2–1ರಿಂದ ಶ್ರೀ ಗಜಾನನ ಎಫ್‌ಸಿ ತಂಡವನ್ನು ಮಣಿಸಿತು.

ಅಮೆರಿಕದ ಮೊದಲ ಸಿಖ್ ನ್ಯಾಯಾಧೀಶೆ ಮನ್‌ಪ್ರೀತ್

ಹ್ಯೂಸ್ಟನ್ (ಪಿಟಿಐ): ಭಾರತೀಯ ಮೂಲದ ಮನ್‌ಪ್ರೀತ್ ಮೋನಿಕಾ ಸಿಂಗ್ ಅವರು ಹ್ಯಾರಿಸ್ ನ್ಯಾಯಾಲಯದ ನ್ಯಾಯಾಧೀಶೆಯಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ಅಮೆರಿಕದಲ್ಲಿ ಸಿಖ್ ಸಮುದಾಯಕ್ಕೆ ಸೇರಿದ ಮೊದಲ ನ್ಯಾಯಾಧೀಶೆ ಎಂಬ ಖ್ಯಾತಿಗೆ ಮನ್‌ಪ್ರೀತ್ ಪಾತ್ರರಾಗಿದ್ದಾರೆ.

ಮನ್‌ಪ್ರೀತ್ ತಂದೆ, ಭಾರತದಿಂದ 1970ರ ಸುಮಾರಿಗೆ ಅಮೆರಿಕಕ್ಕೆ ವಲಸೆ ಹೋಗಿದ್ದರು. ಮನ್‌ಪ್ರೀತ್ ಅವರು ಹ್ಯೂಸ್ಟನ್‌ನಲ್ಲಿಯೇ ಹುಟ್ಟಿ ಬೆಳೆದವರು. ಸದ್ಯ ಅವರು ಪತಿ, ಇಬ್ಬರು ಮಕ್ಕಳೊಂದಿಗೆ ಬಿಲೇರ್‌ನಲ್ಲಿ ವಾಸವಾಗಿದ್ದಾರೆ. ಸ್ಥಳೀಯ ಹಂತದ ವಕೀಲೆಯಾಗಿ ಮನ್‌ಪ್ರೀತ್ ಅವರು 20 ವರ್ಷ ಸೇವೆ ಸಲ್ಲಿಸಿದ್ದಾರೆ. ಜೊತೆಗೆ, ಸ್ಥಳೀಯ, ರಾಜ್ಯ ಹಾಗೂ ರಾಷ್ಟ್ರಮಟ್ಟದ ನಾಗರಿಕ ಹಕ್ಕುಗಳ ಹಲವಾರು ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ.

ಕಾಸರಗೋಡಿನ ಸುರೇಂದ್ರನ್ ಅಮೆರಿಕದ ನ್ಯಾಯಾಧೀಶ

ಕಾಸರಗೋಡು: ಬಡತನದಿಂದಾಗಿ ಶಾಲೆಯನ್ನು ಅರ್ಧಕ್ಕೇ ಬಿಟ್ಟಿದ್ದ ಹಾಗೂ ಜೀವನ ನಿರ್ವಹಣೆಗಾಗಿ ಬೀಡಿ ಸುದ್ದಿ, ದಿನಗೂಲಿ ಕೆಲಸ ಮಾಡಿದ್ದ ಕಾಸರಗೋಡಿನ ಸುರೇಂದ್ರನ್ ಕೆ.ಪಟ್ಟೆಲ್ ಅವರು ಇದೀಗ ಅಮೆರಿಕದ ಟೆಕ್ಸಾಸ್ ಕೌಂಟಿ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ನೇಮಕಗೊಂಡಿದ್ದಾರೆ.

'ಬಡತನದ ಕಾರಣ 10ನೇ ತರಗತಿ ಬಳಿಕ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಒಂದು ವರ್ಷ ಬೀಡಿ ಕಟ್ಟುವ ಕೆಲಸವನ್ನು ಮುಂದುವರಿಸಿದೆ. ಈ ಕಷ್ಟದ ದಿನಗಳಲ್ಲಿ ನಾನು ಏನಾದರು ಸಾಧಿಸಬೇಕು ಎಂಬ ಆಸೆ ಮೂಡಿತು. ಮುಂದೆ ಮನೆಯಲ್ಲಿ ಓದುವುದಾಗಿ ಹೇಳಿ ಕಾಲೇಜಿಗೆ ಸೇರಿದೆ' ಎಂದು ಅವರು 'ಎನ್‌ಡಿಟಿವಿ'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಕಾಲೇಜು ಶಿಕ್ಷಣದಲ್ಲೂ ಆರ್ಥಿಕ ಸಂಕಷ್ಟ ಅನುಭವಿಸಿದ್ದರು. 1995ರಲ್ಲಿ ಕಾನೂನು ಪದವಿ ಪಡೆದು ವಕೀಲ ವೃತ್ತಿ ಆರಂಭಿಸಿದ್ದರು. ನಂತರ ಸುಪ್ರೀಂ ಕೋರ್ಟ್‌ನಲ್ಲೂ ವಕೀಲರಾಗಿ ಕೆಲಸ ಮಾಡಿದರು. ಸುರೇಂದ್ರನ್ ಪತ್ನಿ ನರ್ಸ್. 2007ರಲ್ಲಿ ಅವರ ಕುಟುಂಬಕ್ಕೆ ಅಮೆರಿಕ ಹೋಗುವ ಅವಕಾಶ ದೊರೆಯಿತು. ಟೆಕ್ಸಾಸ್‌ನಲ್ಲಿ ಅವರು ಬಾರ್ ಪರೀಕ್ಷೆ ತೆಗೆದುಕೊಂಡರು. ಕೆಲ ವಾಣಿಜ್ಯ ಮಳಿಗೆಗಳಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡಿಕೊಂಡು ಓದಿದ ಅವರು ಬಾರ್ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದರು. ಅತಿ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಮೊದಲ ಯತ್ನದಲ್ಲೇ ಉತ್ತೀರ್ಣರಾದರು. ಅದರ ಫಲವಾಗಿಯೇ ಇದೀಗ ನ್ಯಾಯಾಧೀಶರಾಗಿದ್ದಾರೆ.

ಶ್ರೀಲಂಕಾ:ಭಾರತದ ನೆರವಿನಿಂದ ರೈಲು ಹಳಿ ಕಾಮಗಾರಿ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾದಲ್ಲಿನ ಉತ್ತರ ಭಾಗದಲ್ಲಿ ಶತಮಾನದಷ್ಟು ಹಳೆಯ ರೈಲ್ವೆ ಹಳಿ ಪುನರ್ ನಿರ್ಮಾಣ ಕಾಮಗಾರಿ ಭಾರತದ ನೆರವಿನಿಂದ ಸೋಮವಾರ ಆರಂಭಗೊಂಡಿದೆ.

ಒಟ್ಟು 252 ಕಿ.ಮೀ. ಉದ್ದದ ರೈಲು ಮಾರ್ಗದ ಪೈಕಿ ಮೇದವಾಚ್ಚಿಯಾ ಮತ್ತು ಮಧು ರಸ್ತೆ ನಡುವಿನ 43 ಕಿ.ಮೀ. ಉದ್ದದ ಮೊದಲ ಹಂತದ ಕಾಮಗಾರಿಗೆ ಚಾಲನೆ ನೀಡಲಾಗಿದೆ. 81 ದಶಲಕ್ಷ ಡಾಲರ್ (₹ 667 ಕೋಟಿ) ವೆಚ್ಚದಲ್ಲಿ ಈ ಕಾಮಗಾರಿ ನಡೆಯಲಿದೆ.

ಭಾರತದ 'ಇರ್ಕಾನ್ ಇಂಟರ್‌ನ್ಯಾಷನಲ್' ಕಂಪನಿ ಈ ಕಾಮಗಾರಿ ಕೈಗೆತ್ತಿಕೊಂಡಿದೆ.

ಇರಾನ್: ಮತ್ತೆ ಮೂವರಿಗೆ ಮರಣದಂಡನೆ

ಟೆಹರಾನ್ (ಎಎಫ್‌ಪಿ): ಇರಾನ್‌ನಲ್ಲಿ ಮಹ್ಸಾ ಅಮಿನಿ ಸಾವನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ ಸಂದರ್ಭ ಭದ್ರತಾ ಸಿಬ್ಬಂದಿ ಕೊಂದ ಆರೋಪದ ಮೇಲೆ ಇರಾನ್‌ನ ಇನ್ನೂ ಮೂವರಿಗೆ ಸೋಮವಾರ ಮರಣದಂಡನೆ ವಿಧಿಸಲಾಗಿದೆ.

ಇದುವರೆಗೆ 17 ಮಂದಿಗೆ ಮರಣ ದಂಡನೆ ವಿಧಿಸಲಾಗಿದೆ. ಈ ಪೈಕಿ ನಾಲ್ವರಿಗೆ ಶಿಕ್ಷೆ ಜಾರಿಯಾಗಿದೆ.

ಈಗ ಘೋಷಿಸಲಾಗಿರುವ ಎಲ್ಲಾ ಶಿಕ್ಷೆಗಳನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಬಹುದಾಗಿದೆ ಎಂದು ಆನ್‌ಲೈನ್ ಸುದ್ದಿಸಂಸ್ಥೆ ಮಿಜಾನ್ ಹೇಳಿದೆ.

ಸುಯೆಜ್ ಕಾಲುವೆ ಸಂಚಾರ ಸರಾಗ

ಇಸ್ಮೇಲಿಯಾ, ಈಜಿಪ್ಟ್ (ಎಎಫ್‌ಪಿ): ಸುಯೆಜ್ ಕಾಲುವೆಯಲ್ಲಿ ಸಿಲುಕಿದ್ದ ಉಕ್ರೇನ್ ಸರಕು ಸಾಗಣೆ ಹಡಗನ್ನು ತೆರವುಗೊಳಿಸಿದ ನಂತರ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಬಂದಿದ್ದು, ಎಂದಿನಂತೆ ಹಡಗುಗಳು ಸಂಚರಿಸುತ್ತಿವೆ ಎಂದು ಈಜಿಪ್ಟ್‌ನ ಸುಯೆಜ್ ಕಾಲುವೆ ಪ್ರಾಧಿಕಾರ ತಿಳಿಸಿದೆ.

'ಟರ್ಕಿಯೆಯಿಂದ ಚೀನಾದತ್ತ ಸಾಗುತ್ತಿದ್ದ ಉಕ್ರೇನಿನ ಸರಕು ಸಾಗಣೆ ಹಡಗು ತಾಂತ್ರಿಕ ತೊಂದರೆಯ ಕಾರಣ ಕಾಲುವೆಯಲ್ಲಿ ಸಿಲುಕಿತ್ತು. ಇದರಿಂದ ಕೆಲ ಹೊತ್ತು ಸಂಚಾರದಟ್ಟಣೆ ಉಂಟಾಗಿತ್ತು.

ದೇಶದಲ್ಲಿ ಕೋವಿಡ್ ಹೊಸ ವೈರಾಣು ಪತ್ತೆ; 8ಕ್ಕೇರಿದ ಪ್ರಕರಣಗಳು

ನವದೆಹಲಿ (ಪಿಟಿಐ): ಅಮೆರಿಕದಲ್ಲಿ ಕೋವಿಡ್ ಉಲ್ಬಣಕ್ಕೆ ಕಾರಣವಾದ ಕೋವಿಡ್–19ರ ರೂಪಾಂತರಿ ಎಕ್ಸ್‌ಬಿಬಿ 1.5 ತಳಿಯ ಹೊಸ ಪ್ರಕರಣ ಸೋಮವಾರ ಉತ್ತರಾಖಂಡದಲ್ಲಿ ಪತ್ತೆಯಾಗಿದೆ. ಇಂತಹ ಪ್ರಕರಣಗಳ ಸಂಖ್ಯೆ ದೇಶದಲ್ಲಿ 8ಕ್ಕೆ ಏರಿದೆ.

ಗುಜರಾತ್‌ನಲ್ಲಿ 3, ಕರ್ನಾಟಕ, ತೆಲಂಗಾಣ, ಛತ್ತೀಸಗಢ ಮತ್ತು ರಾಜಸ್ಥಾನದಲ್ಲಿ ತಲಾ ಒಂದೊಂದು ಪ್ರಕರಣ ವರದಿಯಾಗಿವೆ ಎಂದು ಭಾರತೀಯ ಕೋವಿಡ್ ವೈರಾಣು ಸಂರಚನಾ ವಿಶ್ಲೇಷಣಾ ಘಟಕ ಹೇಳಿದೆ.

2022ರ ಡಿಸೆಂಬರ್ 29ರಿಂದ ಇದೇ ಜನವರಿ 7ರ ನಡುವೆ ಸಮುದಾಯದಿಂದ ಸಂಗ್ರಹಿಸಿದ 324 ಕೋವಿಡ್ ಪಾಸಿಟಿವ್ ಮಾದರಿಗಳ ವಿಶ್ಲೇಷಣೆಯು ಓಮೈಕ್ರಾನ್ ರೂಪಾಂತರಿ ಬಿಎ.2 ಮತ್ತು ಇದರ ಉಪತಳಿಗಳಾದ ಬಿಎ.2.75, ಎಕ್ಸ್‌ಬಿಬಿ (37), ಬಿಕ್ಯೂ.1 ಮತ್ತು ಬಿಕ್ಯೂ.1.1 (5) ಹರಡಿರುವುದನ್ನು ದೃಢಪಡಿಸಿದೆ ಎಂದು ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಜನವರಿ ಅಂತ್ಯಕ್ಕೆ ಹೊಸ ಸಂಸತ್ ಭವನ ಪೂರ್ಣ

ನವದೆಹಲಿ (ಪಿಟಿಐ): ಸಂಸತ್ ಭವನದ ಹೊಸ ಕಟ್ಟಡವು ಜನವರಿ ಅಂತ್ಯದ ವೇಳೆಗೆ ಸಿದ್ಧವಾಗಲಿದೆ. ಕಟ್ಟಡದ ಒಳಾಂಗಣ ವಿನ್ಯಾಸಕ್ಕೆ ಅಂತಿಮ ಸ್ಪರ್ಶವನ್ನು ತ್ವರಿತಗತಿಯಲ್ಲಿ ನೀಡಲಾಗುತ್ತಿದೆ ಎಂದು ಸರ್ಕಾರದ ಮೂಲಗಳು ಸೋಮವಾರ ತಿಳಿಸಿವೆ.

ಮುಂಬರಲಿರುವ ಬಜೆಟ್ ಅಧಿವೇಶನವನ್ನು ಹೊಸ ಕಟ್ಟಡದಲ್ಲಿ ನಡೆಸಲಾಗುವುದೋ ಅಥವಾ ಈಗಿರುವ ಕಟ್ಟಡದಲ್ಲೇ ನಡೆಸಲಾಗುವುದೋ ಎಂಬ ಕುರಿತು ಇನ್ನಷ್ಟೇ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಮೂಲಗಳು ಹೇಳಿವೆ.

ದಾವೂದ್‌ಗೆ ನೆರವು: ಮೂವರಿಗೆ ಶಿಕ್ಷೆ

ಮುಂಬೈ (ಪಿಟಿಐ): ಭೂಗತ ಪಾತಕಿ ದಾವೂದ್ ಇಬ್ರಾಹಿಂ ಮತ್ತು ಸಹಚರರಿಗೆ ಪಾಕಿಸ್ತಾನದ ಕರಾಚಿಯಲ್ಲಿ ಗುಟ್ಕಾ ಉತ್ಪಾದಕ ಘಟಕ ಸ್ಥಾಪಿಸಲು ನೆರವು ನೀಡಿದ ಪ್ರಕರಣದಲ್ಲಿ ಉದ್ಯಮಿ ಜೆ.ಎಂ.ಜೋಶಿ ಮತ್ತು ಇಬ್ಬರಿಗೆ ಇಲ್ಲಿನ ವಿಶೇಷ ನ್ಯಾಯಾಲಯ 10 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಮಂಜು: 260 ರೈಲುಸಂಚಾರ ರದ್ದು

ನವದೆಹಲಿ: ದಟ್ಟ ಮಂಜಿನಿಂದ ಕೂಡಿದ ವಾತಾವರಣವಿದ್ದ ಕಾರಣ 260ಕ್ಕೂ ಹೆಚ್ಚು ರೈಲುಗಳ ಸಂಚಾರವನ್ನು ಸೋಮವಾರ ರದ್ದುಗೊಳಿಸಲಾಗಿದೆ ಎಂದು ರೈಲ್ವೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮಹದಾಯಿ: ಚರ್ಚೆಗೆ ಸಾವಂತ್ ಒಲವು

ಪಣಜಿ: ಕರ್ನಾಟಕ ಮತ್ತು ಗೋವಾ ನಡುವಣ ಮಹದಾಯಿ ವಿವಾದ ಕುರಿತು ಗೋವಾ ವಿಧಾನಸಭೆಯಲ್ಲಿ ಚರ್ಚಿಸುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದರು. ಶಾಸಕರ ದಿನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಆರೆಸ್ಸೆಸ್‌ನವರು 21ನೇ ಶತಮಾನದ ಕೌರವರು'

ಚಂಡೀಗಢ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿರುದ್ಧ ಹರಿಹಾಯ್ದಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, 'ಆರ್‌ಎಸ್‌ಎಸ್‌ನವರು 21ನೇ ಶತಮಾನದ ಕೌರವರು' ಎಂದು ಜರಿದಿದ್ದಾರೆ.

'ಹರಿಯಾಣ ಮಹಾಭಾರತದ ನೆಲ. ಕೌರವರು ಯಾರು? ಮೊದಲು ನಿಮಗೆ 21ನೇ ಶತಮಾನದ ಕೌರವರ ಬಗ್ಗೆ ಹೇಳುತ್ತೇನೆ. ಅವರು ಖಾಕಿ ಚೆಡ್ಡಿ ಧರಿಸುತ್ತಾರೆ. ಲಾಠಿ ಹಿಡಿಯುತ್ತಾರೆ, ಶಾಖೆ ನಡೆಸುತ್ತಾರೆ' ಎಂದು ಹೇಳಿದರು.

ಭಾರತ್ ಜೋಡೊ ಯಾತ್ರೆಯು ಸೋಮವಾರ ಹರಿಯಾಣದ ಅಂಬಾಲಾ ಜಿಲ್ಲೆಯನ್ನು ಪ್ರವೇಶಿಸಿದ ಸಂದರ್ಭದಲ್ಲಿ ಅವರು ಸುದ್ದಿಗಾರರ ಜೊತೆಗೆ ಮಾತನಾಡಿದರು.

ನನಗೆ ವರ್ಚಸ್ಸಿನ ಹಂಗಿಲ್ಲ: 'ನನಗೆ ವರ್ಚಸ್ಸಿನ ಹಂಗಿಲ್ಲ, ವರ್ಚಸ್ಸಿನ ಬಗ್ಗೆ ನಾನು ತಲೆಕೆಡಿಸಿಕೊಂಡಿಯೂ ಇಲ್ಲ. ಯಾತ್ರೆಯು ರಾಹುಲ್ ಗಾಂಧಿ ಬಗ್ಗೆ ಅಲ್ಲ. ಆತನನ್ನು ನಾನೇ ಕೊಂದುಕೊಂಡಿದ್ದೇನೆ' ಎಂದರು.

'ಯಾತ್ರೆಯು ನಿಮ್ಮಲ್ಲಿ ಪರಿವರ್ತನೆಗೆ ಕಾರಣವಾಗಿದೆಯೇ' ಎಂಬ ಮಾಧ್ಯಮ ಪ್ರತಿನಿಧಿಯೊಬ್ಬರ ಪ್ರಶ್ನೆಗೆ ರಾಹುಲ್ ಹೀಗೆ ಪ್ರತಿಕ್ರಿಯಿಸಿದರು ಎಂದು ಎನ್‌ಡಿಟಿವಿ ವರದಿ ಮಾಡಿದೆ.



ರಣಜಿ: ಆಲೂರಿನಲ್ಲಿ ಕರ್ನಾಟಕ –ರಾಜಸ್ಥಾನ ಮುಖಾಮುಖಿ ಇಂದಿನಿಂದ

ಅಗ್ರಸ್ಥಾನ ಉಳಿಸಿಕೊಳ್ಳುವ ಛಲ

• ಗಿರೀಶ ದೊಡ್ಡಮನಿ

ಕರ್ನಾಟಕ ತಂಡದ ಆಟಗಾರರ ತಾಲೀಮು

ಬೆಂಗಳೂರು: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದ-ಲ್ಲಿ ಮಂಗಳವಾರ ಆರಂಭವಾಗಲಿರುವ ರಣಜಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ರಾಜಸ್ಥಾನವನ್ನು ಎದುರಿಸಲಿದೆ.

ಸದ್ಯ ಸಿ ಗುಂಪಿನ ಪಾಯಿಂಟ್ ಪಟ್ಟಿಯ ಅಗ್ರಸ್ಥಾನದಲ್ಲಿರುವ ಕರ್ನಾಟಕದ ಖಾತೆಯಲ್ಲಿ 19 ಅಂಕಗಳಿವೆ. ಎರಡನೇ ಸ್ಥಾನದಲ್ಲಿರುವ ರಾಜಸ್ಥಾನದ ಬಳಿ 14 ಅಂಕಗಳಿವೆ. ಕ್ವಾರ್ಟರ್‌ಫೈನಲ್ ತಲುಪಬೇಕಾದರೆ ತಂಡವು ತನ್ನ ಮೊದಲ ಸ್ಥಾನವನ್ನು ಕಾಯ್ದುಕೊಳ್ಳುವುದು ಮುಖ್ಯ. ರಾಜಸ್ಥಾನ ಎದುರು ಸೇರಿದಂತೆ ಇನ್ನೂ ಮೂರು ಪಂದ್ಯಗಳನ್ನು ಮಯಂಕ್ ಬಳಗ ಆಡಬೇಕಿದೆ.

ವೇಳಾಪಟ್ಟಿಯ ಪ್ರಕಾರ ಕರ್ನಾಟಕ ತಂಡವು ತವರಿನಲ್ಲಿ ಆಡುತ್ತಿರುವ ಕೊನೆಯ ಲೀಗ್ ಪಂದ್ಯ ಇದಾಗಲಿದೆ. ಮುಂದಿನ ಸುತ್ತುಗಳಲ್ಲಿ ಕೇರಳವನ್ನು ತಿರುವನಂತಪುರದಲ್ಲಿ ಮತ್ತು ಜಾರ್ಖಂಡ್ ತಂಡವನ್ನು ರಾಂಚಿಯಲ್ಲಿ ಎದುರಿಸಲಿದೆ.

ಕಳೆದ ನಾಲ್ಕು ಪಂದ್ಯಗಳಲ್ಲಿ ಎರಡು ಗೆದ್ದು ಎರಡರಲ್ಲಿ ಡ್ರಾ ಮಾಡಿಕೊಂಡಿದೆ. ಇದರಲ್ಲಿ ಮೂರು ಪಂದ್ಯಗಳು ಚಿನ್ನಸ್ವಾಮಿ ಕ್ರೀಡಾಂಗಣದ-ಲ್ಲಿ ನಡೆದಿದ್ದವು.

ಕಳೆದ ಪಂದ್ಯದಲ್ಲಿ ಛತ್ತೀಸಗಢ ತಂಡದ ಕಠಿಣ ಸವಾಲು ಎದುರಿಸುವಲ್ಲಿ ಮಯಂಕ್‌ಬಳಗವು ಯಶಸ್ವಿಯಾಯಿತು. ಐದು ವಿಕೆಟ್ ಗೊಂಚಲು ಗಳಿಸಿದ ವೈಶಾಖ ವಿಜಯಕುಮಾರ್ ಮತ್ತು ವಿದ್ವತ್ ಕಾವೇರಪ್ಪ ಅವರ ಆಟ ಪ್ರಮುಖವಾಯಿತು.

ಅಲ್ಲದೇ ನಾಯಕ ಮಯಂಕ್ ಅಗರವಾಲ್ ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ ಶತಕ, ಸಮರ್ಥ್ ಅರ್ಧಶತಕ ಹಾಗೂ ಯುವಪ್ರತಿಭೆ ನಿಕಿನ್ ಜೋಸ್ ಎರಡೂ ಇನಿಂಗ್ಸ್‌ಗಳಲ್ಲಿ ತೋರಿದ ದಿಟ್ಟ ಆಟ ಗಮನ ಸೆಳೆದಿತ್ತು.

ಆದರೆ, ಅನುಭವಿ ಮನೀಷ್ ಪಾಂಡೆ, ವಿಕೆಟ್‌ಕೀಪರ್ ಬ್ಯಾಟರ್ ಬಿ.ಆರ್. ಶರತ್ ಅವರ ಅಸ್ಥಿರತೆ ಬ್ಯಾಟಿಂಗ್ ವಿಭಾಗದಲ್ಲಿ ಚಿಂತೆಯ ವಿಷಯಗಳಾಗಿವೆ.

ಈ ಟೂರ್ನಿಯ ಕಳೆದ ಎಲ್ಲ ಪಂದ್ಯ-ಗಳಲ್ಲಿಯೂ ಬೆಂಚ್ ಕಾದಿರುವ ಕೆ.ವಿ. ಸಿದ್ಧಾರ್ಥ್ ಅವರಿಗೆ ಅವಕಾಶ ಸಿಗುವ ನಿರೀಕ್ಷೆ ಇದೆ. ಇದರಿಂದಾಗಿ ಯುವ ಆಟಗಾರ ವಿಶಾಲ್ ಒಣತ್ ವಿಶ್ರಾಂತಿ ಪಡೆಯಬಹುದು.

ಇಲ್ಲಿಯವರೆಗೆ ಎದುರಿಸಿದ ತಂಡಗಳಿಗಿಂತ ರಾಜಸ್ಥಾನ ತುಸು ಬಲಿಷ್ಠವಾಗಿದೆ. ಅಶೋಕ್ ಮನೇರಿಯಾ ಬಳಗವು ಆಡಿರುವ ನಾಲ್ಕು ಪಂದ್ಯಗಳಲ್ಲಿ ಒಂದರಲ್ಲಿ ಜಯಿಸಿ, ಮೂರರಲ್ಲಿ ಡ್ರಾ ಮಾಡಿಕೊಂಡಿದೆ. ಬ್ಯಾಟಿಂಗ್ ವಿಭಾಗದಲ್ಲಿ ಯಶ್ ಕೊಠಾರಿ ಉತ್ತಮವಾಗಿ ಆಡುತ್ತಿದ್ದಾರೆ.

ಕಳೆದ ಪಂದ್ಯದಲ್ಲಿ ಜಾರ್ಖಂಡ್ ಎದುರು 18 ವರ್ಷದ ಕರಣ್ ಲಾಂಬಾ ಶತಕ ಬಾರಿಸಿ ಮಿಂಚಿದ್ದರು. ತಂಡದ ಸ್ಪಿನ್ನರ್‌ಗಳು ಉತ್ತಮವಾಗಿ ಆಡುವ ಸಾಮರ್ಥ್ಯ ಹೊಂದಿದ್ದಾರೆ. ಆತಿಥೇಯ ತಂಡದ ಬ್ಯಾಟರ್‌ಗಳಿಗೆ ಸವಾಲೊಡ್ಡಬಲ್ಲರು.

ತಂಡಗಳ ವಿವರ

ಕರ್ನಾಟಕ: ಮಯಂಕ್ ಅಗರವಾಲ್ (ನಾಯಕ), ಆರ್. ಸಮರ್ಥ್, ನಿಕಿನ್ ಜೋಸ್, ವಿಶಾಲ್ ಒಣತ್, ಮನೀಷ್ ಪಾಂಡೆ, ಬಿ.ಆರ್. ಶರತ್, ಶ್ರೀನಿವಾಸ್ ಶರತ್ (ಇಬ್ಬರೂ ವಿಕೆಟ್‌ಕೀಪರ್), ವಿದ್ವತ್ ಕಾವೇರಪ್ಪ, ಶ್ರೇಯಸ್ ಗೋಪಾಲ್, ಕೃಷ್ಣಪ್ಪ ಗೌತಮ್, ವೈಶಾಖ ವಿಜಯಕುಮಾರ್, ವಿ. ಕೌಶಿಕ್, ಕೆ.ವಿ. ಸಿದ್ಧಾರ್ಥ್, ಎಂ. ವೆಂಕಟೇಶ್, ದೇವದತ್ತ ಪಡಿಕ್ಕಲ್.

ರಾಜಸ್ಥಾನ: ಅಶೋಕ್ ಮನೇರಿಯಾ (ನಾಯಕ), ಯಶ್ ಕೊಠಾರಿ, ಅಭಿಜಿತ್ ತೋಮರ್, ಮಹಿಪಾಲ್ ಲೊಮ್ರೊರ್, ಸಲ್ಮಾನ್ ಖಾನ್, ಶುಭಂ ಶರ್ಮಾ, ಕುನಾಲ್ ಸಿಂಗ್ ರಾಥೋಡ್ (ವಿಕೆಟ್‌ಕೀಪರ್), ಋತುರಾಜ್ ಸಿಂಗ್, ಕರಣ್ ಲಾಂಬಾ, ತನವೀರ್ ಉಲ್ ಹಕ್, ಅಂಕಿತ್ ಚೌಧರಿ, ರವಿ ಬಿಷ್ಣೋಯಿ, ಕಮಲೇಶ್ ನಾಗರಕೋಟಿ, ಮಾನವ್ ಸುತಾರ್, ಅರಾಫತ್ ಖಾನ್, ಸಂಪ್ರಿತ್ ಜೋಶಿ.

ಪಂದ್ಯ ಆರಂಭ: ಬೆಳಿಗ್ಗೆ 9.30

ಫುಟ್‌ಬಾಲ್: ಗ್ಯಾರೆತ್ ಬೇಲ್ ನಿವೃತ್ತಿ



ಗ್ಯಾರೆತ್ ಬೇಲ್

ಲಂಡನ್ (ಎಎಫ್‌ಪಿ): ವೇಲ್ಸ್ ತಂಡದ ಮಿಡ್‌ಫೀಲ್ಡರ್ ಗ್ಯಾರೆತ್ ಬೇಲ್ ಅವರು ಕ್ಲಬ್ ಮತ್ತು ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ನಿವೃತ್ತಿ ಪ್ರಕಟಿಸಿದ್ದಾರೆ.

'ಕ್ಲಬ್ ಹಾಗೂ ಅಂತರರಾಷ್ಟ್ರೀಯ ಫುಟ್‌ಬಾಲ್‌ನಿಂದ ತಕ್ಷಣದಿಂದಲೇ ನಿವೃತ್ತಿಯಾಗುತ್ತಿದ್ದೇನೆ. ಸಾಕಷ್ಟು ಆಲೋಚನೆಯ ಬಳಿಕ ಈ ನಿರ್ಧಾರಕ್ಕೆ ಬಂದಿದ್ದೇನೆ' ಎಂದು 33 ವರ್ಷದ ಬೇಲ್ ಸಾಮಾಜಿಕ ಮಾಧ್ಯಮದಲ್ಲಿ ಪ್ರ-ಕಟಿಸಿದ್ದಾರೆ.

ಅಂಧ ಮಹಿಳೆಯರ ರಾಷ್ಟ್ರೀಯ ಕ್ರಿಕೆಟ್ ಟೂರ್ನಿ

ಕರ್ನಾಟಕಕ್ಕೆ ಭರ್ಜರಿ ಜಯ

ಬೆಂಗಳೂರು: ನಾಯಕಿ ವರ್ಷಾ ಯು. (118 ರನ್, 53 ಎಸೆತ) ಅವರ ಶತಕ ಮತ್ತು ಗಂಗಾ (8ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ಅಂಧ ಮಹಿಳೆಯರ ಇಂಡಸ್ ಇಂಡ್ ಬ್ಯಾಂಕ್ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಪಶ್ಚಿಮ ಬಂಗಾಳ ತಂಡದ ವಿರುದ್ಧ ಭರ್ಜರಿ ಜಯ ಗಳಿಸಿತು.

ಅಲ್ವಾಯರ್ ಅಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕರ್ನಾಟಕ 174 ರನ್‌ಗಳಿಂದ ಗೆದ್ದಿತು.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಹಾಲಿ ಚಾಂಪಿಯನ್ ಕರ್ನಾಟಕ 18 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 238 ರನ್ ಕಲೆಹಾಕಿತು. ಇದಕ್ಕುತ್ತರವಾಗಿ ಪಶ್ಚಿಮ ಬಂಗಾಳ ತಂಡವು ಕೇವಲ 64 ರನ್ ಗಳಿಸಿತು.

ಒಡಿಶಾಗೆ ಸುಲಭ ಜಯ: ಸಚಿನ್ ತೆಂಡೂಲ್ಕರ್ ಅಂಗಣದಲ್ಲಿ ನಡೆದ ಪಂದ್ಯದಲ್ಲಿ ಒಡಿಶಾ 10 ವಿಕೆಟ್ ಗಳಿಂದ ಹರಿಯಾಣ ವಿರುದ್ಧ ಜಯ ಗಳಿಸಿತು. ಇನ್ನುಳಿದ ಪಂದ್ಯಗಳಲ್ಲಿ ರಾಜಸ್ಥಾನ 11 ರನ್‌ಗಳಿಂದ ಜಾರ್ಖಂಡ್‌ಗೆ, ದೆಹಲಿ 67 ರನ್‌ಗಳಿಂದ ಕೇರಳಕ್ಕೆ ಸೋಲುಣಿಸಿತು. ಆಂಧ್ರ 9 ವಿಕೆಟ್‌ಗಳಿಂದ ಮಹಾರಾಷ್ಟ್ರ ಎದುರು, ಚಂಡೀಗಢ 21 ರನ್‌ಗಳಿಂದ ತೆಲಂಗಾಣ ಎದುರು ಗೆದ್ದವು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 18 ಓವರ್‌ಗಳಲ್ಲಿ 3 ವಿಕೆಟ್‌ಗೆ 238 (ವರ್ಷಾ ಯು. 118, ಕಾವ್ಯ ಎನ್.ಆರ್. 46, ಗಂಗಾ 30; ಮೆಹಕ್ ಲಾಕ್ರಾ 40ಕ್ಕೆ 1). ಪಶ್ಚಿಮ ಬಂಗಾಳ: 18 ಓವರ್‌ಗಳಲ್ಲಿ 7 ವಿಕೆಟ್‌ಗೆ 64 (ನಾಸಿರಾ ಖತೂನ್ ಔಟಾಗದೆ 13, ಪ್ರತಿಮಾ ಘೋಷ್ 10; ಗಂಗಾ 8ಕ್ಕೆ 4, ದೀಪಿಕಾ 8ಕ್ಕೆ 2). ಫಲಿತಾಂಶ: ಕರ್ನಾಟಕಕ್ಕೆ 174 ರನ್ ಜಯ

ಸೈಕ್ಲಿಂಗ್: ಸುಜಲ್‌ಗೆ ಬೆಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸುಜಲ್ ಜಾಧವ್ ಅವರು ರಾಷ್ಟ್ರೀಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಮಹಾರಾಷ್ಟ್ರದ ನಾಸಿಕ್‌ನ ಸಿನ್ನರ್‌ನಲ್ಲಿ ನಡೆಯುತ್ತಿರುವ ಚಾಂ-ಪಿಯನ್‌ಷಿಪ್‌ನಲ್ಲಿ ಸೋಮವಾರ 16 ವರ್ಷದೊಳಗಿನ ಬಾಲಕರ 40 ಕಿಲೊ ಮೀಟರ್ ವೈಯಕ್ತಿಕ ರೋಡ್ ರೇಸ್‌ನಲ್ಲಿ ಸುಜಲ್ 1 ತಾಸು 31 ನಿಮಿಷ 52 ಸೆಕೆಂಡುಗಳಲ್ಲಿ ಗುರಿ ತಲುಪಿದರು.

18 ವರ್ಷದೊಳಗಿನವರ ತಂಡ ವಿಭಾಗದ ಬಾಲಕರ 40 ಕಿ.ಮೀ ಟೈಮ್ ಟ್ರಯಲ್‌ನಲ್ಲಿ ರಾಘವೇಂದ್ರ ವಂದಾಲ, ಪ್ರತಾಪ ಪಡಚಿ, ಉದಯ ಗುಳೇದ ಮತ್ತು ಲಕ್ಷ್ಮೀಶ ಎಚ್.ಆರ್. ಅವರ-ನ್ನೊಳಗೊಳಗೊಂಡ ತಂಡವು ಕಂಚು ಗೆದ್ದಿತು. ಕರ್ನಾಟಕದ ಈ ತಂಡವು 53 ನಿ. 30.94 ಸೆಕೆಂಡುಗಳಲ್ಲಿ ಸ್ಪರ್ಧೆ ಪೂರ್ಣಗೊಳಿಸಿತು.

ರೇಂಜರ್ಸ್– ಓಂ ಸಾಯಿ ಪಂದ್ಯ ಡ್ರಾ

ಬೆಂಗಳೂರು: ರೇಂಜರ್ಸ್ ಮತ್ತು ಓಂ ಸಾಯಿ ಕ್ಲಬ್, ಧಾರವಾಡ ತಂಡಗಳ ನಡುವೆ ಇಲ್ಲಿ ನಡೆದ ರಾಜ್ಯ ಎ ಡಿವಿಷನ್ ಹಾಕಿ ಟೂರ್ನಿಯ ಪಂದ್ಯವು 3-3ರ ಗೋಲುಗಳ ಡ್ರಾನಲ್ಲಿ ಅಂತ್ಯವಾಯಿತು.

ಸೋಮವಾರ ನಡೆದ ಪಂದ್ಯದಲ್ಲಿ ರೇಂಜರ್ಸ್ ಹಾಕಿ ಕ್ಲಬ್ ಪರ ಸುರೇಶ್ (9 ಮತ್ತು 22ನೇ ನಿಮಿಷ) ಎರಡು ಗೋಲು ದಾಖಲಿಸಿದರು. ಧರ್ಮೇಂದ್ರ (7ನೇ ನಿಮಿಷ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಓಂ ಸಾಯಿ ತಂಡಕ್ಕಾಗಿ ಅರುಣ್ (12, 46ನೇ ನಿಮಿಷ) ಎರಡು ಗೋಲು ಗಳಿಸಿದರು. ಪುರುಷೋತ್ತಮ್ (35ನೇ ನಿ.) ಒಂದು ಗೋಲು ಹೊಡೆದರು.

ಮಂಗಳವಾರ ನಡೆಯುವ ಪಂದ್ಯಗಳಲ್ಲಿ ಆರ್‌ಬಿಐ–ಯಂಗ್‌ಸ್ಟಾರ್, ರೈಸಿಂಗ್ ಸ್ಟಾರ್ – ಬ್ಲ್ಯೂ ಆ್ಯಂಡ್ ವೈಟ್ ಹಾಕಿ ಕ್ಲಬ್ ಸೆಣಸಲಿವೆ.

Dual Front SRS Airbags, ABS with EBD & Pretensioner Force Limiter [PTFL] standard across all Toyota cars

TALK TO TOYOTA
FOR ENQUIRIES & FEEDBACK CONTACT
TOLL FREE NO.: 1800-309-0001
DIRECT NO.: +91-80-4505-9000

UNMATCHED WARRANTY*
3 years / 100000 kms
*Conditions apply

TOYOTA TRUST Buy | Sell | Exchange - Used car · TOYOTA FINANCIAL SERVICES · Q SERVICE · T-CONNECT · 24x7 ROADSIDE ASSISTANCE Care on the Move · Toyota Mobility Service Individual Subscription Corporate Leasing

KARNATAKA: Bangalore: Nandi Toyota, (Banashankari 2nd Stage), Ph: 7022340713; Nandi Toyota (Banaswadi) Ph: 7022340713; Nandi Toyota (Bannerghatta Main Road) Ph: 7022340713; Nandi Toyota (Bommanahalli), Ph: 7022340713; Nandi Toyota (Hosur Road), Ph: 9945255800; Nandi Toyota (Kanakapura Main Road), Ph: 9740409858; Nandi Toyota, (Queens Road), Ph: 9741310066; Nandi Toyota, (Whitefield), Ph: 7022340713; Ravindu Toyota (K R Puram), Ph: 8058245555; Ravindu Toyota (Magadi Road), Ph: 8058245555; Ravindu Toyota (Marathahalli), Ph: 8058245555; Ravindu Toyota (Rajajinagar), Ph: 8058245555; Ravindu Toyota (Victoria Road), Ph: 8058245555; Ravindu Toyota (Yeshwanthpur), Ph: 8058245555; Viva Toyota (Airport Road, Hunasamarahalli), Ph: 9900030617; Viva Toyota (Hebbal), Ph: 9900027736; Viva Toyota (Kogilu,Yelahanka), Ph: 9900030617; Viva Toyota (Mysore Road), Ph: 9900030620; Viva Toyota (Vidayaranyapura), Ph: 9900027736; Bagalkot: Shodha Toyota (Navnagar), Ph: 8147599463; Belgaum: Shodha Toyota (Shahapur), Ph: 8147599461; Shodha Toyota (Poona-Bangalore Road), Ph: 8861000294; Bellary: BJS Toyota (Bisalahalli Road), Ph: 7829927957/58; Bijapur: Shodha Toyota (Chitradurga Sholapur Road NH50), Ph: 9606484983; Chikkamagaluru: Shakti Toyota (Kadur Bypass Road), Ph: 9686652728; Davangere: Shodha Toyota (Harihar Road), Ph: 9008952277; Gulbarga: Karuna Toyota (Bilgundi Garden), Ph: 7829990026; Raichur: Karuna Toyota (Near Yermers Camp Cross, Hyderabad Rd), Ph: 7829990021; Hassan: Shakti Toyota (Katihalli Industrial Area), Ph: 9686652728; Hospet: BJS Toyota (Rajeev Nagar), Ph: 7829927905/30; Hubli: Shodha Toyota (Hubli-Dharwad Road), Ph: 9606454723; Kodagu: Palace Toyota (Kushalnagara), Ph: 7022671919; Kolar: Ravindu Toyota (P C Halli), Ph: 8058245555; Madikeri: Palace Toyota (Cauvery Hall), Ph: 7022671919; Mandya: Palace Toyota, (Gutahlu Grama), Ph: 9538874907; Mangalore: United Toyota (Bunt's Hostel), Ph: 9686687581, United Toyota (Padil), Ph: 9686687581; Puttur: United Cars Private Limited, Ph: 9686687581; Mysore: Palace Toyota, (Hootagalli), Ph: 9538874936; Palace Toyota (Krishnamurthy Puram), Ph: 9538874906; Shivamogga: Shakti Toyota (Bypass Road) Ph: 9686652728; Sagar: Shakti Toyota (BH Road), Ph: 08183200402; Tumkur: Ravindu Toyota (Sadashivnagar), Ph: 8058245555; Udupi: United Toyota (Udyavara) Ph: 9686687581.